ಐಕ್ಯರಂಗ

ವಾರಪತ್ರಿಕೆ

ಭಾರತ ಕಮ್ಯೂನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 6 | ಸಂಚಿಕೆ 20 | ಮೇ 13, 1984 | ಬೆಲೆ ರೂ. 1-50

ಮೇ ದಿನದ ಶುಭಾಶಯಗಳು

1984 ರ ಐಕ್ಯರಂಗ ಮೇ ದಿನದ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡುತ್ತಿರುವ ಈ ಸಂದರ್ಭದಲ್ಲಿ ಐಕ್ಯರಂಗ ಸಂಪಾದಕ ಮಂಡಳಿಯು ತನ್ನ ಓದುಗರಿಗೂ, ಜಾಹೀರಾತುದಾರರಿಗೂ, ಸಹಕರಿಸಿದವರೆಲ್ಲರಿಗೂ ಮೇ ದಿನದ ಶುಭಾಶಯಗಳನ್ನು ಕೋರುತ್ತದೆ. ಜಾಹೀರಾತು ನೀಡಿ ಪ್ರೋತ್ಸಾಹಿಸಿದವರಿಗೆ ನಮ್ಮ ಕೃತಜ್ಞತೆಗಳು. ಅಂದವಾಗಿ, ಸಕಾಲದಲ್ಲಿ ಮುದ್ರಿಸಿಕೊಟ್ಟ ಉಮಾ ಪ್ರಿಂಟರ್ಸ್‌ನ ಮಾಲೀಕರಿಗೂ ನಮ್ಮ ವಂದನೆಗಳು.

ಅನಿವಾರ್ಯ ಕಾರಣಗಳಿಂದಾಗಿ ನಮ್ಮ ಮೇ 20 ರ ಸಂಚಿಕೆ ಪ್ರಕಟವಾಗುವುದಿಲ್ಲ.

ಸಂಪಾದಕ ಮಂಡಳಿ

ಎದ್ದೇಳಿ, ಗುರಿಸಾಧನೆಗೆ ಒಂದಾಗಿ ಮುಂದೆ ಸಾಗೋಣ

ಎನ್. ಕೆ. ಉಪಾಧ್ಯಾಯ

ಕಳೆದ ಮೇ ದಿನದಿಂದ ಇಂದಿನ ವರೆಗೆ ಒಂದು ವರ್ಷದಲ್ಲಿ, ಜಗತ್ತಿನ, ದೇಶದ ಹಾಗೂ ರಾಜ್ಯದ ರಾಜಕೀಯ ರಂಗದಲ್ಲಿ ಹಲವಾರು ಬದಲಾವಣೆಗಳಾಗಿವೆ. ಅವುಗಳಿಂದ ನಾವು ಹೆಮ್ಮೆ ಪಡೆದು ಇನ್ನೂ ಹೆಚ್ಚು ಉತ್ಸಾಹದಿಂದ ನಮ್ಮ ಐಕ್ಯ ಹೋರಾಟವನ್ನು ತೀವ್ರಗೊಳಿಸಲು ಹುರುಪು ಹುಮ್ಮಸ್ಸು ಪಡೆದು ಮುಂದಾಗೋಣ.

ಅಮೇರಿಕನ್ ಸಾಮ್ರಾಜ್ಯ ಶಾಹಿಯ ಯುದ್ಧ ಖೋರ ನೀತಿಯ ವಿರುದ್ಧ ಜಗತ್ತಿನಾದ್ಯಂತ ಪ್ರಬಲವಾದ ಚಳವಳಿ ನಡೆಯುತ್ತಿದೆ. ಯುದ್ಧದ ವಿರುದ್ಧ, ಶಾಂತಿಗಾಗಿ ಮಹಿಳೆಯರನ್ನೊಳಗೊಂಡು ಸಾರ್ವಜನಿಕರೂ, ಕಾರ್ಮಿಕರೂ ಒಕ್ಕೊರಲಿನ ಪ್ರತಿಭಟನೆ ಮಾಡುತ್ತಿದ್ದಾರೆ. ಮೂರನೇ ಮಹಾಯುದ್ಧದ ಮೂಲಕ ಸಮತಾವಾದಿ ಜಗತ್ತನ್ನು ನಾಶ ಗೊಳಿಸುವ ರೇಗನ್ ಸರಕಾರದ ಧೋರಣೆಯ ವಿರುದ್ಧ ಪ್ರಚಂಡ ಜನಜಾಗೃತಿಯ ಪ್ರತಿಭಟನೆ ಬಲಗೊಳ್ಳುವಂತೆ ಮಾಡಲು ರಶ್ಯಾ ದೇಶದ ಸರಕಾರದ ದೃಢನಿಲುವೂ, ಅಲಿಪ್ತ ರಾಷ್ಟ್ರಗಳ ಧೋರಣೆ ಸಹಕಾರಿಯಾಗಿದೆ. ಜಗತ್ತಿನ ದುಡಿಯುವ ವರ್ಗ ಈ ಹೋರಾಟದ ಮುಂದಳದಲ್ಲಿರುವುದು ಸ್ವಾಗತಾರ್ಹ.

ನಮ್ಮ ದೇಶದಲ್ಲಿ ಇಂದಿರಾ ಗಾಂಧಿಯ ಏಕ ವ್ಯಕ್ತಿ ಸರ್ವಾಧಿಕಾರದ ಹಿರಿ ಬಂಡವಳಶಾಹಿ-ಭೂಮಾಲಕ ಪರ ನೀತಿಯ ವಿರುದ್ಧ ರೈತ-ಕಾರ್ಮಿಕರೆಲ್ಲ ಒಗ್ಗಟ್ಟಾಗಿ ಹೋರಾಡುತ್ತಿರುವುದು ಶುಭ ಚಿನ್ಹೆ. ಕೇಂದ್ರ ಕಾರ್ಮಿಕ ಸಂಘಟನೆಗಳ ರಾಷ್ಟ್ರೀಯ ಆಂದೋಳನ ಸಮಿತಿ ತನ್ನ ಎರಡನೇ ಸಮಾವೇಶವನ್ನು ದಿಲ್ಲಿಯಲ್ಲಿ ಸೇರಿಸಿ, ಲಾಕೌಟ್, ಕಾರ್ಖಾನೆ ಮುಚ್ಚುವಿಕೆ, ಲೇ ಆಫ್, ಕನಿಷ್ಟ ವೇತನ ನಿರ್ಣಯ ಮೊದಲಾದ ಬೇಡಿಕೆಗಳ ಸಲುವಾಗಿ ದೇಶಾದ್ಯಂತ ಪ್ರತಿಭಟನೆಯನ್ನೂ ಒಂದು ಲಕ್ಷಕ್ಕೂ ಹೆಚ್ಚು ಜನರ ಪಾರ್ಲಿಮೆಂಟ್ ಚಲೋ ಕಾರ್ಯಕ್ರಮವನ್ನೂ ಪ್ರಭಾವಿತವಾಗಿ ಆಚರಿಸಿದ್ದಾರೆ ಅಖಿಲ ಭಾರತ ಜ್ಯೂಟ್ (ನಾರು) ಕೆಲಸಗಾರರ, ಬಂದರ ಕೆಲಸಗಾರರ ಹೋರಾಟ ಹಲವಾರು ದಿವಸ ನಡೆದು ಯಶಸ್ವಿಯಾಗಿ ಪರ್ಯವಸಾನ ಹೊಂದಿದೆ. ಇಂದಿರಾ ಕಾಂಗ್ರೆಸ್ಸಿನ ಸಂಘಟನೆಗಳೂ ಇಂಥ ಹೋರಾಟಗಳಲ್ಲಿ ಪಾಲ್ಗೊಂಡಿರುವುದು ವೈಶಿಷ್ಟ್ಯವಾಗಿದೆ. ಹೀಗೆಯೇ ಕೇರಳದ ವಿದ್ಯುಚ್ಛಕ್ತಿ ಕೆಲಸಗಾರರ ಹಾಗೆಯೇ ಇತರ ರಾಜ್ಯಗಳಲ್ಲೂ ಲಕ್ಷಾವಧಿ ಕೆಲಸಗಾರರು ಐಕ್ಯ ಹೋರಾಟ ನಡೆಸಿ ಹಲವಾರು ಬೇಡಿಕೆಗಳನ್ನು ಪಡೆಯಲು ಸಾಧ್ಯವಾಗಿದೆ. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಕಾರ್ಮಿಕ ವಿರೋಧಿ ನೀತಿಯಾದ ಅಂದರೆ ಕಾರ್ಮಿಕರ ವೇತನ ಹೆಚ್ಚಿಸಿದರೆ, ಅತಿಪ್ರಸರಣ. ಬೆಲೆ ಏರಿಕೆಗೆ ಕಾರಣವಾಗುತ್ತಿದೆಂಬ ನಿಲುವೆಯ ವಿರುದ್ಧ ದೀರ್ಘ ಹೋರಾಟಗಳು ನಡೆದಿರುವುದೂ, ಅಂಥ ಹೋರಾಟಗಳ ಮೂಲಕ ಸರಕಾರದ ಧೋರಣೆಯನ್ನು ಸೋಲಿಸಿ ಕಾರ್ಮಿಕರು ಜಯಗಳಿಸಿರುವುದೂ ಅಭಿನಂದನೀಯ. ಇದರ ಪ್ರತಿಫಲವಾಗಿ ಕಲ್ಲಿದ್ದಲು, ಸಾರ್ವಜನಿಕ ಕ್ಷೇತ್ರ, ಜೀವ ವಿಮೆ, ಬ್ಯಾಂಕ್ ಮೊದಲಾದ ಕ್ಷೇತ್ರಗಳ ನೌಕರರು ಸುದೀರ್ಘ ಹೋರಾಟದ ಸಿದ್ಧತೆ ಮಾಡುತ್ತಿರುವುದು ಸ್ವಾಗತಾರ್ಹ. ಇಂಥ ಐಕ್ಯ ಹೋರಾಟಗಳಿಂದಾಗಿ ಕಾರ್ಮಿಕರಲ್ಲಿ ಹೊಸ ಸ್ಫೂರ್ತಿ ಉತ್ಸಾಹ ಕಾಣಬಹುದಾಗಿದೆ.

ಹೋದ ವರ್ಷ ಕರ್ನಾಟಕ ಆಂಧ್ರಗಳಲ್ಲಿ ಕಾಂಗ್ರೆಸಿಗಾದ ಸೋಲಿನಿಂದಾಗಿ, ಕಾಶ್ಮೀರದ ಮುಖ್ಯ ಮಂತ್ರಿ ಫರೂಕ್ ಅಬ್ದುಲ್ಲಾರವರ ಕಾಂಗ್ರೆಸ್ ವಿರೋಧಿ ನೀತಿಯಿಂದಾಗಿ, ಕಾಂಗ್ರೆಸ್ ವಿರೋಧಿ ರಾಜ್ಯಗಳ ಮುಖ್ಯ ಮಂತ್ರಿಗಳನ್ನು ಒಂದೆಡೆ ಸೇರಿಸಿ ಪ.ಬಂಗಾಲ ತ್ರಿಪುರಾಗಳ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದಲ್ಲಿರುವ ಎಡರಂಗ ಸರಕಾರ ಈ ಮೊದಲೇ ಪ್ರಾರಂಭಿಸಿದ್ದ ಕೇಂದ್ರ-ರಾಜ್ಯ ಸಂಬಂಧ, ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ಒದಗಿಸುವ ಚಳುವಳಿ ಮುಂದುವರಿಸಿ ಕೇಂದ್ರ ಸರಕಾರ ಇದರ ಸಲುವಾಗಿ ಸರ್ಕಾರಿಯಾ ಸಮಿತಿ ನೇಮಿಸುವಂತೆ ಮಾಡಲಾಗಿದೆ. ಇದರ ಜೊತೆಯಲ್ಲೇ 17 ವಿರೋಧ ಪಕ್ಷಗಳನ್ನೆಲ್ಲ ಸೇರಿಸಿ ವಿಜಯವಾಡ, ದಿಲ್ಲಿ, ಶ್ರೀನಗರ, ಕಲ್ಕತ್ತಾಗಳಲ್ಲಿ ಸಮಾವೇಶ ನಡೆಸಿ, ಬೆಲೆಯೇರಿಕೆ, ನಿರುದ್ಯೋಗ ಹಾಗೆಯೇ ಜನತೆಯ ಇತರ ಬೇಡಿಕೆಗಳ ಸಲುವಾಗಿ ದೇಶಾದ್ಯಂತ ಪ್ರತಿಭಟನೆ. ರಾಜ್ಯ ಮಟ್ಟದ ಸಮಾವೇಶಗಳನ್ನು ನಡೆಸಿ, ಜನರ ತುರ್ತು ಬೇಡಿಕೆಗಳ ಸಲುವಾಗಿ ಜನ ಜಾಗೃತಿ ಉಂಟು ಮಾಡಲು ಸಾಧ್ಯವಾಗಿದೆ. ಏಪ್ರಿಲ್ 17 ರಂದು ದಿಲ್ಲಿಯಲ್ಲಿ ವಿರೋಧ ಪಕ್ಷಗಳ ಸಮಾವೇಶ ನಡೆಸಿ ಉಗ್ರ ಹೋರಾಟದ ಕಾರ್ಯಕ್ರಮ ಹಾಕಿ ಕೊಳ್ಳಲು ಸಾಧ್ಯವಾಗಿದೆ. ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು, ಇತರ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳನ್ನು ಕನಿಷ್ಟ ಕಾರ್ಯಕ್ರಮದಡಿಯಲ್ಲಿ ಒಂದೆಡೆ ಸೇರಿಸಿ ದೇಶಾದ್ಯಂತ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಯಾಗಿದೆ.

ನಮ್ಮ ರಾಜ್ಯದಲ್ಲಿ ವಿರೋಧ ಪಕ್ಷಗಳ ಸಮಾವೇಶದ ಆದೇಶದಂತೆ ಪ್ರತಿಭಟನಾ ದಿನಾಚರಣೆಯನ್ನೂ ಮಾರ್ಚ 25 ರಂದು ರಾಜ್ಯ ಮಟ್ಟದ ಸಮಾವೇಶವನ್ನು ನಡೆಸಲಾಗಿದೆ. ರಾಷ್ಟ್ರೀಯ ಚಳುವಳಿ ಸಮಿತಿಯ ಆದೇಶದಂತೆ, ಲಾಕೌಟ್, ಲೇ ಆಫ್, ಕಾರ್ಖಾನೆ ಮುಚ್ಚುವಿಕೆ, ಕೃಷಿ ಕಾರ್ಮಿಕರಿಗೆ ಹೆಚ್ಚಿನ ವೇತನಗಳ ಸಲುವಾಗಿ ಪ್ರತಿಭಟನಾ ದಿನವನ್ನು ಸಮಾವೇಶವನ್ನೂ ನಡೆಸಲು ಸಾಧ್ಯವಾಗಿದೆ.

ಕಳೆದ ಒಂದು ವರ್ಷದಲ್ಲಿ ನಮ್ಮ ರಾಜ್ಯದ ಸಂಘಟಿತ-ಅಸಂಘಟಿತ ಕಾರ್ಮಿಕರ ಹೋರಾಟದ ಫಲವಾಗಿ ಜೀವನಾವಶ್ಯಕ ವಸ್ತುಗಳ ಬೆಲೆ ಹೆಚ್ಚಳಕ್ಕನುಗುಣವಾಗಿ ತುಟ್ಟಿ ಭತ್ತೆ ಪಡೆಯುವಂತಾಗಿದೆ. ಹೋದ ವರ್ಷ ಜುಲೈ 26 ರಂದು ಸಿ. ಐ. ಟಿ. ಯು. ಆದೇಶದಮೇರೆಗೆ ರಾಜ್ಯಾದ್ಯಂತ ನಡೆಸಿದ ಮುಷ್ಕರ-ಪ್ರತಿಭಟನೆಗಳಿಂದಾಗಿ ರಾಜ್ಯ ಸರಕಾರ 26 ಕೈಗಾರಿಕೆಗಳಿಗೆ ಅನ್ವಯವಾಗುವಂಥ ಕನಿಷ್ಟ ಕೂಲಿ ಪ್ರಕಟನೆ ಪ್ರಕಟ ಮಾಡುವಂತೆ ಮಾಡಲು ಸಾಧ್ಯವಾಗಿದೆ. ಕರ್ನಾಟಕದ ಸಂಘಟಿತ ಅಸಂಘಟಿತ ಕಾರ್ಮಿಕರಿಗೆ ದೊರೆತ ಪ್ರಥಮ ವಿಜಯ ಇದಾಗಿದೆ. ಇದರಂತೆಯೇ ಲೋಕೋಪಯೋಗಿ ಇಲಾಖೆಯಲ್ಲಿಯ ಕೆಲಸಗಾರರು ಸಿ.ಐ.ಟಿ.ಯು. ನೇತೃತ್ವದಲ್ಲಿ ರಾಜ್ಯ ಮಟ್ಟದ ಸಂಘ ಕಟ್ಟಿ ಹೋರಾಡಿದ ಪ್ರತಿಫಲವಾಗಿ ಸಾವಿರಾರು ದಿನಗೂಲಿ ಕೆಲಸಗಾರರನ್ನು ಕಾಯಂ ಮಾಡುವಂಥ ಕ್ರಮವನ್ನು ರಾಜ್ಯ ಸರಕಾರ ತೆಗೆದುಕೊಳ್ಳುವಂತಾಗಿದೆ.

ನಾಲ್ಕು ಪ್ಲೈವುಡ್ ಕಾರ್ಖಾನೆಗಳು ಕೆಲಸಗಾರರ ಸಮನ್ವಯ ಸಮಿತಿ ನೇಮಿಸಿ ಹೋರಾಡಿದ ಫಲವಾಗಿ ದಾಂಡೇಲಿ, ಧಾರವಾಡ, ಹಂಗಾರಕಟ್ಟೆ ಕೆಲಸಗಾರರಿಗೆಲ್ಲ ಜೀವನಾವಶ್ಯಕ ಸೂಚ್ಯಾಂಕದಂತೆ ತುಟ್ಟಿ ಭತ್ತೆಯನ್ನು ಪ್ರಥಮ ಬಾರಿ ಕೊಡಿಸಲು ಸಾಧ್ಯವಾಗಿದೆ. ಆರು ಲಕ್ಷಕ್ಕೂ ಮೇಲ್ಪಟ್ಟ ಬೀಡಿ ಕೆಲಸಗಾರರಿಗೂ ಸಹ ಅಂಥ ತುಟ್ಟಿಭತ್ತೆ ಪ್ರಥಮ ಬಾರಿ ಒದಗಿಸಲು ಸಾಧ್ಯವಾಗಿದೆ.

ಹರಿಹರ ಪಾಲಿಫೈಬರ್, ಗ್ವಾಲಿಯರ್ ರಾಯನ್ಸ, ಹರಿಹರ ಕಿರ್ಲೋಸ್ಕರ್, ಹುಬ್ಬಳ್ಳಿಯ ಸುಂದತ್ತಾ, ಬಿಡಿಕೆ, ದಾಂಡೇಲಿಯ ವೆಸ್ಟ್‌ಕೋಸ್ಟ್ ಪೇಪರ್ ಮಿಲ್, ಪ್ಲೈವುಡ್, ಇಲೆಕ್ಟ್ರೋ ಮೆಟಲರ್ಜಿಕಲ್ ವರ್ಕ್ಸ್, ಬೆಂಗಳೂರಿನ ಕ್ಯಾಪ್ ಸ್ಟೀಲ್ ಕ್ವಾಲಿಟಿ ಬಿಸ್ಕಟ್ಸ್, ಸೂರಿ ಮತ್ತು ನಾಯರ [illegible] ಕೃಷ್ಣರಾಜಪುರ, ಮೈಸೂರು ರೋಡಿನ ಹಲವಾರು ಕಾರ್ಖಾನೆಗಳ ಕಾರ್ಮಿಕರೆಲ್ಲ ದೀರ್ಘಕಾಲದ ಹೋರಾಟ ನಡೆಸಿ ಜಯಗಳಿಸುವಂತಾಗಿದೆ. ಕೆಲಸದಿಂದ ತೆಗೆಯಲ್ಪಟ್ಟ ಸಸ್ಪೆಂಡಾದ ಕೆಲಸಗಾರರನ್ನೂ ಮತ್ತೆ ಕೆಲಸದ ಮೇಲೆ ತೆಗೆದುಕೊಳ್ಳುವಂತೆ ಮಾಡಲು ಸಾಧ್ಯವಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಹಂಚು ಕೆಲಸಗಾರರ 75 ದಿವಸಗಳ ಹಾಗೆಯೇ ಕಾಫಿ ತೋಟ ಕಾರ್ಮಿಕರ 6 ದಿವಸಗಳ ಮುಷ್ಕರಗಳು ಚರಿತ್ರಾರ್ಹವಾಗಿದೆ.

ಇತ್ತೀಚೆಗೆ ನಡೆದ ಚುನಾವಣೆಯಲ್ಲಿ, ಮಾಲಕರ ಮತ್ತು ಎಫ್.ಎಂ. ಖಾನನ ಜಂಟೀ ಕುತಂತ್ರವನ್ನು ಎದುರಿಸಿ, ಸಿ. ಐ. ಟಿ. ಯು. ಅಧ್ಯಕ್ಷರಾದ ಸೂರ್ಯನಾರಾಯಣ ರಾವ್ ಅವರನ್ನು ಪ್ರಚಂಡ ಬಹುಮತದಿಂದ ಆರಿಸಿತಂದ ನೈಕೋ ಕಾರ್ಮಿಕರ ಧೀರ ಹೆಜ್ಜೆ ಬೆಂಗಳೂರಿನ ಹಾಗೆಯೇ ಇಡೀ ಕರ್ನಾಟಕದ ಕಾರ್ಮಿಕರಲ್ಲಿ ಹೊಸ ಚೈತನ್ಯ ತುಂಬಿರುವುದರಲ್ಲಿ ಸಂಶಯ ವಿಲ್ಲ.

ರಾಜ್ಯದ ನಗರ ಸಭೆ ಕೆಲಸಗಾರರು ತಮ್ಮ ಒಕ್ಕೂಟ ರಚಿಸಿ ಬೇಡಿಕೆ ದಿನವನ್ನಾಚರಿಸಿ ಹಲವಾರು ಬೇಡಿಕೆಗಳನ್ನು ಪಡೆದಿದ್ದಾರೆ.

ಕರ್ನಾಟಕದ ಕಾರ್ಮಿಕವರ್ಗ ತನ್ನ ಆರ್ಥಿಕ ಬೇಡಿಕೆಗಳಿಗಾಗಿಯಷ್ಟೇ ಹೋರಾಡುತ್ತಿಲ್ಲ, ಜನತೆ ಎದುರಿಸುತ್ತಿರುವ ಇತರ ಬೇಡಿಕೆಗಳ ಸಲುವಾಗಿಯೂ, ಯುದ್ಧವನ್ನು ವಿರೋಧಿಸಿ ಶಾಂತಿ ಪಾಲನೆಗಾಗಿಯೂ ಹೋರಾಡುತ್ತಿದೆ. ಕಾರ್ಮಿಕರಿಗೆ ಸೌಹಾರ್ದತೆ ವ್ಯಕ್ತ ಮಾಡಲೂ ಹೋರಾಡುತ್ತಿದೆಂಬುದನ್ನು ಈ ವರ್ಷ ತೋರಿಸಿ ಕೊಟ್ಟಿದೆ.

ಸುಂದತ್ತಾ, ಬಿ.ಡಿ.ಕೆ, ಇಲೆಕ್ಟ್ರಾನಿಕ್ಸ್ ಮೊದಲಾದ ಕಾರ್ಖಾನೆಯ ಕಾರ್ಮಿಕರು ದೀರ್ಘ ಹೋರಾಟ ನಡೆಸುತ್ತಿದ್ದಾಗ ಅವರಿಗೆ ಬೆಂಬಲ ನೀಡಲು, ಕನಿಷ್ಟ ವೇತನ ಜಾರಿಗೊಳಿಸಲು ರಾಜ್ಯ ಸರಕಾರ ಹಿಂದೇಟು ಹಾಕುತ್ತಿದ್ದಾಗ, ಅದರ ಕುರಿತು ಪ್ರಕಟನೆ

[30 ನೇ ಪುಟ ನೋಡಿ]

ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ

ಕರ್ನಾಟಕದಲ್ಲಿ ಕಳೆದ ನಾಲ್ಕು ದಶಕಗಳ ಬೆಳವಣಿಗೆಯನ್ನು ವೀಕ್ಷಿಸಿದಲ್ಲಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ ಅತ್ಯಂತ ಮಹತ್ವದ್ದಾಗಿತ್ತೆಂದು ಎದ್ದು ಕಾಣುತ್ತದೆ. ದೇಶದ ಸ್ವಾತಂತ್ರ್ಯ ಚಳುವಳಿಯಲ್ಲೂ ಜವಾಬ್ದಾರಿ ಸರಕಾರದ ಹೋರಾಟದಲ್ಲೂ, ಕರ್ನಾಟಕ ಏಕೀಕರಣ ಚಳುವಳಿಯಲ್ಲೂ ರೈತ ಕಾರ್ಮಿಕರ ಸಂಘಟನೆಯಲ್ಲೂ ಭೂ ಸುಧಾರಣೆ ಮತ್ತಿತರ ಎಲ್ಲ ವಿಭಾಗದ ಜನರಿಗೆ ಸಂಬಂಧಿಸಿದ ಪ್ರಶ್ನೆಗಳಲ್ಲೂ ಕಮ್ಯೂನಿಸ್ಟ್ ಪಾರ್ಟಿಯು ಮುಖ್ಯ ಪಾತ್ರ ವಹಿಸಿದೆಯೆಂದು ಹೇಳಬಹುದು.

1942ರಲ್ಲಿ ಕಮ್ಯೂನಿಸ್ಟ್ ಪಾರ್ಟಿ ಸುಸಂಘಟಿತವಾಗಿ ಕೆಲಸ ಆರಂಭಿಸಿತು. ಅಲ್ಲಿಯ ತನಕ ಕೆಲವರು ಪಾರ್ಟಿಯ ಹೆಸರಲ್ಲಿ ಕೆಲಸ ಮಾಡುತ್ತಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸುಮಾರು 1939 ರಿಂದ ಪಾರ್ಟಿ ಘಟಕವಿತ್ತೆಂದು ತಿಳಿದಿದೆ.

ಆಗ ಕರ್ನಾಟಕವೆಂಬುದಿರಲಿಲ್ಲ. ಮೈಸೂರು ಸ್ಟೇಟ್‌ನಲ್ಲಿ ಮೈಸೂರು ಮಹಾರಾಜರ ಆಡಳಿತ ನಡೆಯುತ್ತಿತ್ತು. ಕೊಡಗು ಪ್ರತ್ಯೇಕವಾಗಿತ್ತು. ದಕ್ಷಿಣ ಕನ್ನಡ ಮತ್ತು ಬಳ್ಳಾರಿ ಜಿಲ್ಲೆಗಳು ಮದ್ರಾಸ್ ಪ್ರಾಂತದಲ್ಲೂ, ಉತ್ತರ ಕನ್ನಡ, ಧಾರವಾಡ, ಬೆಳಗಾಂ ಮತ್ತು ಬಿಜಾಪುರ ಜಿಲ್ಲೆಗಳು ಮುಂಬಯಿ ಪ್ರಾಂತದಲ್ಲೂ ಇದ್ದವು. ಗುಲ್ಬರ್ಗ, ರಾಯಚೂರು ಮತ್ತು ಬೀದರ್ ಜಿಲ್ಲೆಗಳು ಹೈದರಾಬಾದ್ ನಿಜಾಮನ ಆಡಳಿತೆಯಲ್ಲಿದ್ದವು. ಇದಲ್ಲದೆ ರಾಮದುರ್ಗ, ಜಂಘುಂಡಿ ಮುಂತಾದ ಹಲವು ಸಣ್ಣ ಪುಟ್ಟ ಸಂಸ್ಥಾನಗಳೂ ಇದ್ದುವು ವೆಂಬುದನ್ನು ಗಮನಿಸ ಬೇಕಾಗಿದೆ. ಹೀಗೆ ಹಂಚಿ ಹೋಗಿದ್ದ ಕನ್ನಡಿಗರನ್ನು ಒಂದು ಗೂಡಿಸಿ ಅವರನ್ನು ಒಂದೇ ಆಡಳಿತೆಯಲ್ಲಿ ತಂದು ಸಂಘಟಿಸುವ ಕೆಲಸದಲ್ಲಿ ಅನೇಕ ಸಮಸ್ಯೆಗಳು ಬಂದಿರುವುದರಲ್ಲಿ ಆಶ್ಚರ್ಯವೇನಿಲ್ಲ. ಇದನ್ನೆಲ್ಲಾ ಎದುರಿಸಿ ನಮ್ಮ ಪಾರ್ಟಿ ಕೆಲಸ ಮಾಡಿಕೊಂಡು ಬಂದಿದೆ.

ಆ ಕಾಲದಲ್ಲಿ ಯಾವ ರಾಜಕೀಯ ಪಕ್ಷವೂ ಇಡೀ ರಾಜ್ಯದ ಪಕ್ಷವಾಗಿರಲಿಲ್ಲ. ಮೈಸೂರು ಕಾಂಗ್ರೆಸ್ ಮತ್ತು ಕರ್ನಾಟಕ ಕಾಂಗ್ರೆಸ್ ಎಂಬ ಎರಡು ಸಂಸ್ಥೆಗಳಿದ್ದವು. ನಮ್ಮ ಪಾರ್ಟಿಯೊಂದೇ ಕರ್ನಾಟಕ ಕಮ್ಯೂನಿಸ್ಟ್ ಪಾರ್ಟಿಯೆಂಬ ಹೆಸರಲ್ಲಿ ಆರಂಭದಿಂದಲೂ ಕೆಲಸ ಮಾಡಿಕೊಂಡು ಬಂದಿದೆ. ಈಗ ಎಲ್ಲ ಪಾರ್ಟಿಗಳು ಕರ್ನಾಟಕವೆಂಬ ಹೆಸರನ್ನೇ ಬಳಸ ಬೇಕಾಗಿ ಬಂದಿದೆ.

ಕಾಂಗ್ರೆಸ್ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುವ ಎಲ್ಲ ವರ್ಗಗಳ ಒಗ್ಗೂಡಿಸಿಕೊಂಡ ರಾಷ್ಟ್ರೀಯ ಪಕ್ಷವೆಂಬ ಹೆಸರನ್ನು ಪಡೆದಿತ್ತು. ಕಮ್ಯೂನಿಸ್ಟರೂ ಅದರಲ್ಲಿ ಕೆಲಸ ಮಾಡುತ್ತಿದ್ದರು. ಕಾಂಗ್ರೆಸ್ ಅಹಿಂಸಾ ಧೋರಣೆಯನ್ನನುಸರಿಸುವುದೆಂದೂ, ಆದರೆ ಕಮ್ಯೂನಿಸ್ಟರು ಹಿಂಸೆಯನ್ನು ಆಚರಿಸುವವರೆಂದೂ, ಯಾವುದರಲ್ಲೂ ನಂಬಿಕೆಯಿಲ್ಲದವರೆಂದೂ ಹೇಳಲಾಗುತ್ತಿತ್ತು. ಆದರೂ ಕಮ್ಯೂನಿಸ್ಟರು ಯಾವ ತ್ಯಾಗ, ಬಲಿದಾನಕ್ಕೂ ಸಿದ್ಧವಿರುವವರೆಂದೂ, ಧೀರ ಹೋರಾಟಗಾರರೆಂದೂ ಎಲ್ಲರಿಗೂ ಮನವರಿಕೆಯಾಗಿತ್ತು. ಮುಖ್ಯವಾಗಿ ಆ ಕಾಲದಲ್ಲಿ ಸ್ವಾತಂತ್ರ್ಯ ಹೋರಾಟವೆಂದರೆ ಸತ್ಯಾಗ್ರಹ ನಡೆಸುವುದೆಂದಿತ್ತು. ಇದು ಸಾಲದೆಂದೂ ಈ ಹೋರಾಟದಲ್ಲಿ ರೈತ ಕಾರ್ಮಿಕ ವರ್ಗವನ್ನು ಒಳಪಡಿಸಿ ಕೊಳ್ಳಬೇಕೆಂದೂ ಕಮ್ಯೂನಿಸ್ಟ್ ಪಾರ್ಟಿಯು ಒತ್ತಾಯಿಸುತ್ತಿತ್ತು.

ಕಾರ್ಮಿಕರ ಮತ್ತು ರೈತರ ವರ್ಗ ಸಂಘಟನೆಗಳನ್ನು ಕಟ್ಟಿ ಅವರ ಬೇಡಿಕೆಗಳಿಗೆ ಹೋರಾಟ ನಡೆಸುತ್ತಿದ್ದುದಲ್ಲದೆ ಪಾರ್ಟಿಯು ರಾಜಕೀಯ ರಂಗದಲ್ಲೂ ಹೋರಾಡುತ್ತಿದ್ದು ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ತಿರುವನ್ನು ಕೊಟ್ಟಿತು.

ಆದರೆ 1942ರಲ್ಲಿ ನಮ್ಮ ಧೋರಣೆಗೂ ಕಾಂಗ್ರೆಸ್ ಧೋರಣೆಗೂ ವ್ಯತ್ಯಾಸ ಬಂದಿದ್ದರಿಂದ ನಮ್ಮ ಕೆಲಸಕ್ಕೆ ಸ್ವಲ್ಪ ತೊಂದರೆಯಾಯಿತು. ನಮ್ಮನ್ನು ಸಂಶಯಾತ್ಮಕ ದೃಷ್ಟಿಯಿಂದ ಕೆಲವರು ನೋಡಲಾರಂಭಿಸಿದರು. ಆದರೂ ನಾವು ಜನತೆಯ ಮಧ್ಯೆ ಹೋಗಿ ಅವರ ಸಮಸ್ಯೆಗಳನ್ನು ತೆಗೆದು ಕೊಂಡು ಹೋರಾಟ ನಡೆಸಿದ ಪರಿಣಾಮವಾಗಿ ನಮ್ಮ ಪಾರ್ಟಿಯು ಗಣನೀಯ ಪ್ರಗತಿ ಸಾಧಿಸಿತಲ್ಲದೆ ಸ್ವಾತಂತ್ರ್ಯ ಹೋರಾಟವನ್ನು ಬಲಗೊಳಿಸಲು ಸಾಧ್ಯವಾಯಿತು. ಎರಡನೇ ಮಹಾಯುದ್ಧದ ಕಾಲದಲ್ಲಿ ನಾವು ಬಂಧಿತ ನಾಯಕರ ಬಿಡುಗಡೆಯಾಗಬೇಕೆಂದು, ಆಹಾರ ಮತ್ತಿತರ ಪ್ರಶ್ನೆಗಳಲ್ಲಿ ಹೋರಾಟ ನಡೆಸಿ ಕಾರ್ಮಿಕರ ರೈತರ ವಿದ್ಯಾರ್ಥಿಗಳ ಸಂಘಟನೆಯನ್ನು ಕಟ್ಟಿ 1946ರಲ್ಲಿ ನಾವಿಕರ ಬಂಡಾಯ ನಡೆದಾಗ ನಮ್ಮ ಪಾರ್ಟಿಯು ದೇಶಾದ್ಯಂತ ಸಾರ್ವತ್ರಿಕ ಮುಷ್ಕರ ನಡೆಸಲು ಸಾಧ್ಯವಾಯಿತು.

ಬ್ರಿಟಿಷ್ ಸಾಮ್ರಾಜ್ಯ ಶಾಹಿಯನ್ನು ತೀವ್ರವಾಗಿ ಎದುರಿಸಿತು. ಅಧಿಕಾರ ವರ್ಗಾಯಿಸಿ ಭಾರತದ ನಾಯಕರ ಜತೆ ಮಾತುಕತೆ ನಡೆಸುವುದು ಬ್ರಿಟಿಷರಿಗೆ ಅನಿವಾರ್ಯವಾಯಿತು.

1947ರಲ್ಲಿ ಸ್ವಾತಂತ್ರ್ಯ ಬಂದಾಗಲೂ ಮಹಾರಾಜರ ನಿರಂಕುಶ ಆಡಳಿತ ಮುಂದುವರಿಯಿತು. ಮೈಸೂರು ಮಹಾರಾಜರು ಮೈಸೂರನ್ನು ಭಾರತದಲ್ಲಿ ವಿಲೀನಗೊಳಿಸಿದರೂ ಜನತೆಗೆ ಜವಾಬ್ದಾರಿ ಸರಕಾರ ನೀಡಲು ಅವರು ತಯಾರಿರಲಿಲ್ಲ. ಮೈಸೂರು ಕಾಂಗ್ರೆಸ್ ಈ ಜವಾಬ್ದಾರಿ ಹೋರಾಟಕ್ಕೆ ವಿಳಂಬವಾಗಿ ಯಾದರೂ ಕರೆ ಕೊಟ್ಟಾಗ ಕಮ್ಯೂನಿಸ್ಟ್ ಪಾರ್ಟಿಯು ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದದಲ್ಲದೆ ಹೋರಾಟದಲ್ಲಿ ಸಂಘಟಿತ ಕಾರ್ಮಿಕ ವರ್ಗವು ಭಾಗವಹಿಸುವಂತೆ ಮಾಡಿತು. ದ. ಕನ್ನಡ ಜಿಲ್ಲೆ ಮತ್ತಿತರ ಪ್ರದೇಶಗಳಿಂದ ಮೈಸೂರು ಚಲೋ ಜಾತಗಳನ್ನು ಸಂಘಟಿಸಿ ಮೈಸೂರಿನ ಜನತೆಯ ಹೋರಾಟ ಇಡೀ ಕನ್ನಡಿಗರ ಹೋರಾಟವೆಂಬುದನ್ನುವುದನ್ನು ತೋರಿಸಿತು. ಈ ಹೋರಾಟ ನಡೆಯುತ್ತಿರುವಾಗ ಮಹಾರಾಜರ ಕೃಪಾಚ್ಛತ್ರದಡಿಯ ಜವಾಬ್ದಾರಿ ಸರಕಾರ ಸಿಕ್ಕಿದರೆ ಸಾಕೆಂಬ ಭಾವನೆ ನಾಯಕರಲ್ಲಿದ್ದಾಗ ಇದಕ್ಕೆ ಬದಲಾಗಿ ಈ ಪಾಳೆಯಗಾರಿ ಅವಶೇಷಗಳೆಲ್ಲಾ ಹೋಗಿ ನಿಜವಾದ ಪ್ರಜಾಪ್ರಭುತ್ವ ದೊರೆಯ ಬೇಕೆಂಬ ಬೇಡಿಕೆಯನ್ನು ಕಮ್ಯೂನಿಸ್ಟ್ ಪಾರ್ಟಿ ಪ್ರತಿಪಾದಿಸಿತು ಮಹಾರಾಜರ ಪ್ರಶ್ನೆಯು ಏಕೀಕರಣವಾದ ಬಳಿಕವೂ ಸ್ವಲ್ಪ ಕಾಲದವರೆಗೆ ಉಳಿದರೂ ಕೊನೆಗೆ ಪರಿಹಾರವಾಯಿತು.

ಎ. ಎಲ್. ಉಪಾಧ್ಯಾಯ

ನಾವು ವಿವಿಧ ಪ್ರದೇಶಗಳಲ್ಲಿ ವಿವಿಧ ಕಾನೂನು ಕಾಯಿದೆಗಳ ಮತ್ತು ಭಿನ್ನ ಸಾಮಾಜಿಕ-ಆರ್ಥಿಕ ಪರಿಸ್ಥಿತಿಯಿದ್ದರೂ ಕಾರ್ಮಿಕರ, ರೈತರ, ವಿದ್ಯಾರ್ಥಿಗಳ ಮತ್ತಿತರ ಜನವಿಭಾಗಗಳ ಸಂಘಟನೆಯನ್ನು ಕಟ್ಟಿ ಅನೇಕ ಹೋರಾಟಗಳನ್ನು ಕಮ್ಯೂನಿಸ್ಟ್ ಪಾರ್ಟಿ ನಡೆಸಿದೆ. ಕಾರ್ಮಿಕ ಕ್ಷೇತ್ರದಲ್ಲಿ ಕಾಂಗ್ರೆಸ್ ಸಂಘಟನೆಯನ್ನು, ಮೊದಲು (ಸುಮಾರು 1939-40ರಲ್ಲಿ) ಆರಂಭಿಸಿದರೂ, ಅದು ಸುಧಾರಣಾ, ವರ್ಗ ಸಹಕಾರದ ಆಧಾರದಲ್ಲಿತ್ತು. ಕಾರ್ಮಿಕರಲ್ಲಿ ವರ್ಗ ಜಾಗೃತಿಯನ್ನು ಬೆಳೆಸುವುದರಲ್ಲಿ ಪಾರ್ಟಿಯ ಪಾತ್ರ ಮಹತ್ವದ್ದಾಗಿದೆ. ಕೆಂಬಾವುಟದಡಿಯಲ್ಲಿ ಸಂಘಟಿಸುವಾಗ ಅನೇಕ ರೀತಿಯ ದಬ್ಬಾಳಿಕೆ ನಡೆದರೂ (ಬಂಧನ, ಕೆಲಸದಿಂದ ವಜಾ ಇತ್ಯಾದಿ) ಯಾವುದಕ್ಕೂ ಹೆದರದೆ ಪಾರ್ಟಿಯು ಮುಂದರಿಯಿತು. ಕಾರ್ಮಿಕರ ಹೋರಾಟದಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸಿತು.

ರೈತ ಸಂಘಟನೆಯನ್ನು ನಮ್ಮ ಪಾರ್ಟಿಯೇ ಆರಂಭಿಸಿತೆಂದರೆ ತಪ್ಪಾಗಲಾರದು. ಉತ್ತರ ಕನ್ನಡ ಜಿಲ್ಲೆಯಲ್ಲಿ ಮುಖ್ಯವಾಗಿ ಕಾರವಾರದಲ್ಲಿ ಗೇಣಿ ರೈತರ ಹೋರಾಟವನ್ನು 1944-45 ರಲ್ಲಿ ಪ್ರಾರಂಭಿಸಿತು. ಲಂಗು ಲಗಾಮಿಲ್ಲದ ಶೋಷಣೆಯ ವಿರುದ್ಧ ಗೇಣಿದಾರ ರೈತರ, ಸಂಘಟನೆ ಮಾಡಿ ಸಭೆ ಸಮ್ಮೇಳನಗಳ ಮೂಲಕ ಅವರ ಹೊಸ ಜಾಗೃತಿಯನ್ನು ಬೆಳೆಸಿ 1946 ರಲ್ಲಿ ಕಾರವಾರ ತಾಲೂಕಿನಲ್ಲಿ "ಗೇಣಿ ನಿರಾಕರಣೆ" ಚಳುವಳಿಯನ್ನು ಯಶಸ್ವಿಯಾಗಿ ನಡೆಸಿತು. ಅದರ ಪರಿಣಾಮವಾಗಿ ಗೇಣಿಯು ಕ್ರಮೇಣ ಕಡಿಮೆಯಾಗುತ್ತಾ 1956ಕ್ಕೆ ಗೇಣಿಯ ಪ್ರಮಾಣವು ಉತ್ಪನ್ನದ ಆರನೇ ಒಂದು ಭಾಗವೆಂಬ ಕಾಯಿದೆಯು ಬೊಂಬಾಯಿ ಪ್ರಾಂತದಲ್ಲಿ ಬಂತು. ದ.ಕ. ಜಿಲ್ಲೆಯಲ್ಲಿ ರೈತ ಸಂಘವು ಬೆಳೆಯಿತು. ಇತರ ಜಿಲ್ಲೆಗಳಲ್ಲೂ ಇದು ಬೆಳೆಯಿತು.

ಆದರೆ ಆಗಿನ ಮದ್ರಾಸ್ ಪ್ರಾಂತ ಸರಕಾರವು ಗೇಣಿಯನ್ನಿಳಿಸುವುದರಲ್ಲಿ ನಿಧಾನ ಮಾಡಿತು. ಆದರೂ ನಾಲ್ಕನೇ ಒಂದು ಭಾಗ ಅಂಶಕ್ಕೆ ಇಳಿಸಬೇಕಾಯಿತು. ಮೈಸೂರು ಸ್ಟೇಟ್‌ನಲ್ಲಿ ಗೇಣಿಯನ್ನು ಮೂರನೇ ಒಂದು ಭಾಗ ದಷ್ಟು ಮಾಡಲು ರೈತರು ಹೋರಾಡಬೇಕಾಯಿತು. ಕೋಲಾರ ಜಿಲ್ಲೆಯ ರೈತರು ಜೋಡಿ ಇನಾಂ ಪದ್ಧತಿಯ ವಿರುದ್ಧ ಹೋರಾಡಿದರು. ಈ ಹೋರಾಟಗಳಲ್ಲೂ 1956ರ ನಂತರ ರಾಜ್ಯಾದ್ಯಂತ ಏಕ ರೀತಿಯ ಭೂ ಸುಧಾರಣಾ ಮಸೂದೆ ಬರಬೇಕೆಂದೂ ನಡೆದ ಹೋರಾಟಗಳಲ್ಲಿ ಪಾರ್ಟಿಯು ಪ್ರಮುಖ ಪಾತ್ರ ವಹಿಸಿರುತ್ತದೆ.

ಇದಲ್ಲದೆ ಭೂಹೀನ ರೈತರಿಗೆ ಬಂಜರು ಭೂಮಿಯನ್ನು ಹಂಚಬೇಕೆಂಬ ಬೇಡಿಕೆಗೂ ಮತ್ತು ಒಕ್ಕಲೆಬ್ಬಿಸುವುದರ ವಿರುದ್ಧವೂ ರೈತರ ಹೋರಾಟ ನಡೆಸಲಾಯಿತು. ಬರಗಾಲ ಪೀಡಿತ ಪ್ರದೇಶಗಳಲ್ಲಿ ಗಂಜಿ ಕೇಂದ್ರಗಳು ಮುಂತಾದ ಪರಿಹಾರ ಕ್ರಮ ಕೈಗೊಳ್ಳುವುದರಲ್ಲೂ ನಮ್ಮ ಪಾರ್ಟಿಯ ಪಾತ್ರವು ಮಹತ್ವದ್ದಾಗಿದೆ. ಇತ್ತೀಚೆಗೆ ಹಲವು ರೈತ ಸಂಘಗಳು ತಲೆ ಎತ್ತಿದರೂ ಕಳೆದ 40 ವರ್ಷಗಳಿಂದಲೂ ರೈತರ ಸಂಘ ಕಟ್ಟಿ, ಬೆಳೆಸಿ ಹೋರಾಟಗಳನ್ನು ನಡೆಸಿದ ಪ್ರಾಂತ ರೈತ ಸಂಘವನ್ನು ನಮ್ಮ ಪಾರ್ಟಿ ಕಟ್ಟಿರುತ್ತದೆ.

ಕರ್ನಾಟಕ ಏಕೀಕರಣ ಹೋರಾಟದಲ್ಲಿ ನಾವು ಅವಿಶ್ರಾಂತವಾಗಿ ದುಡಿದಿದ್ದೇವೆ. ಯಾವ ಹಂತದಲ್ಲೂ ನಮ್ಮಲ್ಲಿ ಗೊಂದಲವಾಗಲಿ ಅಥವಾ ಭಿನ್ನಾಭಿಪ್ರಾಯವಾಗಲಿ ಇರಲಿಲ್ಲ. ಇದಕ್ಕೆ ನಡೆದ ಚಳುವಳಿಯಲ್ಲಿ ನಮ್ಮ ಪಾರ್ಟಿಯ ಅನೇಕ ನಾಯಕರೇ ಜೈಲು ವಾಸ ದಬ್ಬಾಳಿಕೆ ಮುಂತಾದುವನ್ನೆಲ್ಲಾ ಎದುರಿಸಬೇಕಾಯಿತು. ಇತರ ಪಕ್ಷಗಳಲ್ಲಿ ಒಂದರ ಬದಲು ಎರಡು ಕರ್ನಾಟಕಗಳೆಂಬ ವಾದವಿದ್ದಾಗ "ಬೈಟು ಕರ್ನಾಟಕಕ್ಕೆ ಧಿಕ್ಕಾರ"ವೆಂಬ ಘೋಷಣೆಯನ್ನು ಪಾರ್ಟಿ ಕೊಟ್ಟಿತು. ಹೊಸ ರಾಜ್ಯಕ್ಕೆ 'ಮೈಸೂರ'ೆಂಬ ಹೆಸರು ಕೊಡುವುದನ್ನೂ, ಇದಕ್ಕೆ ಮಹಾರಾಜರನ್ನು ರಾಜ್ಯ ಪಾಲರನ್ನಾಗಿ ಮಾಡುವುದನ್ನು ಪಾರ್ಟಿ ವಿರೋಧಿಸಿತು.

1952 ರಲ್ಲಿ ಪ್ರಥಮ ಸಾರ್ವತ್ರಿಕ ಚುನಾವಣೆ ನಡೆದಾಗ ನಮ್ಮ ಪಾರ್ಟಿಗೆ ಕೋಲಾರ ಚಿನ್ನದ ಗಣಿಯಿಂದ ಒಂದು ಸ್ಥಾನ ಮೈಸೂರು ಶಾಸನ ಸಭೆಯಲ್ಲಿ ಬಂತು. 1957ರ ಚುನಾವಣೆಯಲ್ಲೂ ಆ ಕ್ಷೇತ್ರದಿಂದಲೇ ಒಂದು ಸ್ಥಾನವು ದೊರೆಯಿತು 1962ರಲ್ಲಿ 3 ಕ್ಷೇತ್ರಗಳಲ್ಲಿ (ಚಿನ್ನದ ಗಣಿಯನ್ನೊಳಗೊಂಡು) ಪಾರ್ಟಿ ಚಿಹ್ನೆಯಲ್ಲಿ ನಮ್ಮವರು ಗೆದ್ದರು. ಇನ್ನೆರಡು ಕಡೆ ಇತರ ಚಿಹ್ನೆಯಲ್ಲಿ ಗೆದ್ದರು. ಆಗ ಸಂಯುಕ್ತ ರಂಗ ಯಾವುದು ಇರಲಿಲ್ಲ. ನಮಗೆ ಬೆಂಬಲ ಕೊಡುವ ಇತರ ಯಾವ ಪಕ್ಷವೂ ಇರಲಿಲ್ಲ.

1959ರ ನಂತರ ಪಾರ್ಟಿಯೊಳಗೆ ಅಭಿಪ್ರಾಯ ವ್ಯತ್ಯಾಸ ತಲೆ ದೋರಿ 1964 ರಲ್ಲಿ ಪರಿಷ್ಕರಣವಾದಿಗಳಿಂದ ಬೇರೆಯಾದೆವು. ಬೇರೆಯಾಗುವಾಗ ರಾಜ್ಯದಲ್ಲಿ ಪಾರ್ಟಿಯ ಪ್ರಭಾವಿತ ಪ್ರದೇಶಗಳಾದ ಕೋಲಾರ ಜಿಲ್ಲೆ ಮತ್ತು ದ. ಕನ್ನಡ ಜಿಲ್ಲೆಗಳು ಹೆಚ್ಚು ಕಡಿಮೆ ನಮ್ಮಲ್ಲಿಯೇ ಉಳಿದುವು. ಪಾರ್ಟಿ ಸದಸ್ಯರಲ್ಲಿ ಶೇ. 80ರಷ್ಟು ನಮ್ಮ ಕಡೆ ಉಳಿಯಿತು. ದ. ಕ. ಜಿಲ್ಲೆಯ ಕಾರ್ಮಿಕ ಸಂಘಟನೆಗಳಲ್ಲಿ ಬಹು ಭಾಗ ನಮ್ಮ ನೇತೃತ್ವದಲ್ಲಿ ಬಂದು ನಮ್ಮ ಬೆಳವಣಿಗೆಗೆ ಸಹಾಯ ಮಾಡಿವೆ.

ಭಾರತ ಕಮ್ಯೂನಿಸ್ಟ್ ಪಾರ್ಟಿ (ಮಾರ್ಕ್ಸ್‌ವಾದಿ)ಗೆ ಆರಂಭದಲ್ಲಿ ಸ್ವಲ್ಪ ತೊಂದರೆಯಾದರೂ ಕ್ರಮೇಣ ಚೇತರಿಸಿಕೊಂಡು ಕಮ್ಯೂನಿಸ್ಟ್ ಚಳುವಳಿಯ ವೀರ ಪರಂಪರೆಯನ್ನು ಮುಂದುವರಿಸಿದೆ. ವಿವಿಧ ಕ್ಷೇತ್ರಗಳಲ್ಲಿ ಹೋರಾಟಗಳನ್ನು ನಡೆಸಿದೆ, ಸಂಘಟನೆಗಳನ್ನು ಕಟ್ಟಿದೆ. ಇದರ ಪರಿಣಾಮವಾಗಿ ಪ್ರಾಂತೀಯ ರೈತ ಸಂಘ, ಪ್ರಾಂತ ಸಿ.ಐ.ಟಿ.ಯು., ಪ್ರಾಂತ ವಿದ್ಯಾರ್ಥಿ ಯುವಜನ ಸಂಘಟನೆಗಳು ಸ್ಥಾಪಿತಗೊಂಡು ಚುರುಕಾಗಿ ಈಗ ಕೆಲಸ ಮಾಡುತ್ತಿವೆ.

1962ರ ನಂತರ ನಡೆದ ಚುನಾವಣೆಗಳಲ್ಲಿ ನಮಗೆ ಯಾವ ಸ್ಥಾನ ಸಿಗದಿದ್ದರೂ 1983ರಲ್ಲಿ ನಮಗೆ ಶಾಸನ ಸಭೆಯಲ್ಲಿ ಮೂರು ಸ್ಥಾನಗಳು ದೊರೆತಿರುವುದರಿಂದ ನಾವು ಹೆಮ್ಮೆ

(30 ನೇ ಪುಟ ನೋಡಿ)

ಭಾರತದ ರಾಷ್ಟ್ರೀಯ ಚಳುವಳಿಯಲ್ಲಿ ಕಾರ್ಮಿಕ ವರ್ಗದ ಪಾತ್ರ

—ಬಿ. ಮಾಧವ, ಮಂಗಳೂರು

ಭಾರತದ ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಕಾರ್ಮಿಕ ವರ್ಗವು ನಿರ್ವಹಿಸಿದ ಮಹತ್ತರವಾದ ಪಾತ್ರವನ್ನು ಬಂಡವಾಳಶಾಹಿ ಇತಿಹಾಸಕಾರರು ಕಡೆಗಣಿಸಿದ್ದಾರೆ. ಕಾರ್ಮಿಕರು ಕೇವಲ ಕೂಲಿ, ಬೋನಸ್ಸುಗಳಿಗಾಗಿ ಹೋರಾಡುವವರೆಂದೂ ಅವರು ದೇಶಕ್ಕಾಗಿ ತ್ಯಾಗ ಮಾಡುವವರಲ್ಲವೆಂದೂ ಅವಹೇಳನ ಮಾಡುವವರು ಸಾಕಷ್ಟಿದ್ದಾರೆ.

ಆದರೆ ಭಾರತದ ಸುದೀರ್ಘ ಇತಿಹಾಸದಲ್ಲಿ ಕಾರ್ಮಿಕ ವರ್ಗದ ಭವ್ಯ ಪರಂಪರೆ ಇದೆಯೆಂಬುದನ್ನು ಮರೆಯುವಂತಿಲ್ಲ.

ತಿಲಕರ ಬಂಧನಕ್ಕೆ ಪ್ರತಿಭಟನೆ

ಸ್ವದೇಶಿ ಚಳುವಳಿಯ ತೀವ್ರತೆಯಿಂದಾಗಿ ಬಂಗಾಲಾದ ಬ್ರಿಟೀಷ್ ಸರಕಾರವು 1908ರ ಜೂನ್ 24ರಂದು, ಬೊಂಬಾಯಿಯಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರನ್ನು ಬಂಧಿಸಿತು. ದೇಶದ್ರೋಹದ ಆಪಾದನೆ ಹೇರಿ ತಿಲಕರನ್ನು ವಿಚಾರಣೆಗೆ ಗುರಿಪಡಿಸಲಾಯಿತು. "ಸ್ವಾತಂತ್ರ್ಯ ನನ್ನ ಜನ್ಮಸಿದ್ಧ ಹಕ್ಕು" ಎಂದು ಘೋಷಿಸಿ, ಅದಕ್ಕಾಗಿ ದಿಟ್ಟತನದಿಂದ ಹೋರಾಡಿದ ಈ ನಾಯಕನ ಬಂಧನದ ಸುದ್ದಿ ತಿಳಿದೊಡನೆ ಬೊಂಬಾಯಿಯ ಕಾರ್ಮಿಕರು ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಿದರು. ತಿಲಕರ ವಿಚಾರಣೆಯು ಜುಲೈ 13ರಂದು ಆರಂಭವಾಗಿ 22ರಂದು ಕೊನೆಗೊಂಡಿತು. ಈ ಹತ್ತು ದಿನಗಳಲ್ಲೂ ಬೊಂಬಾಯಿಯ ವಿವಿಧ ಭಾಗಗಳಲ್ಲಿ ಕಾರ್ಮಿಕರು ಮುಷ್ಕರ ಮಾಡಿದರು. ತಿಲಕರಿಗೆ 6ವರ್ಷಗಳ ಜೈಲು ಶಿಕ್ಷೆಯನ್ನು ವಿಧಿಸಲಾಯಿತು. ತಿಲಕರಿಗೆ ಕೊಡುವ ಒಂದೊಂದು ವರ್ಷದ ಶಿಕ್ಷೆಗೆ ಒಂದೊಂದು ದಿವದಂತೆ ಮುಷ್ಕರ ಮಾಡಲು ಬೊಂಬಾಯಿಯ ಕಾರ್ಮಿಕರು ಮೊದಲೇ ತೀರ್ಮಾನಿಸಿದ್ದರು, ಅದರಂತೆ ಜುಲೈ 23ರಿಂದ 28ರ ವರೆಗೆ ಬೊಂಬಾಯಿಯ ಒಂದು ಲಕ್ಷಕ್ಕಿಂತಲೂ ಹೆಚ್ಚು ಕಾರ್ಮಿಕರು ಮುಷ್ಕರದಲ್ಲಿ ಭಾಗ ವಹಿಸಿದರು. ಮುಷ್ಕರನಿರತ ಕಾರ್ಮಿಕರ ಮೇಲೆ ಕ್ರೂರ ಧಾಳಿ ನಡೆಯಿತು, ಕಾರ್ಮಿಕರು ಜೀವದ ಹಂಗು ತೊರೆದು ಪೋಲೀಸ್ ಮತ್ತು ಸೈನಿಕರ ವಿರುದ್ಧ ರಸ್ತೆ ಕಾಳಗಕ್ಕೆ ಇಳಿದರು. ಗುಂಡು ಹಾರಿಸಿದ ಪೋಲೀಸರನ್ನು ಕಲ್ಲುಗಳಿಂದ ಹೊಡೆದರು. ನೂರಾರು ಕಾರ್ಮಿಕರು ಹುತಾತ್ಮರಾದರು. ಅತ್ಯಂತ ಉಗ್ರವಾದ ಹೋರಾಟ ನಡೆದ ಜುಲೈ 28ರಂದು ಬ್ರಿಟೀಷ್ ಸರಕಾರವು ಒಬ್ಬನೇ ಒಬ್ಬ ಭಾರತೀಯ ಪೋಲೀಸನನ್ನೂ ಬೊಂಬಾಯಿಯ ಕಾರ್ಮಿಕರ ಕೇಂದ್ರಗಳಲ್ಲಿ ಕೆಲಸಕ್ಕೆ ನೇಮಿಸಲಿಲ್ಲ. ಕಾರ್ಮಿಕರೊಂದಿಗೆ ಜನಸಾಮಾನ್ಯರು ಮಾತ್ರವಲ್ಲದೆ, ಭಾರತೀಯ ಪೋಲೀಸರು ತಮ್ಮ ವಿರುದ್ಧ ನಿಂತು ಹೋರಾಡಬಹುದೆಂಬ ಭೀತಿ ಬ್ರಿಟೀಷ್ ಸರಕಾರವನ್ನು ಆವರಿಸಿತ್ತು.

ರೌಲತ್ ಕಾನೂನಿಗೆ ಪ್ರತಿಭಟನೆ

ಬ್ರಿಟೀಷ್ ಸಾಮ್ರಾಜ್ಯ ಶಾಹಿಗಳ ದಬ್ಬಾಳಿಕೆಯ ವಿರುದ್ಧ ದೇಶದಲ್ಲಿ ಬೆಳೆದು ಬರುತ್ತಿದ್ದ ಪ್ರತಿಭಟನೆಗಳನ್ನು ಹತ್ತಿಕ್ಕಲು 1919ರಲ್ಲಿ ರೌಲತ್ ಕಾನೂನನ್ನು ಜಾರಿಮಾಡಲಾಯಿತು. ಯಾವುದೇ ಕಾರಣ ನೀಡದೆ ಬಂಧಿಸುವುದು, ವಿಚಾರಣೆಯಿಲ್ಲದೆ ಜೈಲಿನಲ್ಲಿಡುವುದು, ಇತ್ಯಾದಿ ದಮನಕಾರಿ ಅಂಶಗಳನ್ನೊಳಗೊಂಡಿದ್ದ ಈ ಕಾನೂನಿನ ವಿರುದ್ಧ ದೇಶಾದ್ಯಂತ ಕಾರ್ಮಿಕರಿಂದ ಉಗ್ರ ಪ್ರತಿಭಟನೆ ವ್ಯಕ್ತವಾಯಿತು.

ಏಪ್ರಿಲ್ 11 ಮತ್ತು 12 ರಂದು ಅಹಮದಾಬಾದಿನ ಕಾರ್ಮಿಕರು ಬ್ರಿಟೀಷ್ ಸರಕಾರದೊಡನೆ ನೇರ ಕಾದಾಟಕ್ಕೆ ಇಳಿದರು. ಈ ಎರಡು ದಿನಗಳ ಕಾಲ ಅಹಮದಾಬಾದ್ ನಗರವು ಸಂಪೂರ್ಣವಾಗಿ ಕಾರ್ಮಿಕರ ನಿಯಂತ್ರಣದಲ್ಲಿತ್ತು. ಏಪ್ರಿಲ್ 12ರ ಮಧ್ಯರಾತ್ರಿಯ ನಂತರವಷ್ಟೇ ಬ್ರಿಟೀಷ್ ಸೈನ್ಯವು ನಗರವನ್ನು ಪ್ರವೇಶಿಸಲು ಸಾಧ್ಯವಾಯಿತು ಈ ಹೋರಾಟದಲ್ಲಿ 28 ಮಂದಿ ಕಾರ್ಮಿಕರು ಜೀವತೆತ್ತರು. 125 ಮಂದಿ ಗಾಯಗೊಂಡರು. ಏಪ್ರಿಲ್ 13 ರಂದು ಅಮೃತ್‌ಸರದ ಜಲಿಯನ್ ವಾಲಾಬಾಗ್‌ನಲ್ಲಿ ರೌಲತ್ ಏಕ್ಟ್‌ನ ವಿರುದ್ಧ ನಡೆದ ಪ್ರತಿಭಟನಾ ಸಭೆಯ ಮೇಲೆ ಬ್ರಿಟೀಷ್ ಸೇನಾಧಿಕಾರಿ ಜನರಲ್ ಡಯರನ ನೇತೃತ್ವದಲ್ಲಿ ನುಗ್ಗಿದ ಸೈನಿಕರು ಗುಂಡಿನ ಮಳೆಗರೆದರು. ಒಂದು ಸಾವಿರಕ್ಕಿಂತಲೂ ಹೆಚ್ಚು ಜನರು ಸತ್ತರು. ಸಾವಿರಗಟ್ಟಲೆ ಜನರು ಗಾಯಗೊಂಡರು. ಈ ಕ್ರೂರ ಹತ್ಯಾಕಾಂಡದ ಸುದ್ದಿ ಕಾಡ್ಗಿಚ್ಚಿನಂತೆ ಹರಡುತ್ತಿರುವಾಗ, ದೇಶಾದ್ಯಂತ ಕಾರ್ಮಿಕರು ಮುಷ್ಕರ ಮಾಡಿ ತಮ್ಮ ಉಗ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.

ಪೂರ್ಣ ಸ್ವಾತಂತ್ರ್ಯಕ್ಕಾಗಿ ಹೋರಾಟ

ಭಾರತದ ಕಾರ್ಮಿಕ ವರ್ಗದ ರಾಜಕೀಯ ಪಕ್ಷವಾದ ಕಮ್ಯೂನಿಸ್ಟ್ ಪಕ್ಷವು 1920ರಿಂದಲೂ ಎಲ್ಲಾ ಕಾಂಗ್ರೆಸ್ ಅಧಿವೇಶನಗಳಲ್ಲಿ 'ಪೂರ್ಣ ಸ್ವಾತಂತ್ರ್ಯ' ನಿರ್ಣಯಗಳನ್ನು ಮಂಡಿಸುತ್ತ ಬಂದಿತ್ತು. ಬಂಡವಾಳ ಶಾಹಿ ಮುಂದಾಳುಗಳ ಪ್ರಾಬಲ್ಯದಲ್ಲಿದ್ದ ಕಾಂಗ್ರೆಸ್ ಅಧಿವೇಶನಗಳು ಪ್ರತಿ ಸಲವೂ ಈ ನಿರ್ಣಯಗಳನ್ನು ತಿರಸ್ಕರಿಸಿದವು.

1928ರಲ್ಲಿ ಕಾಂಗ್ರೆಸಿನ ಕಲ್ಕತ್ತಾ ಅಧಿವೇಶನ ನಡೆದಾಗ, ಕಮ್ಯುನಿಸ್ಟರ ನೇತೃತ್ವದಲ್ಲಿ 50 ಸಾವಿರಕ್ಕೂ ಹೆಚ್ಚು ಕಾರ್ಮಿಕರು ಮೆರವಣಿಗೆಯಲ್ಲಿ ಹೋಗಿ ಸಭಾಂಗಣಕ್ಕೆ ನುಗ್ಗಿದರು. ವೇದಿಕೆಯಿಂದ ಇಳಿದು ಬಂದ ಪಂಡಿತ್ ಜವಾಹರಲಾಲ್ ನೆಹರೂರವರ ಅಧ್ಯಕ್ಷತೆಯಲ್ಲಿ ಕಾರ್ಮಿಕರು ಸಭೆ ನಡೆಸಿ, ಪೂರ್ಣ ಸ್ವಾತಂತ್ರ್ಯ ಮತ್ತು ಸಮಾಜವಾದಿ ಗಣ ರಾಜ್ಯದ ಸ್ಥಾಪನೆಯೇ ರಾಷ್ಟ್ರೀಯ ಹೋರಾಟದ ಗುರಿ ಎಂದು ಸಾರಬೇಕೆಂದು ಕಾಂಗ್ರೆಸ್ ಅಧಿವೇಶನವನ್ನು ಒತ್ತಾಯಿಸುವ ನಿರ್ಣಯವನ್ನು ಕೈಗೊಂಡರು. ಜವಾಹರಲಾಲರು ಈ ನಿರ್ಣಯವನ್ನು ಅಧಿವೇಶನದಲ್ಲಿ ಮಂಡಿಸಿದಾಗ ಅದು ತಿರಸ್ಕೃತವಾಯಿತು ! ಆದರೆ ಕಾರ್ಮಿಕರ ಈ ಚಾರಿತ್ರಿಕ ಪ್ರದರ್ಶನದ ಪರಿಣಾಮವಾಗಿ 1929ರಲ್ಲಿ ನಡೆದ ಲಾಹೋರ್ ಅಧಿವೇಶನದಲ್ಲಿ ಪೂರ್ಣ ಸ್ವಾತಂತ್ರ್ಯವೇ ಕಾಂಗ್ರೆಸಿನ ಗುರಿ ಎಂದು ಸಾರುವ ಗೊತ್ತುವಳಿ ಅಂಗೀಕಾರವಾಯಿತು.

ಶೋಲಾಪುರ ಕಾರ್ಮಿಕರ ಧೀರ ಹೋರಾಟ

1930ರಲ್ಲಿ ದಂಡಿಯಲ್ಲಿ ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ಗಾಂಧೀಜಿಯವರನ್ನು ಬಂಧಿಸಲಾಯಿತು. 1930ರ ಮೇ 8 ರಂದು ಗಾಂಧೀಜಿಯವರ ಬಂಧನದ ಸುದ್ದಿ ತಿಳಿದೊಡನೆ ಶೋಲಾಪುರದ ಕಾರ್ಮಿಕರೂ ಮುಷ್ಕರ ಮಾಡಿ, ಕೈಗೆ ಸಿಕ್ಕಿದ ಶಸ್ತ್ರಗಳನ್ನು ಹಿಡಿದು ರಸ್ತೆಗಿಳಿದು ಸೈನಿಕರೊಡನೆ ಹೋರಾಡಿದರು ಶೋಲಾಪುರ ಜಿಲ್ಲಾಧಿಕಾರಿಯ ಕಛೇರಿಯ ಮುಂದೆ ಹಾರುತ್ತಿದ್ದ ಯೂನಿಯನ್ ಜಾಕ್ (ಬ್ರಿಟಿಷರ ಧ್ವಜ)ನು ಕಾರ್ಮಿಕರು ಕೆಳಗಿಳಿಸಿ, ಭಾರತದ ರಾಷ್ಟ್ರ ಧ್ವಜವನ್ನು ಏರಿಸಿದರು. ಶೋಲಾಪುರ ನಗರವನ್ನು ಸ್ವಾಧೀನ ಪಡಿಸಿ ಕಾರ್ಮಿಕರ ಕ್ರಾಂತಿಕಾರಿ ಸರಕಾರವನ್ನೂ ಸ್ಥಾಪಿಸಿದರು. ಏಳು ದಿನಗಳ ಕಾಲ ಕಾರ್ಮಿಕರು ಶೋಲಾಪುರವನ್ನು ಆಳಿದರು.

ಈ ಹೋರಾಟದಲ್ಲಿ ನೂರಾರು ಕಾರ್ಮಿಕರು ಮೃತರಾದರು. ನಾಲ್ವರು ಕಾರ್ಮಿಕ ಮುಂದಾಳುಗಳನ್ನು ಗಲ್ಲಿಗೇರಿಸಲಾಯಿತು.

ನೌಕಾದಳದ ದಂಗೆ ಮತ್ತು ಕಾರ್ಮಿಕರ ಸೌಹಾರ್ದ ಹೋರಾಟ

1946 ರಲ್ಲಿ ಕ್ವಿಟ್ ಇಂಡಿಯಾ ಚಳುವಳಿಯು ತೀವ್ರವಾಗಿ ನಡೆಯುತ್ತಿದ್ದಾಗ ಬೊಂಬಾಯಿಯ ನೌಕಾದಳಗಳ ನೆಲೆಗಳಲ್ಲೂ "ಕ್ವಿಟ್ ಇಂಡಿಯಾ" ಎಂಬ ಗೋಡೆ ಬರಹಗಳು ಕಾಣಿಸಿಕೊಂಡವು. ನೌಕಾದಳದ ರೇಡಿಯೋ ಆಪರೇಟರ್ ದತ್ತಾ ಎಂಬುವರನ್ನು ಈ ಗೋಡೆ ಬರಹ ಬರೆದ ಆಪಾದನೆಯ ಮೇಲೆ ಬಂಧಿಸಲಾಯಿತು. ಆತನೊಬ್ಬ ಕಮ್ಯೂನಿಸ್ಟನೆಂದು ಅಧಿಕಾರಿಗಳಿಗೆ ಸಂದೇಹವಿತ್ತು. ಈ ಬಂಧನವನ್ನು ಪ್ರತಿಭಟಿಸಿ ಬೊಂಬಾಯಿಯ ಎಲ್ಲಾ ನೌಕಾ ನೆಲೆಗಳ ಯೋಧರೂ ಫೆಬ್ರವರಿ 18 ರಂದು ಮುಷ್ಕರ ಹೂಡಿದರು. ಸಮವಸ್ತ್ರ ಧರಿಸಿದ ನೌಕಾ ಯೋಧರೂ ಬೊಂಬಾಯಿಯ ಬೀದಿಗಳಲ್ಲಿ ಕಾಂಗ್ರೆಸ್, ಮುಸ್ಲಿಂಲೀಗ್ ಮತ್ತು ಕಮ್ಯುನಿಸ್ಟ್ ಬಾವುಟಗಳನ್ನು ಹಿಡಿದು ಪ್ರದರ್ಶನ ನಡೆಸಿದರು. ಮುಷ್ಕರವು ಕರಾಚಿಯಲ್ಲಿದ್ದ ಯುದ್ಧ ನೌಕೆಗಳಿಗೂ ಹರಡಿತು. ಫೆಬ್ರವರಿ 21 ರಂದು ಬ್ರಿಟಿಷ್ ಸೈನಿಕರು ಈ ನೌಕಾಯೋಧರ ಮೇಲೆ ದಾಳಿ ನಡೆಸಿದರು. ಏಳು ತಾಸುಗಳ ಕಾಲ ಗಂಭೀರ ಹೋರಾಟ ನಡೆಯಿತು. ಈ ಪರಿಸ್ಥಿತಿಯಲ್ಲಿ ನೌಕಾಯೋಧರು ಭಾರತದ ರಾಷ್ಟ್ರೀಯ ಕಾಂಗ್ರೆಸಿನ ಸಹಾಯ ಕೋರಿದರು. ಆದರೆ ಯೋಧರು ಕೂಡಲೇ ಶರಣಾಗಬೇಕೆಂದು ಕಾಂಗ್ರೆಸಿನ ಪರವಾಗಿ ಸರ್ದಾರ್ ಪಟೇಲರು ಆದೇಶ ನೀಡಿದರು. ಈ ಪರಿಸ್ಥಿತಿಯಲ್ಲಿ ಯೋಧರು ಕಾರ್ಮಿಕ ವರ್ಗದ ಸಹಾಯ ಕೋರಿದರು. ಬೊಂಬಾಯಿಯ ಕಾರ್ಮಿಕ ವರ್ಗ ಮುಷ್ಕರ ಮಾಡಿ ನೌಕಾಯೋಧರಿಗೆ ಬೆಂಬಲ ನೀಡಿತು. ಬ್ರಿಟಿಷ್ ಸೈನಿಕರು ಸಮುದ್ರ ತೀರದಲ್ಲಿ ನಿಂತು ಹಡಗುಗಳ ಕಡೆಗೆ ಗುಂಡು ಹಾರಿಸುತ್ತಿದ್ದಾಗ ಕಾರ್ಮಿಕರು ಬಂದೂಕುಗಳನ್ನು ಹಿಡಿದು ಬ್ರಿಟಿಷ್ ಸೈನಿಕರಿಗೆ ಹಿಂದಿನಿಂದ ಗುಂಡು ಹಾರಿಸಿದರು. ಈ ಭೀಕರ ಕಾಳಗದ ಪರಿಣಾಮವಾಗಿ ಬೊಂಬಾಯಿಯ ಸಮುದ್ರ ತೀರದಲ್ಲಿ ಕಾರ್ಮಿಕರ ಹೆಣಗಳು ರಾಶಿ ಬಿದ್ದವು. ಬ್ರಿಟಿಷರು ಭಾರತ ಬಿಟ್ಟು ತೊಲಗಬೇಕಾದರೆ ಭಾರತ ದೇಶದ ಕಾರ್ಮಿಕರ ಇಂಥ ಹೋರಾಟಗಳ ಫಲವಾಗಿದೆಂಬುದನ್ನು ಚರಿತ್ರೆ ತೋರಿಸಿ ಕೊಟ್ಟಿದೆ.

★

ನಾವೆಲ್ಲಾ ಕತ್ತಲೆಯ
ಆಕಾಶದಲ್ಲಿ
ಹಪ್ಪಳದಂತಹ ಚಂದ್ರನನ್ನು
ಅನ್ನದ ಅಗುಳಿನಂತಹ
ನಕ್ಷತ್ರಗಳನ್ನು ಕಂಡೆವು
ಆದರೆ ನಮ್ಮ ತಟ್ಟೆಗಳಲ್ಲಿ
ಅವುಗಳ ಬಿಂಬ ಮಾತ್ರ

—

"ಬಟ್ಟೆ ಚಿಂದಿಯಾಗಿದ್ದರೂ
ಶುಭ್ರವಾಗಿ ಧರಿಸು"
ಆದರೇನು ಮಾಡಲಿ
ಚಿಂದಿಯಾಗಲು ನನ್ನಲ್ಲಿ
ಬಟ್ಟೆಯೇ ಇಲ್ಲ

—ದಿ. ಗಾಂಧಿ

ಶಾಂತಿ ಮತ್ತು ಬದುಕಿಗಾಗಿ ತೀವ್ರತಮ ಹೋರಾಟ

— ಡಾ|| ಅನುಪಮಾ ನಿರಂಜನ

ಕೊರೆಯುವ ಡಿಸೆಂಬರ್ ಚಳಿ. ಯೂರೋಪಿನ ಜನರು ಕ್ರಿಸ್‌ಮಸ್ ಹಬ್ಬದ ಸಿದ್ಧತೆಯಲ್ಲಿ ತೊಡಗಿರುವಾಗ, ಬರಸಿಡಿಲಿನಂತೆ ಬಂತು ಕ್ಷಿಪಣಿ ಸುದ್ದಿ. ಪಶ್ಚಿಮ ಜರ್ಮನಿಯ ಸೇನಾನೆಲೆಗಳಲ್ಲಿ ಅಮೇರಿಕ ತನ್ನ ಪರ್ಷಿಂಗ್ -2ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಇಳಿಸಿದ ವಾರ್ತೆ ಅಲ್ಲಿಯ ಎಲ್ಲ ಜನರ ಹೃದಯಗಳನ್ನು ತಲ್ಲಣಗೊಳಿಸಿತು.

ತಾಯಿಯೊಬ್ಬಳು ಉದ್ಗಾರವೆತ್ತಿದಳು.

"ಯುದ್ಧ ಶುರುವಾದ್ರೆ ನಮ್ಗತಿ ಮುಗಿದ್ಹಾಗೆ!"

ಆರು ವರ್ಷದ ಅವಳ ಮುದ್ದು ಮಗು ಕೇಳಿತು.

"ಅಮ್ಮಾ, ಯುದ್ಧ ಯಾಕೆ ಮಾಡ್ತಾರೆ?"

"ನಮ್ಮನ್ನೆಲ್ಲಾ ಕೊಲ್ಲೋದಕ್ಕೆ."

"ನಾನು ನೀನು ಅಪ್ಪ ಪಕ್ಕದ್ಮನೆ ನನ್ ಸ್ನೇಹಿತ ಎಲ್ರನ್ನೂ ಕೊಲ್ತಾರಾ? ಬೇಡಮ್ಮಾ ಬೇಡ! ಯುದ್ಧ ಬೇಡ!"

ತಾಯಿ ಮಗುವನ್ನು ಬಾಚಿ ತಬ್ಬಿಕೊಂಡಳು. ಅವಳ ಕಣ್ಣಲ್ಲಿ ನೀರು ಕಾಣಿಸಿಕೊಂಡಿತು, ಗದ್ಗದ ದನಿಯಲ್ಲಿ ಅವಳೆಂದಳು:

"ಹೌದು ಮಗು. ನಮ್ಗೆ ಯುದ್ಧ ಬೇಡ. ನಮ್ಗೆ ಶಾಂತಿ ಬೇಕು. ಬದುಕು ಬೇಕು."

ಇದು ಆ ತಾಯಿಯೊಬ್ಬಳ ಅನಿಸಿಕೆಯಲ್ಲ. ಪ್ರಪಂಚದ ಮಿಲಿಯ ಗಟ್ಟಲೆ ಜನರ ಆಸೆ. ತಾವು ಈ ಭೂಮಿಯ ಮೇಲೆ ಹುಟ್ಟಿರುವುದುಬದುಕನ್ನು ಸಹ್ಯಗೊಳಿಸಲಿಕ್ಕಾಗಿ, ಹೊಸ ಹೊಸ ಸಂಶೋಧನೆಗಳನ್ನು ಮಾಡಿ ಜನರಿಗೆ ನೆಮ್ಮದಿ ತಂದು ಕೊಡಲಿಕ್ಕಾಗಿ, ಸಾಹಿತ್ಯ ಕಲೆಗಳ ಆರಾಧನೆಯಿಂದ ಲಕ್ಷಾಂತರ ವರ್ಷಗಳಿಂದ ಮಾನವ ಕಷ್ಟಪಟ್ಟು ಬೆಳೆಸಿದ ಈ ನಾಗರೀಕತೆಯನ್ನು ಕ್ಷಣಮಾತ್ರದಲ್ಲಿ ನಾಶ ಮಾಡಿಬಿಡಲು ಆತುರದಿಂದಿರುವ ಪೈಶಾಚಿಕ ಕೈಗಳಿಗೆ "ಬೇಡ!" ಎಂದು ಒಕ್ಕೊರಲಿನಲ್ಲಿ ಅಬ್ಬರಿಸುವ ಶಕ್ತಿ ಜನಸಾಮಾನ್ಯರ ಕಂಠಗಳಿಗೆ ಖಂಡಿತ ಇದೆ.

ಜಗತ್ತೇ ನಾಶವಾದೀತು

ಖ್ಯಾತ ಅಣು ವಿಜ್ಞಾನಿ ಐನ್‌ಸ್ಟೈನ್‌ರನ್ನು ಅವರ ಮಿತ್ರರೊಬ್ಬರು ಕೇಳಿದರಂತೆ:

"ಮೂರನೇ ಮಹಾಯುದ್ಧದಲ್ಲಿ ಯಾವ ರೀತಿಯ ಅಸ್ತ್ರಗಳನ್ನು ಉಪಯೋಗಿಸಬಹುದು ಎಂದು ಊಹಿಸಬಲ್ಲಿರಾ?"

"ಮೂರನೇ ಮಹಾಯುದ್ಧದ ಬಗ್ಗೆ ಹೇಳಲಾರೆ, ನಾಲ್ಕನೇ ಮಹಾಯುದ್ಧದಲ್ಲಂತೂ ಕಲ್ಲಿನ ಆಯುಧಗಳನ್ನು ಬಳಸ್ತಾರೆ!"

"ಅದ್ಯಾಕೆ ಹಾಗೆ ಹೇಳ್ತೀರಿ?"

"ಮೂರನೇ ಮಹಾಯುದ್ಧ ಆದ್ರೆ ಈ ಜಗತ್ತೆಲ್ಲಾ ನಾಶವಾಗುತ್ತೆ. ಅದರೊಂದಿಗೆ ನಮ್ಮ ನಾಗರೀಕತೆ ಕೂಡ, ಅನಂತರ ಮನುಷ್ಯ ಅಳಿದುಳಿದರೆ ಅವನು ಶಿಲಾಯುಗದ ಮಾನವನಂತೆ ಎಲ್ಲವನ್ನು ಮೊದಲಿನಿಂದ ಆರಂಭ ಮಾಡ್ಬೇಕಾಗುತ್ತೆ!"

ಈ ಮಾತುಗಳ ಹಿಂದಿರುವ ವಿಜ್ಞಾನಿಯ ಕಳಕಳಿಯನ್ನು ಎಲ್ಲ ಶಾಂತಿಪ್ರಿಯ ಜನರು ಅರ್ಥಮಾಡಿಕೊಳ್ಳಬಲ್ಲರು.

ಯುದ್ಧ ಯಾಕೆ ಮಾಡ್ತಾರೆ? ಎಂದು ಮಗುವೊಂದು ಕೇಳಿದ ಪ್ರಶ್ನೆಗೆ ಉತ್ತರಿಸುವುದು ಸುಲಭದ ಮಾತೇನಲ್ಲ.

ಯುದ್ಧ ಪಿಪಾಸುಗಳು ಮನುಷ್ಯರಲ್ಲ. ದಯೆ, ಕರುಣೆ ಅನುಕಂಪ ಇಂತಹ ಮಾನವ ಸಹಜ ಗುಣಗಳೇ ಇಲ್ಲದವರು ಇವರು. ಇವರಿಗೆ ಬೇಕಾಗಿರುವುದು ಪ್ರಪಂಚದ ಮೇಲೆ ಪರಮಾಧಿಕಾರ ಮತ್ತು ಮಿಲಿಟರಿ ಶ್ರೇಷ್ಠತೆ. ಕೆಲವೇ ಕುಟುಂಬಗಳು, ಲೋಕದ ಜನರನ್ನು ತಮಗಿಷ್ಟ ಬಂದಹಾಗೆ ಕುಣಿಸುವ ಅವಕಾಶ ಪಡೆಯಲು ಈ ಪೈಪೋಟಿ.

ಬಂಡವಾಳಶಾಹಿ ಪದ್ಧತಿ ಪರಿಪೂರ್ಣವಾಗಿ ಬೆಳೆದಿರುವ ಅಮೇರಿಕದಲ್ಲಿ ಆರ್ಥಿಕ ಬಿಕ್ಕಟ್ಟು ವಿಪರೀತವಾಗಿದೆ. ನಿರುದ್ಯೋಗ ಸಮಸ್ಯೆ ದೇಶಕ್ಕೆ ದೊಡ್ಡ ತಲೆನೋವು. ಒಂದು ಕಡೆ ಅತೀವ ಶ್ರೀಮಂತಿಕೆ; ಇನ್ನೊಂದೆಡೆ ತೀವ್ರ ಬಡತನ. ಕರಿಯರ ಮತ್ತು ಬಡವರ ಶೋಷಣೆಗಂತೂ ಮಿತಿಯೇ ಇಲ್ಲ. ಇಂಥ ಪರಿಸ್ಥಿತಿಯಲ್ಲಿ ದೇಶದ ಆಂತರಿಕ ಸಮಸ್ಯೆಗಳನ್ನು ಬಗೆ ಹರಿಸುವುದಕ್ಕಿಂತ, ಮಿಲಿಟರಿ ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ಆ ದೇಶದ ಸರ್ಕಾರಕ್ಕೆ ಹೆಚ್ಚಿನ ಕಾಳಜಿಯಿದೆ. ಅಮೇರಿಕ ಸಂಯುಕ್ತ ಸಂಸ್ಥಾನ 1960ರಲ್ಲಿ ರಕ್ಷಣಾ ವೆಚ್ಚಕ್ಕಾಗಿ 45 ಮಿಲಿಯ ಡಾಲರು ಖರ್ಚುಮಾಡಿದರೆ 1985 ರ ಹೊತ್ತಿಗೆ 303·9ಮಿಲಿಯ ಡಾಲರು ಖರ್ಚು ಮಾಡುವ ಅಂದಾಜಿದೆ.

ಈ ಏರಿಕೆಗೆ ಕಾರಣವೇನು?.

ಬಂಡವಾಳಶಾಹಿ ಪದ್ಧತಿಯ ಅಸ್ತಿತ್ವಕ್ಕೆ ಕೊಡಲಿ ಪೆಟ್ಟು ಬೀಳಬಹುದು ಎಂಬ ಭೀತಿ.

ಜಗತ್ತಿನ ಮೂರನೇ ಒಂದು ಭಾಗದಲ್ಲಿ ಸಮಾಜವಾದೀ ವ್ಯವಸ್ಥೆ ನೆಲೆಗೊಂಡು ಅಲ್ಲಿನ ಜನರ ಶೋಷಣೆ ದಬ್ಬಾಳಿಕೆಗಳು ಕೊನೆಗಂಡಿವೆ. ಹಸಿವು, ನಿರುದ್ಯೋಗ, ಬಡತನ, ನಿರಕ್ಷರತೆ ಇವೆಲ್ಲಾ ಅಲ್ಲಿ ತೊಲಗಿರುವುದರಿಂದ ಅಲ್ಲಿನ ಜನ ಶಾಂತಿಯಿಂದ ಬದುಕುತ್ತಿದ್ದಾರೆ. ಈ ಹೊಸ ಬಗೆಯ ಸಮಾಜ ವ್ಯವಸ್ಥೆಯಿಂದ ಪ್ರಭಾವಿತರಾದ ಜಗತ್ತಿನ ಇತರ ರಾಷ್ಟ್ರಗಳ ಜನರು, ಅಂಥ ಒಂದು ಬದುಕು ತಮ್ಮಲ್ಲೂ ಸ್ಥಾಪಿತವಾಗಬೇಕು ಎಂದು ಹೋರಾಡುತ್ತಿದ್ದಾರೆ. ಏಷ್ಯ, ಆಫ್ರಿಕ, ದಕ್ಷಿಣ ಅಮೆರಿಕ ಮತ್ತು ಮಧ್ಯ ಅಮೆರಿಕಗಳ ಅನೇಕ ದೇಶಗಳು ಈ ದಾರಿ ಹಿಡಿಯಲು ಕಾತರವಾಗಿವೆ. ಇದರಿಂದ ಸಹಜವಾಗಿಯೇ ಬಂಡವಾಳಶಾಹೀ ರಾಷ್ಟ್ರಕ್ಕೆ ಆತಂಕವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಈ ದೇಶಗಳನ್ನು ತನ್ನ ಹತೋಟಿಯಲ್ಲಿರಿಸಿಕೊಳ್ಳಲು ಮಿಲಿಟರಿ ಶ್ರೇಷ್ಠತೆಯೊಂದೇ ಉಪಾಯ ಎಂದು ಆ ರಾಷ್ಟ್ರ ನಂಬಿದೆ. ಇದಕ್ಕೆ ಬೆಂಬಲವಾಗಿ ಇದರ ಮಿತ್ರ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಪಶ್ಚಿಮ ಜರ್ಮನಿ ಮುಂತಾದುವೂ ನಿಂತಿವೆ.

ವ್ಯೂಹ ರಚನೆ

ಅಮೆರಿಕದ ಸಂಯುಕ್ತ ಸಂಸ್ಥಾನದ ಸೇನಾ ನೆಲೆಗಳು ಪ್ರಪಂಚದೆಲ್ಲೆಡೆಯಲ್ಲೂ ವ್ಯಾಪಿಸಿವೆ. ಸುಮಾರು 1500 ಸೇನಾ ನೆಲೆಗಳು ಪ್ರಪಂಚದ 32 ರಾಷ್ಟ್ರಗಳಲ್ಲಿ ಬೇರೂರಿವೆ. ಇವುಗಳಲ್ಲಿ ಬಾರ್ಬಡಾಸ್, ಗ್ರೀನ್ ಲ್ಯಾಂಡ್, ಐಸ್ ಲ್ಯಾಂಡ್, ಗ್ರೇಟ್ ಬ್ರಿಟನ್, ಇಟಲಿ, ಗ್ರೀಸ್, ಡಿಯಾಗೋಗಾರ್ಸಿಯಾ, ಫಿಲಿಪ್ಪೈನ್ಸ್, ಜಪಾನ್ ಪ್ರಮುಖವಾದುವು. ಅಂದರೆ ಸಮಾಜವಾದೀ ದೇಶಗಳ ಸುತ್ತಲೂ ತನ್ನ ಸೇನಾ ನೆಲೆಗಳಿಂದ ಕುಣಿಕೆ ಬಿಗಿ ಮಾಡುವ ಆಟ ಇದಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಪರ್ಷಿಂಗ್ ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ನೆಲೆಗೊಳಿಸಿದರೆ ಅಲ್ಲಿಂದ ಕೇವಲ ಆರು ನಿಮಿಷಗಳಲ್ಲಿ ಸೋವಿಯತ್ ದೇಶದ ಯಾವುದೇ ಭಾಗವನ್ನಾದರೂ ಅದು ನಾಶಮಾಡಬಹುದಾಗಿದೆ.

ಗಂಡಾಂತರ ಭಾರತದ ಬಾಗಿಲನ್ನೂ ತಟ್ಟುತ್ತಿದೆ. ಹಿಂದೂ ಸಾಗರದ ಡಿಯಾಗೋಗಾರ್ಸಿಯಾದಲ್ಲಿ ಸೇನಾ ನೆಲೆ ಬಲಗೊಳ್ಳುತ್ತಲಿದೆ. ಪಾಕಿಸ್ತಾನಕ್ಕೆ ಬಾಂಬರುಗಳನ್ನೂ ಹಾರ್ಪೂನ್ ಕ್ಷಿಪಣಿಗಳನ್ನೂ ಒದಗಿಸಲಾಗಿದೆ. ಶ್ರೀಲಂಕಾದ ಟ್ರಿಂಕಾಮಲೆಯಲ್ಲಿ ಸೈನಿಕ ನೆಲೆ ಸಜ್ಜಾಗುತ್ತಿದೆ. ಬಂಗ್ಲಾದೇಶಕ್ಕೆ ಮಿಲಿಟರಿ ಸರಬರಾಜು ನಡೆಯುತ್ತಿದೆ. ಈ ಎಲ್ಲ ಕರಾಮತ್ತುಗಳ ಉದ್ದೇಶ, ಶಾಂತಿಪ್ರಿಯ ರಾಷ್ಟ್ರವನ್ನು ಬೆದರಿಸಿ ತನ್ನ ಬಗಲಲ್ಲಿ ಇಟ್ಟುಕೊಳ್ಳುವುದು.

ಇಂಥ ಪರಿಸ್ಥಿತಿಯಲ್ಲಿ ಸಮಾಜವಾದೀ ರಾಷ್ಟ್ರಗಳು ಸುಮ್ಮನೆ ಕುಳಿತಿರುವುದು ಸಾಧ್ಯವಿಲ್ಲ. ತಮ್ಮ ಆತ್ಮರಕ್ಷಣೆಗಾದರೂ ಅವು ಅಣ್ವಸ್ತ್ರಗಳನ್ನು ತಯಾರಿಸ ಬೇಕಾಗಿದೆ. ಹೀಗೆ ರಕ್ಷಣಾ ವೆಚ್ಚ ಏರಿದುದರಿಂದ ಸಹಜವಾಗಿ ಜನಪರ ಕಾರ್ಯಕ್ರಮಗಳಿಗೆ ಧಕ್ಕೆಯಾಗಿದೆ. ಆದರೆ ತಾನು ಅಣ್ವಸ್ತ್ರ ಹೊಂದಿದ್ದರೂ "ಅದನ್ನು ಪ್ರಯೋಗಿಸುವುದರಲ್ಲಿ ಮೊದಲ ದೇಶವಾಗುವುದಿಲ್ಲ" ಎಂದು ಸೋವಿಯತ್ ಒಕ್ಕೂಟ ಘೋಷಿಸಿರುವುದು ಅದರ ಶಾಂತಿಪ್ರಿಯ ಬಯಕೆಯ ಸಂಕೇತವಾಗಿದೆ. ಅಣ್ವಸ್ತ್ರ ಹೊಂದಿರುವ ಚೀನವೂ ಇದೇ ಮಾತನ್ನಾಡಿದೆ. ಆದರೆ ಅಮೆರಿಕ ಆ ಮಾತನ್ನು ಆಡದುದು ಅದರ ಸಮರದಾಹವನ್ನು ಸ್ಪಷ್ಟವಾಗಿ ಪ್ರತಿಬಿಂಬಿಸುತ್ತದೆ. ಸೋವಿಯತ್ ಒಕ್ಕೂಟ ಮಿಲಿಟರಿ ಶ್ರೇಷ್ಠತೆಯನ್ನು ಎಂದೂ ಉದ್ದೇಶವಾಗಿ ಇಟ್ಟುಕೊಂಡಿಲ್ಲ. ಶಸ್ತ್ರಾಸ್ತ್ರ ಪೈಪೋಟಿಯನ್ನು ನಿವಾರಿಸಲು, ಅನಂತರ ಅಣು ಸಮರದ ಭೀತಿಯನ್ನು ತೊಡೆದುಹಾಕಲು ಅದು ಎಲ್ಲ ಪ್ರಯತ್ನಗಳನ್ನು ಮಾಡುತ್ತಿದೆ.

ದಿವಂಗತ ಬ್ರೆಜ್ನೆವ್ ಒಂದು ಕಡೆ ಹೀಗೆ ಹೇಳಿದ್ದರು:

[27 ನೇ ಪುಟ ನೋಡಿ]

ಯಾವುದೀ ದನಿ ?

'ಅಪ್ಪ ಎಲ್ಲಿ' ಎಂದು
ಅವರುಗಳು ಕೇಳುವಾಗ
ಕರೆದು ತಾ ಅವರನ್ನು
ಊರಿನಾಚೆಗಿನ ನೀರವ ಬಯಲಿಗೆ
ಸೂರ್ಯ ಮುಳುಗುವ ಹೊತ್ತಿಗೆ
    ನಾನಿರುತ್ತೇನೆ ಅಲ್ಲಿ
    ನಿನ್ನ ನಿರೀಕ್ಷೆಯಲ್ಲಿ
    ನೀನು ಹೇಳುವುದ ಕೇಳಲು
    ಮೌನಿಯಾಗಿ.

ಕಂಪಿಸುವಂತಿದೆ ನಿನ್ನಮೈ
ರೊಯ್ಯನೆ ಬೀಸುವ ಗಾಳಿಗೆ
ಬಾ, ಒರಗಿಕೋ ನನ್ನ ಮೇಲೆ
ಕೊಂಚ ಹಿತವಾಗಬಹುದು
ಅರೆ! ಮಗು ಕೂಡ ನಡುಗುತ್ತಿದೆ
ಅಪ್ಪಿಕೋ ನಿನ್ನೆದೆಗೆ ಮಗುವನ್ನು
    ಅಂದು ನಡೆದದ್ದ ನೆನೆದು
    ದುಃಖಿಸಬೇಡ
    ನನ್ನಂತೆ ಮೌನಿಯಾಗ ಬೇಡ
    ನಿನ್ನೆ ಮುಳುಗಿದ ಸೂರ್ಯ
    ಉದಿಸಲಿಲ್ಲವೇ ಇಂದು ?

ಬೆಳಗಾಗಲೇ ಬೇಕು
ನಿನಗೂ ಈ ಜಗತ್ತಿಗೂ ಒಂದು ದಿನ
ಅಲ್ಲಿನ ವರೆಗೆ ನೀ ಸುಮ್ಮನಿರುವುದೇಕೆ
ನಾಳೆ ಬೆಳಕಾಗುವ ಮೊದಲು
ಇಂದೇ ಅವರಿಗೆ ಹೇಳಿಬಿಡು
ಅಂದು ನಡೆದದ್ದನ್ನು
    ಬೆಳಗಾದ ನಂತರ
    ಬಂದೇ ಬರುತ್ತಾರೆ ಅವರು
    ಸೆಟೆದ ಎದೆಯೊಂದಿಗೆ
    ಹೆಮ್ಮೆ ತುಂಬಿದ ನೋಟಗಳೊಂದಿಗೆ
    ಸಲ್ಲಿಸಲು ವೀರ ವಂದನೆಗಳ
    ಕೆಂಪು ಹೂಗಳರಳಿದ ನನ್ನ
    ಸಮಾಧಿಗೆ

— ನಾ ವ ರ ಸ ಸ್

ತೆಲಂಗಾಣ ಹೋರಾಟದಲ್ಲಿ ಮಹಿಳೆ

ಲೇ : ಸ. ರಘುನಾಥ

ಹೋರಾಟ, ಚಳುವಳಿ, ಆಂದೋಳನ ಯಾವುದಾದರೂ ಸರಿ, ಸಫಲವಾಗ ಬೇಕಾದರೆ ಇಡೀ ಸಮುದಾಯದ ಜಾಗೃತಿ, ಸಹಾನುಭೂತಿ, ಸಹಕಾರ ಅಗತ್ಯ. ಕೇವಲ ಜಾತಿ ಸಂಘಟನೆಗಳಾಗಲಿ, ಮತ ಸಂಘಟನೆಗಳಾಗಲೀ ಯಾವ ಮಹತ್ತಾದ್ದನ್ನೂ ಸಾಧಿಸಲಾರವು. ಹೋರಾಟದ ಸಂದರ್ಭದಲ್ಲಿ ಸಮಾಜದ ಮಹಿಳೆಯೂ ಪ್ರಮುಖಳಾಗುತ್ತಾಳೆ. ಅನೇಕ ಸಂದರ್ಭಗಳಲ್ಲಿ ಮಕ್ಕಳ ಪಾತ್ರವೂ ಅಗತ್ಯದ್ದೂ ಮಹತ್ತರದ್ದೂ ಆಗುತ್ತದೆ ಇದಕ್ಕೆ ಭಾರತದ ಸ್ವಾತಂತ್ರ್ಯ ಹೋರಾಟಗಳು, ಶ್ರೀಕಾಕುಳಂ ರೈತ ಹೋರಾಟ, ತೆಲಂಗಾಣ ರೈತ ಹೋರಾಟಗಳು ಹಾಗು ಮತ್ತಿತರ ಹೋರಾಟಗಳ ಇತಿಹಾಸ ನಮಗೆ ಅಗತ್ಯ ಪುರಾವೆಗಳನ್ನು ಒದಗಿಸುತ್ತವೆ.

ಆಂಧ್ರದಲ್ಲಿ 1946 ರಿಂದ ಸುಮಾರು 1970 ರ ಅವಧಿಯಲ್ಲಿ ಪಾಳೆಯಗಾರಿ ಭೂಮಾಲೀಕರ ವಿರುದ್ಧ ನಡೆದ ಹೋರಾಟಗಳು ಎರಡು. ಒಂದು : ತೆಲಂಗಾಣ ರೈತ ಹೋರಾಟ, ಎರಡು: ಶ್ರೀಕಾಕುಳಂ ರೈತ ಹೋರಾಟ. ಈ ಎರಡೂ ಹೋರಾಟಗಳನ್ನು ಜನಪರ ಹೋರಾಟಗಳೆಂದು ಇತಿಹಾಸಕಾರರು ದಾಖಲಿಸಿದ್ದಾರೆ. ಸ್ವಾತಂತ್ರ್ಯ ಹೋರಾಟಗಳಲ್ಲಿ ಪಾಲುಗೊಂಡಂತೇ ಈ ಹೋರಾಟಗಳಲ್ಲೂ ಮಹಿಳೆಯರು ಗಣನೀಯ ಪಾತ್ರ ವಹಿಸಿದರು. ಹೋರಾಡುತ್ತ ಮಾನ-ಪ್ರಾಣಗಳನ್ನು ಕಳೆದುಕೊಂಡರು. ಹಾಗೇ ಉಳಿಸಿಕೊಂಡರೂ ಸಹ.

1946 ರಿಂದ 1951 ರವರೆಗೆ ಸಾಗಿದ ತೆಲಂಗಾಣ ರೈತ ಹೋರಾಟದಲ್ಲಿ ಮಹಿಳೆಯರು ಹಲವಾರು ಕಾರಣಗಳಿಂದ ಹೋರಾಟ ಕಣಕ್ಕಿಳಿಯ ಬೇಕಾಯಿತು. ಅವುಗಳಲ್ಲಿ ಮುಖ್ಯವಾದ ಕೆಲವು- ತಮ್ಮ ಸ್ವಾಧೀನದಲ್ಲಿದ್ದ ನೆಲವನ್ನು ತಮ್ಮಲ್ಲೇ ಉಳಿಸಿಕೊಳ್ಳುವುದು, ಜಮೀನ್ದಾರ ಕಸಿದುಕೊಂಡ ಭೂಮಿಯನ್ನು ಪಡೆದು ಉಳಿಸಿಕೊಳ್ಳುವುದು, ದುಡಿಮೆಗೆ ತಕ್ಕ ಕೂಲಿ ಪಡೆಯುವುದು, ಮಾನ ರಕ್ಷಣೆ ಮತ್ತು ಕುಟುಂಬ ರಕ್ಷಣೆ ಮಾಡಿಕೊಳ್ಳುವುದು, ತಮಗಾಗಿ ಹೋರಾಡುತ್ತಿರುವ ಕಮ್ಯೂನಿಸ್ಟ್ ಪಾರ್ಟಿ ಕಾರ್ಯಕರ್ತರ ರಕ್ಷಣೆ ಮಾಡುವುದು, ಮುಂತಾದವು. ಇದಲ್ಲದೆ ಗೆರಿಲ್ಲಾ ದಳಗಳಲ್ಲಿ, ನಗರಗಳಲ್ಲಿನ ಪಕ್ಷದ ರಹಸ್ಯ ಕಾರ್ಯಾಲಯಗಳಲ್ಲಿ ಇವರ ಪಾತ್ರ ಸ್ಮರಣೀಯವಾದವು.

ಈ ಮೇಲಿನ ಎಲ್ಲ ಸಂದರ್ಭಗಳಲ್ಲಿಯೂ ತೆಲಂಗಾಣದ ಮಹಿಳೆ ಪಟ್ಟ ತೊಂದರೆ ಅಷ್ಟಿಷ್ಟಲ್ಲ. ಮೊದಲು ನಿಜಾಮನ, ಅವನ ರಜಾಕಾರರ ವಿರುದ್ಧ ಸೆಣಸಿ ಮಾನ ಕಳೆದುಕೊಂಡವರೆಷ್ಟೋ ಮಂದಿ. ನಂತರ ಭಾರತ ಸೈನ್ಯದೊಡನೆಯೂ ಇದೇ ಆಯಿತು. ಈ ಎರಡು ಗುಂಪುಗಳಿಂದ ಅಮಾನುಷ ಚಿತ್ರಹಿಂಸೆ, ಅತ್ಯಾಚಾರಗಳಿಗೆ ಪುರುಷರಷ್ಟೇ ಅಲ್ಲ ಮಹಿಳೆಯರೂ ಹೆಚ್ಚಾಗಿ ಬಲಿಯಾದರು. ಮಹಿಳೆಯರೆಂಬ ವಿವೇಚನೆಯೂ ಇಲ್ಲದೆ ಶತ್ರುಗಳು ಹುಣಿಸೆ ಬರಲಗಳಿಂದ ಮೈ ಚರ್ಮ ಹರಿಯುವಂತೆ, ನೆತ್ತರು ಚಿಮ್ಮುವಂತೆ, ಮಾಂಸ ಖಂಡಗಳು ಕಿತ್ತು ಬರುವಂತೆ ಥಳಿಸಿದರು. ಮೇಲಾಗಿ ಮಾನ ಭಂಗಗಳನು ಮಾಡಿದರು. ಇಂತಹ ಅಮಾನುಷ ವರ್ತನೆಗೆ ಗುರಿಯಾದವರು ಲಂಬಾಣಿ ಸ್ತ್ರೀಯರು ಹಾಗು ಹರಿಜನ ಮಹಿಳೆಯರೊಂದಿಗೆ ಬಡವನ ಮಡದಿಯರು, ಅಕ್ಕ ತಂಗಿಯರು.

ತಮ್ಮ ಆತ್ಮ ಗೌರವವನ್ನು ಕಾಪಾಡಿಕೊಳ್ಳಲು, ಕಿರಾತಕರಾದ ಸೈನಿಕರ ದೌರ್ಜನ್ಯಕ್ಕೆ ತಮ್ಮ ಧನ, ಮಾನ ಪ್ರಾಣಗಳು ಬಲಿಯಾಗದಂತೆ ರಕ್ಷಿಸಿಕೊಳ್ಳಲು ಮಹಿಳೆಯರು ತೊಟ್ಟ ದೀಕ್ಷೆ, ತೋರಿದ ಪ್ರತಿಭಟನೆ, ಹೋರಾಟ ಪಟುತ್ವ ಮರೆಯಲು ಸಾಧ್ಯವೇ ಇಲ್ಲ. ಅಂದು ಅವರಲ್ಲಿ ಉಂಟಾದ ನೂತನ ಚೈತನ್ಯ, ನೈತಿಕ ಸಾಂಸ್ಕೃತಿಕ ಜೀವನದಲ್ಲಿ ಅವರು ತಂದುಕೊಂಡ ಹೊಸ ಬದಲಾವಣೆ ಇವೆಲ್ಲ ನೆನೆದರೆ, ಆರ್ಥಿಕವಾಗಿ, ಸಾಮಾಜಿಕವಾಗಿ ತುಳಿಯಲ್ಪಟ್ಟ ನಮ್ಮ ಮಹಿಳೆಯಲ್ಲಿ ಎಂತಹ ಕ್ರಾಂತಿ ದೀಕ್ಷೆ, ಶಕ್ತಿ ಅಡಗಿರುವುದು ಎಂದು ಅರಿವಾಗುವುದು. ಅವರನ್ನು ಸಂಪ್ರದಾಯ ಬಂಧನಗಳಿಂದ ಬಿಡಿಸಿ, ಚಿತ್ರಾಣವಾದ ಆ ಶಕ್ತಿಯನ್ನು ರೆಗಡಲು ಬಿಟ್ಟರೆ ಎಂತಹ ಅದ್ಭುತವನ್ನು ಬೇಕಾದರೂ ಸಾಧಿಸಬಹುದು. ಈ ಮಾತಿಗೆ ತೆಲಂಗಾಣ ಹೋರಾಟ ಕಾಲದಲ್ಲಿ ಮಹಿಳೆ ವಹಿಸಿದ ಪಾತ್ರವನ್ನು ಪರಿಚಯ ಮಾಡಿ ಕೊಳ್ಳಬಹುದು.

ನೆಲ ಉಳಿಸಿಕೊಳ್ಳುವಲ್ಲಿ ಮಹಿಳೆಯ ಪಾತ್ರ

ಅಯಿಲಮ್ಮ :

ಇವಳು ಜನಗಾಂ ತಾಲ್ಲೂಕಿನ ಪಾಲಕುರ್ತಿ ಎಂಬ ಹಳ್ಳಿಯ ನಿವಾಸಿ. ಅಗಸಗಿತ್ತಿ, ಬಡವಿ. ಇದೇ ತಾಲ್ಲೂಕಿನ ದೊಡ್ಡ ಜಮೀನ್ದಾರ ವಿಸುನೂರು ದೇಶಮುಖ ರಾಮಚಂದ್ರಾ ರೆಡ್ಡಿ. ಸುಮಾರು 40,000 ಎಕರೆ ಜಮೀನು ಇವನದು. ನಲ್ಗೊಂಡ ಜಿಲ್ಲೆಯ ನನಗಾಮ್ ತಾಲ್ಲೂಕಿನ 40 ಹಳ್ಳಿಗಳಲ್ಲಿ ಇವನ ಭೂ ಒಡೆತನವಿತ್ತು. ಇವನ ಜಮೀನಿನ ಬದಿಯಲ್ಲಿ ಅಯಿಲಮ್ಮನ ತುಂಡು ನೆಲ. ಅದನ್ನು ಒತ್ತುವರಿ ಮಾಡಿ ತನ್ನದಾಗಿಸಿಕೊಳ್ಳುವ ದುಷ್ಟ ಬುದ್ಧಿ ಈ ಖೂಳನದು. ಅಯಿಲಮ್ಮ ಮಣಿಯಲಿಲ್ಲ. ಅವಳು ಬೆಳೆದ ಬೆಳೆಯನು ಕೊಯ್ದು ತರುವಂತೆ ಗೂಂಡಾಗಳನ್ನು ಬಿಟ್ಟ. ಆದರೆ ಆಕೆ ಆಂಧ್ರ ಮಹಾಸಭ ಹಾಗು ಕಮ್ಯೂನಿಸ್ಟ್ ಪಾರ್ಟಿಗಳ ಸಹಾಯದಿಂದ ತೀವ್ರವಾಗಿ ಹೋರಾಡಿ ತನ್ನ ನೆಲವನ್ನು ಉಳಿಸಿಕೊಂಡಳು ನಂತರ ತನ್ನ ಗಂಡುಮಕ್ಕಳೊಂದಿಗೆ ಹೆಣ್ಣು ಮಕ್ಕಳನ್ನೂ ಪಾರ್ಟಿಗೆ ಬೆಂಬಲವಾಗಿ ನಿಂತು ಹೋರಾಡಲು ಕಳುಹಿಸಿದ್ದು ಮಾತ್ರವಲ್ಲದೆ, ಎಂಥ ಸಂದರ್ಭದಲ್ಲೂ ಪಾರ್ಟಿ ಬಿಡಬೇಡಿರೆಂದು ಪ್ರೋತ್ಸಾಹಿಸಿದಳು. ಇದು ತೆಲಂಗಾಣ ರೈತನು ತನ್ನ ನೆಲಕ್ಕಾಗಿ ನಡೆಸಿದ ಹೋರಾಟದಲ್ಲಿ ಮೊದಲ ದಿಸೆಗೆ ಅವಳೊಂದು ಗುರುತು.

ಮುಟ್ಟೆಯ್ಯನ ಮಡದಿ:

ಮುಟ್ಟೆಯ್ಯ ವೃತ್ತಿಯಲ್ಲಿ ಕುಂಬಾರ. ಮಿರಿಯಾಲಗೂಡೆಂ ತಾಲ್ಲೂಕಿನ ಕುಮುದಾಪುರದವನು. ಇಲ್ಲೊಬ್ಬ ಜಮೀನ್ದಾರ. ಇವನು 10,000 ಎಕರೆ ಭೂಮಿಯ ಒಡೆಯ ಬಾಬಾ ಸಾಹೇಬ್ ಪೇಟದ ದೇಶಮುಖ. ಇವನ ಕಣ್ಣು ಮುಟ್ಟೆಯ್ಯನ ತುಂಡು ನೆಲದ ಮೇಲೆ. ತನಗೆ ಆ ತುಂಡು ಭೂಮಿಯನ್ನು ಸ್ವಾಧೀನ ಪಡಿಸಲಿಲ್ಲವೆಂದು ಕೆರಳಿ ಸೈನ್ಯದ ಸಹಾಯದಿಂದ ಚಿತ್ರಹಿಂಸೆ ನೀಡಿ ಕಡೆಗೆ ಕೊಲ್ಲಿಸಿಬಿಟ್ಟ. ಆದರೂ ಅವನ ಮಡದಿ ಆ ನೀಚ ಸಾಹುಕಾರರನ್ನು, ಸೈನ್ಯವನ್ನು ಎದುರಿಸಿ ನಿಂತಳು. ಅವರು ಅವಳನ್ನು ಕೆಡಿಸಿದರು. ನಂತರ ಅಗ ಊರ ಜನರಲ್ಲಿ ಮೊರೆಯಿಟ್ಟು, ಅವರ ಸಹಕಾರದೊಂದಿಗೆ ಹೋರಾಡಿ ತನ್ನ ಭೂಮಿಯನ್ನು ಉಳಿಸಿಕೊಂಡಳು. ಅವಳದೊಂದೇ ಮಾತು: "ಹೌದು! ಆ ಭೂಮಿ ನನ್ನದು."

ಕಾಳಿಯಾದ ಲಂಬಾಣಿ ;

ವಾಡಪಲ್ಲಿಯಲ್ಲಿ ಒಬ್ಬ ಲಂಬಾಣಿರೈತ. ಇವನೂ ತನ್ನ ತುಂಡು ಭೂಮಿಯನ್ನ ಉಳಿಸಿಕೊಳ್ಳುವುದಕ್ಕಾಗಿ ಕೊಲೆಯಾದ ಆದರೆ ಅವನ ಹೆಂಡತಿ ಪೋಲೀಸರ ಭೀಬತ್ಸ ವರ್ತನೆಯನ್ನು ಎದುರಿಸಿ ತನ್ನ ನೆಲವನ್ನು ತಾನು ಉಳಿಸಿಕೊಂಡಳು

ಹೀಗೆ ಕೊಂಡ ಪೋಲು, ಮೊದ್ದುಲಕುಂಟ ಎಂಬಲ್ಲಿ ಲಂಬಾಣಿ ರೈತರ ಮೇಲೆ ನಡೆದ ದೌರ್ಜನ್ಯವನ್ನು ಸಹಿಸಿ ಎದುರಿಸಿ ಹೋರಾಡಿ ತಮ್ಮ ತಮ್ಮ ಜಮೀನನ್ನು ಉಳಿಸಿಕೊಡ ಲಂಬಾಣಿ ಮಹಿಳೆಯರುಂಟು.

ವಿರಾರಂ ಎಂಬ ಹಳ್ಳಿಯ ಲಂಬಾಣಿ ರೈತನ ಜಮೀನನ್ನು ಸ್ಥಳೀಯ ಜಮೀನುದಾರ ವಶಪಡಿಸಿಕೊಂಡಿದ್ದ. ಅದನ್ನು ಹೇಗೋ ಮತ್ತೆ ತಮ್ಮದಾಗಿಸಿಕೊಂಡಿತ್ತು ಆ ಕುಟುಂಬ. ಆದರೆ ಆ ಸೊಕ್ಕಿದ ಜಮೀನ್ದಾರ ಪೋಲೀಸರ ಸಹಕಾರದಿಂದ ಮತ್ತೆ ಅವರಿಂದ ಆ ನೆಲವನ್ನು ಕಿತ್ತುಕೊಳ್ಳಲು ಹವಣಿಸಿದ. ಗಂಡ ಹೆಂಡ್ತಿ ಇಬ್ಬರೂ ಹೋರಾಡಿದರು. ಪೋಲೀಸರು ಬಸುರಿಯಾದ ಆ ಹೆಣ್ಣುಮಗಳ ಹೊಟ್ಟೆಯ ಮೇಲೆ ಕುಣಿದು ಆಕೆಯನ್ನು ಕೊಂದು ಹಾಕಿದರು.

ಹೆಚ್ಚು ಕೂಲಿಗಾಗಿ ಮಹಿಳೆಯರ ಹೋರಾಟ

ಕೃಷಿ ಕಾರ್ಮಿಕರಲ್ಲಿ ಮಹಿಳೆಯರೇ ಅಧಿಕ. ಕೂಲಿಮಾಡಿದರೆ ಗಂಡನ ಸಂಪಾದನೆಯೊಂದಿಗೆ ತನ್ನದೂ ಸೇರಿ ಎರಡು ಹೊತ್ತು ಗಂಜಿ ಕುಡಿಯಲು ಸಾಧ್ಯವಾಗುವುದು. ಹೀಗಿರುವಾಗ ಜಮೀನ್ದಾರರು, ಶ್ರೀಮಂತ ವರ್ತಕರು ಕೊಡುತ್ತಿದ್ದ ಕೂಲಿ ಅತ್ಯಂತ ಕಡಿಮೆಯದಾಗಿದ್ದು ಜೀವನ ಕಷ್ಟಕರವಾಗಿತ್ತು. ಆದ್ದರಿಂದ ಕೃಷಿಕಾರ್ಮಿಕರ ಮತ್ತು ಬಡವರ ಹೊಟ್ಟೆ ಬಡಿದು ದಾಸ್ತಾನು ಮಾಡಿದ್ದ ಜಮೀನ್ದಾರರ ಉಗ್ರಾಣಗಳಿಗೆ ಶೋಷಿತರ ಧಾಳಿ ಸಂದರ್ಭಗಳಲ್ಲಿ ಮಹಿಳೆಯರು ಮುಂದಿದ್ದರು.

ಕೊಂಡ್ರಪಲ್ಲಿ ಪ್ರಾಂತ್ಯ ಮತ್ತು ಆ ಪರಿಸರದಲ್ಲಿ ದಿನಕೂಲಿ 2-3 ಸೇರು ಧಾನ್ಯ ಪ್ರಮಾಣ. ಅದನ್ನು ನಾಲ್ಕು ಸೇರಿಗೆ ಏರಿಸಬೇಕೆಂದು ಬೇಡಿಕೆ ಒಡ್ಡಿದರು ಕೂಲಿಗಳು. ಆದರೆ ಅಲ್ಲಿನ ಜಮೀನ್ದಾರ ಒಪ್ಪಲಿಲ್ಲ. ರೋಸಿದ ಜನ ಅವನ ದಾಸ್ತಾನು ಮಳಿಗೆಗೆ ಲಗ್ಗೆ ಇಟ್ಟರು. ಒಟ್ಟು ಮಹಿಳೆಯರ ಸಂಖ್ಯೆ ಅಧಿಕವಿತ್ತು. ಕಡೆಗೆ ಆ ಸಾಹುಕಾರ ಹಾದಿಗೆ ಬಂದು ಇವರ ಬೇಡಿಕೆಯನ್ನು ಮನ್ನಿಸಲೇ ಬೇಕಾಯಿತು.

ಪೋಲೀಸರ ಅತ್ಯಾಚಾರ

ಬಾಲೆಮುಲ, ಪಾತ ಸೂರ್ಯಪೇಟೆ, ಮುಲ್ಲಾರೆಡ್ಡಿ ಗೂಡೆಂ, ದೇವರುಪ್ಪುಲ ಮುಂತಾದ ಗ್ರಾಮಗಳ ಮೇಲೆ ಸಶಸ್ತ್ರ ನೈಜಾಂ ರಜಾಕಾರರು ದಾಳಿಮಾಡಿದ ಸಂದರ್ಭದಲ್ಲಿ ಅವರನ್ನು ಕವಣೆಗಳ ಮೂಲಕ ಎದುರಿಸುತ್ತಿದ್ದ ಗಂಡಸರ ಬದಿಯಲ್ಲೇ ನಿಂತು ಮಹಿಳೆಯರು ಕವಣೆಗೆ ಕಲ್ಲುಗಳನ್ನು ಒದಗಿಸಿದರು. ಈ ಕೆಲಸದಲ್ಲಿ ನಿರತಳಾದ ಒಬ್ಬ ಹೆಣ್ಣು ಮಗಳು ಮಲ್ಲಾರೆಡ್ಡಿ ಗೂಡೆಂನಲ್ಲಿ ಪೋಲೀಸರು ನಡೆಸಿದ ಗೋಲಿಬಾರಿಗೆ ಆಹುತಿಯಾದಳು.

ಭಾರತ ಸೈನ್ಯ ಪ್ರವೇಶಿಸಿ, ಕಾಂಗ್ರೆಸ್ ಸರಕಾರ ಆಡಳಿತ ನಡೆಸತೊಡಗಿದ ನಂತರ ಹುಜೂರ್ ನಗರ ತಾಲ್ಲೂಕಿನಲ್ಲಿ, ವಿಜಯನಗರಂ ಕೇಂದ್ರದಲ್ಲಿ ಮಿರ್ಯಾಲ ಗೂಡೆಂನಲ್ಲಿ ಪೋಲೀಸರು ಗಂಡಸರನ್ನು ಬಂಧಿಸಿ ಲಾರಿಗಳಲ್ಲಿ ಜೈಲುಗಳಿಗೆ ಸಾಗಿಸುವ ಸನ್ನಾಹದಲ್ಲಿದ್ದರು. ಆಗ ಮಹಿಳೆಯರು ಲಾರಿಗಳನ್ನು ಸುತ್ತುಗಟ್ಟಿ ತಮ್ಮನ್ನೂ ಕರೆದೊಯ್ಯುವಂತೆ ಒತ್ತಾಯಿಸಿ ಹೇಳಿದರು. ಪೋಲೀಸರು ಮಾಡಿದ ಲಾಠಿಚಾರ್ಜ್‌ಗೆ ಮಹಿಳೆಯರು ಅಳುಕಲಿಲ್ಲ. ಬೇರೆ ಮಾರ್ಗವಿಲ್ಲದೆ ಬಂಧಿತ ಪುರುಷರನ್ನು ಬಿಟ್ಟು ಹೋಗಲೇ ಬೇಕಾಯಿತು.

ರಾಜಾರಂ ಕೇಂದ್ರದಲ್ಲಿ ಲಂಬಾಣಿ ದಂಪತಿಯರು ಗೆರಿಲ್ಲಾಗಳಿಗೆ ಸಹಕಾರಿಗಳಾಗಿದ್ದರೆಂಬ ಗುಮಾನಿಯ ಮೇಲೆ ಅವರನ್ನು ಬಂಧಿಸಿದ ಪೋಲೀಸರು ತಮ್ಮ ಕ್ಯಾಂಪಿಗೆ ಕರೆದೊಯ್ದು ಗೆರಿಲ್ಲಾಗಳ ರಹಸ್ಯ ತಿಳಿಯಲು ಯತ್ನಿಸಿದರು. ಅವರಿಗೆ ತಿಂಡಿ, ನೀರು ಕೊಡದೆ ಬಿಸಿಲಲ್ಲಿ ನಿಲ್ಲಿಸಿದರು. ಅವರು ಪ್ರಜ್ಞೆ ಕಳೆದು ಬಿದ್ದಾಗ ಸ್ವಲ್ಪ ನೀರು ಕೊಟ್ಟು ಚೇತರಿಸಿಕೊಂಡ ನಂತರ ಪುನಃ ಯಥಾ ಸ್ಥಿತಿಯಲ್ಲಿ ನಿಲ್ಲಿಸುತ್ತಿದ್ದರು. ಹೀಗೆ ರಜಾಕಾರರ ನಾನಾ ವಿಧವಾಗಿ ಹಿಂಸಿಸಿದರು, ಅವರ ಕಾಲುಗಳು ಊತ ಬಂದು ಯಾತನೆ ವುಂಟಾದರೂ, ಸಾಯಲು ಸಿದ್ಧರಾದರೇ ಹೊರತು ಸಾಸಿವೆಕಾಳಿನಷ್ಟು ರಹಸ್ಯವನ್ನೂ ಹೊರಹಾಕಲಿಲ್ಲ. ಅವರ ಮೊಂಡುತನಕ್ಕೆ ಪೋಲೀಸರು ಬೇಸತ್ತು ಬಿಡುಗಡೆ ಮಾಡಬೇಕಾಯಿತು.

ನೇರಡ ಗ್ರಾಮ ಹೋರಾಟದ ಕೇಂದ್ರ ಸ್ಥಾನವಾಗಿತ್ತು. ಅಲ್ಲಿನ ಡಿ. ಎಸ್. ಪಿ. ಶ್ರೀನಿವಾಸ ರಾವ್, ಹೈದರಾಬಾದು ಆಡಳಿತಾಧಿಕಾರಿ ವೆಲ್ಲೋಡಿ ಆ ಹಳ್ಳಿಯನ್ನು ಸುಡುವ ಬೆದರಿಕೆ ಹಾಕಿದರು. ಒಮ್ಮೆ ಆ ಹಳ್ಳಿಯ 70 ಮಂದಿ ಮಹಿಳೆಯರನ್ನು

(ಮುಂದಿನ ಪುಟ ನೋಡಿ)

(ಹಿಂದಿನ ಪುಟದಿಂದ)

ಸಿಡಿಸು ಹುಣಿಸೆ ಬರಲುಗಳಿಂದ ಥಳಿಸಿದ ಕಟುಕರು ಅಲ್ಲಿಗೆ ನಿಲ್ಲಿಸದೆ ಅವರೆಲ್ಲರಿಗೂ ಪಯಿಜಾಮುಗಳನ್ನು ತೊಡಿಸಿ ಪಾದಗಳ ಹತ್ತಿರದ ಪಯಿಜಾಮುವನ್ನು ದಾರದಿಂದ ಬಿಗಿಯಾಗಿ ಕಟ್ಟಿ ಪಯಿಜಾಮುವೊಳಕ್ಕೆ ಹಾವುರಾಣಿಗಳನ್ನು ಬಿಟ್ಟರು. ಆ ಸಮಯದಲ್ಲಿ ಆ ಹೆಣ್ಣು ಮಕ್ಕಳು ಅನುಭವಿಸಿದ ಯಾತನೆ ವರ್ಣನಾತೀತ. ಮೇಲಾಗಿ ಆದ ಗಾಯಗಳಿಗೆ ಮೆಣಸಿನ ಪುಡಿಯನ್ನು ಚೆಲ್ಲಿದರು. ಪಾಪ ಅವರೆಲ್ಲಾ ಐದಾರು ತಿಂಗಳವರೆವಿಗೂ ಹಾಸಿಗೆ ಹಿಡಿಯ ಬೇಕಾಯಿತು.

ಹೀಗೆ ಹೋರಾಟಗಾರರನ್ನು ರಕ್ಷಿಸುವಲ್ಲಿ, ಅವರಿಗೆ ಆಹಾರ ಒದಗಿಸುವಲ್ಲಿ ಮುಸ್ಲಿಂ ಮಹಿಳೆಯರೇನೂ ಹಿಂದಿರಲಿಲ್ಲ. ಉದಾಹರಣೆಗೆ ಜೈನಾಬೀಯನ್ನೇ ತೆಗೆದು ಕೊಳ್ಳಬಹುದು. ಈಕೆ ರಾಜಾರಂ ಎಂಬ ಹಳ್ಳಿಯ ನಿವಾಸಿ. ವಿಧವೆ ಬಡವಿ. ಇವಳಿಗೆ ಒಬ್ಬ ಮಗ, ತಮ್ಮ. ಇವರೊಂದಿಗೆ ತಾನೂ ಕೂಲಿ ಮಾಡಿ ಜೀವಿಸುತ್ತಿದ್ದಳು. ಜಿಲ್ಲಾ ಸೀತಾರಾಮ ರೆಡ್ಡಿ-ಆನಿ ರೆಡ್ಡಿಯವರ ನಾಯಕತ್ವದ ದಳ ಹತ್ತಿರದ ಗುಡ್ಡಗಳಲ್ಲಿ ಇದ್ದುಕೊಂಡು ಹೋರಾಟ ನಡೆಸುತ್ತಿತ್ತು. ಜೈನಾಬೀ ಅವರಿಗೆ ಆಹಾರ ಒದಗಿಸುತ್ತಿದ್ದಳು. ಆ ಹಳ್ಳಿಯಲ್ಲೂ ಭಾರತ ಸೈನ್ಯದ ಒಂದು ತುಕಡಿ ಕ್ಯಾಂಪು ಹೂಡಿತ್ತು. ಆದರೂ ಜೈನಾಬೀ ತನ್ನ ಚಾಲಾಕುತನದಿಂದ ಹೋರಾಟಗಾರರಿಗೆ ಧೈರ್ಯದಿಂದ ಅನ್ನ-ನೀರು ಒದಗಿಸುತ್ತಿದ್ದಳು. ಒಮ್ಮೆ ನೂರಾರು ಗೆರಿಲ್ಲಾಗಳು ಹಾದಿ ತಪ್ಪಿ ತಮ್ಮ ಕೇಂದ್ರ ಸ್ಥಾನವನ್ನು ಮುಟ್ಟುವಲ್ಲಿ ವಿಫಲರಾದರು. ಆಗ ಈಕೆ ಅವರಿಗೆ ರಕ್ಷಣೆ ನೀಡಿ ಕೇಂದ್ರ ಸ್ಥಾನಕ್ಕೆ ಅವರನ್ನು ಕರೆದೊಯ್ದು ಮುಟ್ಟಿಸಿದಳು.

ಒಂದು ದಿನ ಮಿಲಿಟರಿ ಅವಳ ಮನೆಯ ಮೇಲೆ ಧಾಳಿ ಮಾಡಿತು. ಅವಳನ್ನು ಹಿಂಸಿಸಿ ಕೇಂದ್ರ ಸ್ಥಾನದ ಸುಳಿವು ಪಡೆಯಲು ಪ್ರಯತ್ನಿಸಿತು. ಆಗೆಲ್ಲ ಅವಳು ನನಗೆ ತಿಳಿಯದು ಎಂಬುದರ ಹೊರತಾಗಿ ಬೇರೊಂದು ನುಡಿಯಲಿಲ್ಲ. ಜಮೀದಾರ ತನ್ನ ಬೂಟು ಕಾಲಿನಿಂದ ಅವಳನ್ನು ಕಚಪಿಚ ತುಳಿದ. ಆದರೂ ಪ್ರಯೋಜನಕ್ಕೆ ಬರಲಿಲ್ಲ. ಇಷ್ಟೆಲ್ಲವನ್ನು ಸಹಿಸಿದ ಆ ಮುಸ್ಲಿಂ ಹೆಣ್ಣುಮಗಳು ಹಿಂದೆಗೆಯದೆ ಮತ್ತೆ ಹೋರಾಟಗಾರರಿಗೆ ಆಹಾರ ಒದಗಿಸುವ ಕಾರ್ಯದಲ್ಲಿ ಮುಂದುವರೆದಳು.

ಮಾನ ರಕ್ಷಣೆಗೆ ಮಹಿಳೆಯರ ಹೋರಾಟ

ಮಾನಭಂಗ ಅರ್ಥಾತ್ ಬಲಾತ್ಕಾರದ ಸಂಭೋಗಕ್ಕೆ ಪ್ರಾಚೀನ ಇತಿಹಾಸದಿಂದ ಆಧುನಿಕ ಇತಿಹಾಸದವರೆಗೆ ವ್ಯಾಪ್ತಿಯಿದೆ. ಇದೊಂದು ಜಾಗತಿಕ ಪಿಡುಗು ಹಾಗೂ ಸಮಸ್ಯೆ. ಯುದ್ಧ ಕಾಲದಲ್ಲಿ, ಶತ್ರು ಸ್ಥಾನದಲ್ಲಿ ಬೀಡು ಬಿಟ್ಟು ನಡೆಸುವ ಮಿಲಿಟರಿ ಕಾರ್ಯಾಚರಣೆಯ ಸಂದರ್ಭಗಳಲ್ಲಿ ಇದು ಸಾಮಾನ್ಯ ಎಂಬುದಕ್ಕೆ ಇರುವ ದಾಖಲೆಗಳು ಅಗಣಿತ. ಇಂತಹ ಮಾನಭಂಗ (ಸಾಮೂಹಿಕ) ಪ್ರಕರಣಗಳಿಂದ ತೆಲಂಗಾಣ ಹೋರಾಟವು ಹೊರತಾಗಲಿಲ್ಲ.

1946-47 ತೆಲಂಗಾಣ ಹೋರಾಟ ತೀವ್ರ ಸ್ವರೂಪ ತಳೆದ ಕಾಲ. ನಿಜಾಂ ಪೋಲೀಸರು, ಅಧಿಕಾರಿಗಳೂ ತೀವ್ರ ಕಾರ್ಯಾಚರಣೆಯಲ್ಲಿ ತೊಡಗಿ ಹೋರಾಟವನ್ನು ಕಿತ್ತೆಸೆಯಲು ತೀವ್ರವಾಗಿ ಸೆಣಸುತ್ತಿದ್ದರು. ಈ ಅವಧಿಯಲ್ಲಿ ಅವರು ಮಾಡಿದ ಅತ್ಯಾಚಾರಕ್ಕೆ ಲೆಕ್ಕವಿಲ್ಲ. ಇದೇ ಕಾಲದಲ್ಲಿ ಅವರು ಅಕುನೂರು, ಮಾಚಿರೆಡ್ಡಿ ಪಲ್ಲೆ ಗ್ರಾಮಗಳ ಮೇಲೆ ಧಾಳಿ ಮಾಡಿ 15 ಮಂದಿ ಹೆಂಗಸರನ್ನು ದಾರುಣವಾಗಿ ಕೆಡಿಸಿದರು. ತೆಲಂಗಾಣದ ಬಗ್ಗೆ ತಟಸ್ಥರಿದ್ದ ಕಾಂಗ್ರೆಸಿಗರೂ ಸಹ ಇದರಿಂದ ಕುಪಿತರಾದದ್ದು ನಿಜ. ಶ್ರೀಮತಿ ಸರೋಜಿನಿ ನಾಯ್ಡು ಅವರ ಮಗಳು ಪದ್ಮಜಾ ನಾಯ್ಡು ಈ ಪ್ರಕರಣವನ್ನು ಕೈಗೆತ್ತಿಕೊಂಡದ್ದು ಒಂದು ವಿಶೇಷವೆ. ಆಕೆ ದೇಶವೇ ಇತ್ತ ಗಮನಹರಿಸಿ ಪ್ರತಿಭಟಿಸುವಂತೆ ಮಾಡಿದಳು.

ಮುಂದೆ ನಿಜಾಮನ ಜಾಡನ್ನೇ ಅಂದಿನ ಭಾರತ ಸೈನ್ಯವು ತುಳಿಯಿತು. ಆದರೆ ಅಂದಿನ ಸರಕಾರಿ ಅಧೀನವಾದ, ಬೂರ್ಷ್ವಾ ವರ್ಗದ ಅಧೀನದಲ್ಲಿದ್ದ ಪತ್ರಿಕೆಗಳು ಈ ಕಾರ್ಯಾಚರಣೆ ಬಗ್ಗೆ ತಪ್ಪಿಯೂ ಒಂದು ಸಾಲು ಬರೆಯಲಿಲ್ಲವಂತೆ. ಸ್ತ್ರೀಯನ್ನು ಗೌರವಿಸುವ ಮಾತು ಮಾತಿನಲ್ಲೇ ಉಳಿಯಿತು.

ಅಂದು ನಡೆದ ಮಾನಭಂಗ ಪ್ರಕರಣಗಳ ಪ್ರಮಾಣದ ಕಲ್ಪನೆಯೇ ಭಯ ಮತ್ತು ಹೇಸಿಗೆಯನ್ನುಂಟು ಮಾಡುತ್ತದೆ. (ಕಾಮ್ರೇಡ್ ಸುಂದರಯ್ಯನವರ ತೆಲಂಗಾಣ ಹೋರಾಟದ ಸಮಷ್ಟಿ ಚರಿತ್ರೆಯನ್ನು ದಾಖಲಿಸಿರುವ "ವೀರ ತೆಲಂಗಾಣಾ ವಿಪ್ಲವ ಪೋರಾಟಂ ಗುಣ ಪಾಠಾಲು" ಮತ್ತು ಕಾಮ್ರೇಡ್ ಬ ಸ ವಪುನ್ನಯ್ಯನವರ "ತೆಲಂಗಾಣ ಸಾಯುಧ ಪೋರಾಟಂ - ವಾಸ್ತವಾಲು" ಎಂಬ ಎರಡು ಬೃಹದ್ಗ್ರಂಥಗಳು ಅಂದಿನ ಎಲ್ಲ ಘಟನೆಗಳ ವಿವರ ನೀಡುತ್ತವೆ.)

ಪಿಂಡಿಪ್ರೋಲು ಹತ್ತಿರದ ಖಾನಾಪುರಂ ಕೇಂದ್ರದ ಸ್ಥಳೀಯ ಪಕ್ಷದ ಕಾರ್ಯಕರ್ತನಾದ ಕಾ। ಇನಾಂನ ಹೆಂಡತಿಯನ್ನು ಹೊತ್ತೊಯ್ದರು. ಸೂರ್ಯರಾವು ಪೇಟ ತಾಲ್ಲೂಕಿನ ನಾಗರಂಗನ ಬೂರ್ಷ್ವಾ ಏಜೆಂಟನೊಬ್ಬ ತೋರಿಸಿಕೊಟ್ಟ ಹೆಣ್ಣು ಮಗಳೊಬ್ಬಳನ್ನು ಹೊತ್ತು ಲಾರಿಯಲ್ಲೇ ಅವಳನ್ನು ಅನುಭವಿಸಿದ ಸೈನಿಕರು, ಆ ನೋವು ತಾಳಲಾರದೆ ಪ್ರಾಣಬಿಟ್ಟ ಆಕೆಯನ್ನು ರಸ್ತೆ ಬದಿಗೆ ಎಸೆದು ಹೋದರು. ಇದೇ ತಾಲ್ಲೂಕಿನ ರಾಗಿ ಪಾಡುನಲ್ಲಿನ ಮೂರು ದಿನಗಳ ಬಾಣಂತಿಯನ್ನು, ಭುವನಗಿರಿ ತಾಲೂಕಿನ ನಾರಿ ಗೂಡೆಂನಲ್ಲಿ ಹಿಂದಿನ ದಿನ ತಾನೆ ಹೆರಿಗೆಯಾದ ಬಾಣಂತಿಯನ್ನು, ತೇನುಗುಂಟ ಎಂಬಲ್ಲಿ ಇಂದೊ ನಾಳೆಯೋ ಹೆರಿಗೆಯಾಗುವ ಸ್ಥಿತಿಯಲ್ಲಿದ್ದ ತುಂಬಿದ ಬಸುರಿಯನ್ನು, ಭುವನಗಿರಿ ತಾಲೂಕು ಯನುಪಾಡು ಮತ್ತು ಪುಷ್ಪಾಪರಗಳಲ್ಲಿ 10 ವರ್ಷ ವಯಸ್ಸಿನ ಬಾಲಕಿಯರನ್ನು ಭೋಗಿಸಿ ಎಸೆಯಿತು ಮಿಲಿಟರಿ.

ಈ ಪರಿಯ ಅತ್ಯಾಚಾರಗಳನ್ನು ಜನರು ಸಹಿಸುವ ಸ್ಥಿತಿ ದೂರ ಉಳಿಯಿತು. ಪ್ರಾಣದ ಹಂಗನ್ನು ತೊರೆದು ಮಾನರಕ್ಷಣೆಗಾಗಿ ಹೋರಾಟಕ್ಕಿಳಿದರು. ಕಮ್ಯುನಿಷ್ಟರ ಪ್ರಭಾವವನ್ನು ಅಡಗಿಸಿದೆವೆಂದು ಭಾವಿಸಿದ ಪೋಲಿಸರು ಕಮ್ಯುನಿಷ್ಟರ ಭಯದಿಂದ ದೂರಾಗಿ ಮತ್ತೂ ಸ್ವೇಚ್ಛಾಚಾರಕ್ಕಿಳಿದರು. ನವಾಬ್ ಪೇಟ ಕ್ಯಾಂಪಿನಿಂದ ನಾಲ್ವರು ಪೋಲಿಸರು ಸಾದಾ ಉಡುಪಿನಲ್ಲಿ ಜನಗಾಂ ತಾಲೂಕಿನ ವಡ್ಡಿಚೆರ್ಲ ಎಂಬ ಹಳ್ಳಿಗೆ ಹೋಗಿ ಹೆಂಗಸರ ಮೇಲೆ ಅತ್ಯಾಚಾರ ನಡೆಸಿದರು. ಈ ಘಟನೆಯಿಂದ ಇಡೀ ಹಳ್ಳಿಯೇ ಕುಪಿತಗೊಂಡಿತು. ಹೆಂಗಸರು ಗಂಡಸರೂ ಪ್ರಾಣ ಕಳೆದುಕೊಳ್ಳಲೂ ಸಿದ್ಧರಾಗಿ ಪ್ರತೀಕಾರ ಮನೋಭಾವದಿಂದ ಆ ಪೋಲಿಸರ ಮೇಲೆ ಬಿದ್ದರು. ನಾಲ್ವರಲ್ಲಿ ಇಬ್ಬರು ತಲೆ ತಪ್ಪಿಸಿಕೊಂಡು ಪರಾರಿಯಾದರು. ಇಬ್ಬರು ಜನರ ಕೈಯಲ್ಲಿ ಸಾವು ಕಂಡರು. ಅಲ್ಲಿಗೇ ಜನರು ತೃಪ್ತರಾಗದೆ ಕಮ್ಯುನಿಷ್ಟರನ್ನು ಕೊಂದಿರುವುದಾಗಿ ನವಾಬ್ ಪೇಟೆ ಕ್ಯಾಂಪಿಗೆ ಸುದ್ದಿ ಮುಟ್ಟಿಸಿದರು. ಆದರೆ ಖುಷಿಯಿಂದ ಬಂದ ಪೋಲಿಸರು ಕಂಡದ್ದು ತಮ್ಮ ಹೆಣಗಳನ್ನು. ಇದರಿಂದ ಕೆರಳಿದ ಪೋಲಿಸರು ಊರ ಮಂದಿಯನ್ನು ಮನಸೋ ಇಚ್ಛೆ ಥಳಿಸ ತೊಡಗಿದರು. ಅಂದೇ ಜನಗಾಮ್‌ಗೆ ಭೇಟಿಯಿತ್ತ ಮಿಲಿಟರಿ ಜನರಲ್ ನಂಜಪ್ಪನವರನ್ನು ಕಂಡು "ನಿಮ್ಮವರು" ನಮ್ಮ ಹೆಂಗಸರನ್ನು ಅವಮಾನ ಪಡಿಸಿದರು, ನಾವು ಅವರನ್ನು ಕೊಂದೆವು" ಎಂದು ಜನರಲ್ಲನ ಮುಖದೆದುರೇ ಹೇಳಿದರು.

ಪ್ರೊದ್ದುಟೂರು ಗ್ರಾಮದ ಮೇಲೆ ಮಿಲಿಟರಿ ದಾಳಿ ನಡೆಯಿತು. ಜನರನ್ನು ತಳಿಸಿ ನಾಲ್ವರು ಯುವಕರನ್ನು ಕೊಂದು ಜನರ ಮನದಲ್ಲಿ ಭೀತಿ ತುಂಬಿಸಿ ಹೆಂಗಸರನ್ನು ಸೆರೆ ಹಿಡಿವ ಪ್ರಯತ್ನ ನಡೆಯಿತು, ಆಗ ಚದುರಿ ಹೋಗಿದ್ದ ಹೆಂಗಸರೆಲ್ಲ ಒಂದುಗೂಡಿ ಮಿಲಿಟರಿಯವರನ್ನು ಸುತ್ತುವರೆದು ಹೋರಾಡಿ ತಮ್ಮ ಒಡಗೆಯವರನ್ನು ರಕ್ಷಿಸಿಕೊಂಡರು.

ಅದು 1949ರ ಡಿಸೆಂಬರ್ ತಿಂಗಳ ಒಂದು ದಿನ. ಸೈನಿಕನೊಬ್ಬ ಬಸುರಿ ಹೆಣ್ಣುಮಗಳೊಬ್ಬಳನ್ನು ಅಂಗಳದಲ್ಲೆ ಬಲವಂತ ಮಾಡುತ್ತಿದ್ದ. ಆಕೆ ಅವನನ್ನ ನಯ ನುಡಿಗಳಿಂದ ಒಲಿಸಿ ಕೋಣೆಗೆ ಕರೆದೊಯ್ದು ಹಾಲು ತರುವ ನೆಪದಲ್ಲಿ ಹೊರಬಂದು ಬಾಗಿಲು ಜಡಿದು ಊರ ಹೆಣ್ಣು ಮಂದಿಯನ್ನೆಲ್ಲಾ ಕರೆ ತಂದು ಸಹಸ್ರನಾಮ ಮಾಡಿಸಿದಳು. ನಂತರ ಅವನ ಜೊತೆಗಾರರು ಬಂದು ಕ್ಷಮೆ ಕೋರಿ ಆ ನಾಮರ್ದನನ್ನು ಬಿಡಿಸಿಕೊಂಡು ಹೋದರು.

ಭಬ್ಬು ವೆಂಕನ್ನ ಬಾವಿಯ ಲಂಬಾಣಿ ತಂಡದ ಹೆಂಗಸರ ಮಾನಭಂಗ ಮಾಡಲು ಸೈನಿಕರು ಯತ್ನಿಸಿದರು. ತಂಡದ ಹೆಂಗಸರು, ಗಂಡಸರು ಒಂದಾಗಿ ಪ್ರತಿಭಟಿಸಿದರು. ನಂತರ ತಾಂಡದ ಜನರೆಲ್ಲ ಒತ್ತಟ್ಟಿಗೆ ಕೂಡಿ ರಾತ್ರಿ ಇಡೀ ಎಚ್ಚರದಿಂದಿದ್ದು ಯಾವೊಬ್ಬಳ ಮೇಲೂ ಯಾವೊಬ್ಬ ಮಿಲಿಟರಿ ಯುವನೂ ಕೈಹಾಕದಂತೆ ನೋಡಿಕೊಂಡರು.

ಹೀಗೆ ಕಚ್ಚಿ, ಗಿಲ್ಲಿ, ಹೊಡೆದು, ಮುಖಪರಚಿ, ಪಾದರಕ್ಷೆ ಸೇವೆ ಮಾಡಿ ತಮ್ಮ, ತಮ್ಮವರ ಮಾನಗಳನ್ನು ಕಾಪಾಡುವಲ್ಲಿ, ಕಾಪಾಡಿಕೊಳ್ಳುವಲ್ಲಿ ಮಹಿಳೆಯರು ಮೆರೆದ ಸಾಹಸ, ತೋರಿದ ಧೀರುತನ ಮನನೀಯ, ಸ್ಮರಣೀಯ, ಅನುಕರಣೀಯ

ಅಂದಿನ ಸ್ತ್ರೀಯರ ಸ್ಥಿತಿಯನ್ನು ಕುಂದುರ್ತಿಯವರ ಧ್ವನಿಮಯ ಮಹಾಕಾವ್ಯವೆಂದು ವಿಮರ್ಶಕರಿಂದ ಕೀರ್ತಿತಗೊಂಡ "ತೆಲಂಗಾಣಾ" ಎಂಬ ಕಾವ್ಯದ ಸಾಲುಗಳ ಮೂಲಕ ಹೇಳಿ ಈ ಲೇಖನವನ್ನು ಮುಗಿಸುತ್ತೇನೆ.

ಹೆಣ್ಣು ಮಗಳೊಬ್ಬಳನ್ನು ಅಧಿಕಾರಿ ಪ್ರಶ್ನಿಸುವ ಪ್ರಸಂಗವನ್ನು ಚಿತ್ರಿಸಿರುವ ಪರಿ ಇಲ್ಲಿದೆ. ಆ ಪ್ರಶ್ನೆಗಳು ಪರಮ ಜಿಗುಪ್ಸಾಕರವಾದವು. ಎಷ್ಟು ಅಲ್ಪಾಕ್ಷರಗಳಲ್ಲಿ ಅದರ ಚಿತ್ರವಿದೆ ನೋಡಿ.

"ಹದಿನಾರು ವರುಷದ ಅರಿಶಿಣ ಸೀರೆಯ ಸೆರಗಿನ ಮೇಲೆ ಪ್ರಶ್ನೆಗಳ ದಾರಗಳ ಎಳೆಯುತ್ತಿದ್ದಾನೆ ಪೋಲಿಸು ಅಧಿಕಾರಿ."

ಇನ್ನು ಅವನ ಪ್ರಶ್ನೆಗಳು, ಆಕೆಯ ಉತ್ತರ ನಾಟಕೀಯವಾಗಿದೆ. ಇಲ್ಲಿ ಆಕೆಯ ದಾರಿದ್ರ್ಯದ ವಿರಾಟ್ ರೂಪವೂ ಕಾಣುತ್ತದೆ.

"ನಿನ್ನ ತಲೆ ಮೇಲೆ ಒಂದು ಅಕ್ಕಿ ಮೂಟೆ ಕಾಣನ್ನು ಸೇರಿದೆ."

"ಮನೆಯಲ್ಲಿ ಈ ಹೊತ್ತಿಗೂ ಹಿಡಿ ಅಕ್ಕಿಯಿಲ್ಲ."

"ಅದಕ್ಕೆ ರುಜುವಾತು ನಿನ್ನ ಕೆದರಿದ
ಬೈತಲೆ,
ಸಿಕ್ಕು ಸಿಕ್ಕಾದ ಮುಂಗುರುಳು"

"ಎಣ್ಣೆ ಇರದೆ ತಲೆ ಬಾಚಲಿಲ್ಲ"

ಈಗ ಅವಳ ಮಾನಭಂಗ ಮಾಡಿದ ಘಟ್ಟ. ಹೃದಯ ಹಿಂಡುವ ಚಿತ್ರ.

ಅದೇ ಅಧಿಕಾರಿ ಅದೇ ಯುವತಿಯ ಮಾನಭಂಗ ಮಾಡುತ್ತಾನೆ. ಎಲ್ಲಿ ? ಅವಳ ಗುಡಿಸಲ ಮುಂದೆ. ಊರ ಜನರ ಮುಂದೆ.

ಪಾಪವನ್ನು ಕಣ್ಣಲ್ಲಿ ನೋಡಲಾರ
ದವರು
ಪ್ರಾಣದೊಂದಿಗೆ ಹೊರಟು
ಹೋದರು
ಪಾಪವನ್ನು ನೋಡ ಬೇಕೆಂದವರಲ್ಲಿ
ಹನ್ನೆರಡು ಮಂದಿ ಸತ್ತು ನೋಡ
ಲಾರದೆ ಹೋದರು
ಸಾಯದೆ ನೋಡುತ್ತ ನಿಂತಿದ್ದ ಕೆಲ
ಮಂದಿ
ಏನೂ ಮಾತನಾಡದೆ ಮೂಕ
ರಾದರು

....

ಗುಡಿಸಲ ಮುಂದೆ ಅಧಿಕಾರಿ ಯುವತಿಯ ಕೆಡಿಸಿದ
ಯಾರೂ ಅಕ್ಷರಬಾರದೆಂದು ಅರಚಿದ
ಹದಿನಾರರ ಮಾನವತಿಯ ಶೀಲವ ಕಚ್ಚಿದ
ಆ ಹುಡುಗಿ ಅವಮಾನದಿಂದ ಗುಡಿಸಲೊಳಕ್ಕೆ ಹೋದಳು
ಆ ಹುಡುಗಿ ಬೆಳಗ್ಗೆ ಆರು ಗಂಟೆಗೆ ಸತ್ತು ಹೋದಳು.

ಇಡೀ ಪ್ರಕರಣವನ್ನು ನೆನೆದಾಗ ಮಾನವ ಹೃದಯ ರೋಧಿಸುತ್ತದೆ. 'ಓ ಹೆಣ್ಣೆ ನಿನ್ನ ಪೂಜಿಸಬೇಕೆಂದು ಸಾರಿದ ಈ ನಾಡಿನಲ್ಲಿ ಏನಿದು ನಿನ್ನ ಬವಣೆ' ಎಂದು ಗುಂಡಿಗೆ ನೋವಿನಿಂದ ಭಾರವಾಗುತ್ತದೆ.

ಅಂದು ಆ ಪರಿಯಾದರೆ, ಇಂದು ಇನ್ನೊಂದು ಪರಿ. ನಡೆ ಒಂದೆ. ರೂಪ ಬೇರೆ. ಕಾರಣಗಳು ಅನೇಕ. ಇದಕ್ಕೆ ಕೊನೆಯಿಲ್ಲವೆ ? ಇದ್ದರೆ ಎಂದಿಗೆ ?

ಮಾನಭಂಗದಂತ ಅನಾಗರೀಕನಡಾವಳಿ ಒಂದು ವ್ಯವಸ್ಥೆಯಾಗಿ ರೂಪ ತಾಳುವ ಮುನ್ನ ಮಾನವ ಜನಾಂಗ ಜಾಗೃತಗೊಳ್ಳಬೇಕು. ಇಂತಹ ಕ್ರೂರ, ಅನಾಗರೀಕ ಚರ್ಯೆಗಳನ್ನು ಎದುರಿಸಲು ಮಹಿಳೆಯರು ಸಿದ್ಧರಾಗಬೇಕು. ಮಾನಭಂಗ, ದಹನ, ಹೆಣ್ಣುಗಳ ಹಸ್ತಾಂತರ ಅನಾದಿ ಕಾಲದಿಂದ ನಡೆದು ಬಂದಿದೆ. ಇಂತಹವರೆಲ್ಲ ಕ್ರೂರ ಶತ್ರುಗಳು. ಇಂತಹವರಿಂದ ತಮ್ಮನ್ನು ತಾವು ಕಾಪಾಡಿಕೊಳ್ಳಲು ನಮ್ಮ ಹೆಣ್ಣು ಮಕ್ಕಳಿಗೆ ಆತ್ಮರಕ್ಷಣೆ ಪದ್ಧತಿಯಲ್ಲಿ ಶಿಕ್ಷಣ ಕೊಡಬೇಕು

*

ನನಗೆ
ಜನ ಗಣ ಮನ
ಮರೆತು ಹೋಗಿದೆ
ದಯವಿಟ್ಟು
ಯಾರಾದರೂ
ಬಾಂಬ್ ಹಾಕಿ

— ಅಜ್ಞಾತ ಕವಿ

ಅಫ್‌ಘಾನಿಸ್ತಾನದ ಕಥೆ

— ಇಬ್ರಾಹಿಂ ಶೇಖ್

ಮನೆಗೊಂದು ಜಮಖಾನ

ರೂಢಿಯಂತೆ ಜುಬೇದಾ ಬೆಳಗ್ಗೆ ಬೇಗನೆ ಎದ್ದು ಹೊರಗೆ ಅಂಗಳಕ್ಕೆ ಬಂದಳು.

ಆಕೆಯ ಬೂದು ಬಣ್ಣದ ತಲೆ ಕೂದಲಿನೊಂದಿಗೆ ಗಾಳಿ ಲಾಸ್ಯವಾಡುತ್ತಿತ್ತು. ಆದ್ದರಿಂದ ಆಕೆ ತನ್ನ ತಲೆಯ ಮುಸುಕಿನ ಹಳೆಯ ಬಟ್ಟೆಯನ್ನು ಸದಾ ಸರಿಪಡಿಸಿಕೊಳ್ಳುತ್ತಲೇ ಇದ್ದಳು. ಆಕೆಯ ಕೈಗಳ ಎಲುಬುಗಳು ಎದ್ದು ಕಾಣುತ್ತಿದ್ದವು, ಬೆರಳುಗಳು ಗಂಟುಗಂಟಾಗಿದ್ದವು ಮತ್ತು ಮುಖವು ಪೂರ್ತಿಯಾಗಿ ಸುಕ್ಕುಗಟ್ಟಿತ್ತು. ಈಗ ಆಕೆಯು ಗೋಡೆಯ ಆಸರೆಗೆ ಅಂಟಿಕೊಂಡ ಬಾಗಿ ನಿಂತಿದಳು. ಪಾಪ, ಹೆಚ್ಚು ಹೊತ್ತು ನಿಂತಿರುವುದೂ ಈ ವಯಸ್ಸಿನ ಮುದುಕಿಗೆ ಕಷ್ಟವೇ ಆಗಿತ್ತು.

ಆ ಹಳ್ಳಿಯಲ್ಲಿ ಅಜ್ಜಿ ಜುಬೇದಾ ಎಲ್ಲರಿಗೂ ಪರಿಚಿತಳೇ. ಆಕೆಯ ಮಗನು ದುಡಿಮೆಗಾಗಿ ಪಟ್ಟಣಕ್ಕೆ ಹೋಗಿದ್ದಾನೆ. ತನ್ನ ಬಾಳಿನಲ್ಲಿ ಜುಬೇದಾ ವಿಶೇಷ ಸುಖವನ್ನೇನೂ ಪಡೆಯಲಿಲ್ಲ. ಒಮ್ಮೆ ಅವಳು ಚೆಲುವೆಯಾಗಿದ್ದಳು. ಈಗ ಆಕೆಯ ಬೆನ್ನು ಬಗ್ಗಿದೆ, ಆಕೆಯ ಸುಕ್ಕುಗಳ ಮಧ್ಯೆ ಬಳಲಿಕೆ ವ್ಯಕ್ತಪಡಿಸುತ್ತಿರುವ ಮಸುಕಾದ ಕಣ್ಣುಗಳು ತಮ್ಮ ಕಾಂತಿಯನ್ನು ಕಳೆದುಕೊಂಡಿವೆ. ಸಣ್ಣ ವಯಸ್ಸಿನಲ್ಲಿಯೇ ಅವಳು ವಿಧವೆಯಾದಳು ಮತ್ತು ತನ್ನ ಮಗನೊಂದಿಗೆ ಬಡವರ ಆಲಯದಲ್ಲಿ ಸೇರಿಕೊಂಡಳು. ಆಕೆಯ ಗಂಡನು ತೀರಿಕೊಂಡ ತರುವಾಯ ಅವಳನ್ನು ಮದುವೆ ಮಾಡಿಕೊಳ್ಳಲು ಅನೇಕರು ಮುಂದೆ ಬಂದರಾದರೂ ಆಕೆ ಮಾತ್ರ ಮದುವೆಯಾಗಲಿಲ್ಲ.

"ನಾನು ಹೇಗೆ ಮದುವೆ ಮಾಡಿಕೊಳ್ಳಲಿ? ನನ್ನ ಮಗನನ್ನು ನಾನು ಸಾಕಬೇಕಾಗಿದೆ" ಎಂದು ಜುಬೇದಾ ಹೇಳುತ್ತಿದ್ದಳು.

ಈಗ ಆಕೆಯು ಮುದುಕಿಯಾಗಿದ್ದಾಳೆ, ಬಲಹೀನಳಾಗಿದ್ದಾಳೆ. ಯಾವ ಕೆಲಸವನ್ನಾದರೂ ಕೈಗೊಂಡು ಮಾಡುವುದು ಆಕೆಗೆ ಸಾಧ್ಯವಿದ್ದ ಕಾಲ ಹೋಯಿತು. ಪ್ರತಿಯೊಂದೂ ಹೋದ ಹಾಗೆಯೇ. ಆದರೂ ನಿನ್ನೆ ತಾನೇ ಆಕೆ ಗಟ್ಟಿಮುಟ್ಟಾಗಿ, ಯುವತಿಯಾಗಿ ಇದ್ದಳು ಎನಿಸುತ್ತದೆ. ಒಂದೇ ದಿನದಲ್ಲಿ ಆಕೆ ಅನೇಕ ಬಟ್ಟೆಗಳನ್ನು ಒಗೆಯಲು ಸಮರ್ಥಳಾಗಿದ್ದಳು. ತೊಟ್ಟಿಯಲ್ಲಿ ಮಗ್ಗಲು ಹಾಸಿಗೆಗಳನ್ನು ದುಪ್ಪಟಿಗಳನ್ನು ಒಂದು ದೊಡ್ಡ ಕೋಲಿನಿಂದ ಎಳೆದು, ತಿರುಗಿಸಿ, ಒಗೆದು, ಹಿಂಡಿ, ಅವುಗಳನ್ನು ಆಕೆಯು ಒಣಗಿಸುತ್ತಿದ್ದಳು. ಚೆನ್ನಾಗಿ ಕೆಲಸ ಮಾಡುವುದು ಹೇಗೆ ಎಂಬ ವಿಷಯ ಖಂಡಿತವಾಗಿ ಅವಳಿಗೆ ತಿಳಿದಿತ್ತು.

"ನಿಜವಾಗಿಯೂ ಈಕೆ ಗಂಡನಿಲ್ಲದೆ ಬಾಳುವಳೇ?" ಎಂದು ನೆರೆ ಹೊರೆಯವರು ಬೆರಗಾಗಿದ್ದರು.

ಅವರಿಗೆ ಜುಬೇದಾ ಹೀಗೆ ಉತ್ತರ ಹೇಳುತ್ತಿದ್ದಳು: "ನನಗೆ ಈಗ ಇರುವುದೆಲ್ಲ ಒಂದೇ ಚಿಂತೆ: ನನ್ನ ಮಗನು ತನ್ನ ಕಾಲುಗಳ ಮೇಲೆ ನಿಂತುಕೊಳ್ಳುವ ಹಾಗೆ ಮಾಡಬೇಕು. ಈ ಸ್ಥಿತಿಯಲ್ಲಿ ಮರುಮದುವೆ ನಿರರ್ಥಕವೆಂದು ನನಗೆನಿಸ್ತದೆ."

ಜುಬೇದಾ ಮುಗುಳ್ನಗುತ್ತಿದ್ದಾಗಲೂ, ಅದರಲ್ಲಿ ವಿಷಾದವು ಎದ್ದು ಕಾಣುತ್ತಿತ್ತು. ಕಾಲವು ಬೇಗ ಬೇಗ ಕಳೆಯುತ್ತಿದ್ದು, ಆಕೆಯು ಇನ್ನೂ ದೀರ್ಘಕಾಲದವರೆಗೆ ತನ್ನ ನೋಟವನ್ನು ಬೀರುತ್ತಿರುತ್ತಾಳೆ–ತನ್ನ ಯೌವನ ಕಾಲವನ್ನು ಕಾಣಬಯಸುತ್ತಾಳೇನೋ ಎಂಬಂತೆ. ಆಕೆಯ ತುಟಿಗಳ ಚಲನೆಯು ಆಕೆಯ ಗೊಣಗಾಟವನ್ನೇ ಸೂಚಿಸುತ್ತಿತ್ತು.

–ಹೌದು, ಮಕ್ಕಳು ಇರುವುದೇ ವಿಶೇಷ ಸುಖ. ಇಡೀ ಬಾಳು ಅವರಿಗಾಗಿಯೇ ಮೀಸಲು. ನನ್ನ ಮಗ ನಾಸ್ರ್.... ಇತರ ಹುಡುಗರಂತೆಯೇ ತನ್ನ ಶಾಲೆಯ ಓದು ಮುಗಿಸುವುದು ಸಾಧ್ಯವಾಗಬೇಕೆಂದು, ಅವನಿಗಾಗಿಯೇ ನಾನು ನನ್ನ ಆರೋಗ್ಯವನ್ನು ಸವೆಯಿಸಿದ್ದೇನೆ, ಇಷ್ಟೊಂದು ದುಡಿದಿದ್ದೇನೆ.

ತನ್ನ ತಲೆಯ ಮುಸುಕಿನ ಕೆಳಗೆ ಹೊರಬಂದಿದ್ದ ಕೂದಲನ್ನು ಮತ್ತೆ ಆ ಮುಸುಕಿನೊಳಕ್ಕೆ ಜುಬೇದಾ ಸೇರಿಸಿಕೊಂಡಳು. ತನ್ನ ಮಗನ ವಿಷಯವಾಗಿಯೇ ಆಲೋಚನೆಯನ್ನು ಮಾಡುತ್ತ ಆಕೆಯು ಅನೇಕ ಗಂಟೆಗಳ ಕಾಲದವರೆಗೆ ಹಾಗೆಯೇ ಇರಬಲ್ಲಳು.

ಆಕೆಗೆ ನೆನಪಾಯಿತು. ಒಮ್ಮೆ ಕಣ್ಣೀರಿಡುತ್ತ ಅವನು ಆಕೆಯ ಬಳಿಗೆ ಬಂದಿದ್ದ:

—ನಮ್ಮ ಗುಡಿಸಲನ್ನು ನಾವು ಮಾರಿಬಿಡೋಣ, ಅಮ್ಮಾ. ಅದರಿಂದ ನಾವು ಕನಿಷ್ಠ ಪಕ್ಷ ಪ್ರತಿದಿನವೂ ಊಟ ಮಾಡಬಹುದು.

—ಏನು ಹೇಳ್ತಿರೋದು ನೀನು? ನಿಮ್ಮಪ್ಪನ ನೆನಪಿಗಾಗಿ ಕೇವಲ ಈ ಮನೆಯೊಂದು ಉಳಿದಿದೆ, ಇದನ್ನೂ ಮಾರಿಬಿಡೋದು ಹೇಗೆ ಸಾಧ್ಯ?

—ಇದು ಎಂಥ ಮನೆ? ಛಾವಣಿ ಮತ್ತು ಗೋಡೆಗಳು ಮಾತ್ರವೇ ಇವೆ. ಜಮಖಾನೆಗಳು ಇಲ್ಲದಿರುವ ಮನೆಗಳೂ ಇರುತ್ತವೆಯೆ?

—ನೀನು ದೊಡ್ಡವನಾದಾಗ, ನಿನ್ನ ಕಾಲುಗಳ ಮೇಲೆಯೇ ನೀನು ನಿಂತುಕೊಂಡಾಗ, ಆಗ ನೀನೂ ಒಂದು ಜಮಖಾನ ಕೊಳ್ಳುವಿಯಂತೆ.

ಈ ಸಂಭಾಷಣೆಯು ನೆನಪಾದಾಗಲೆಲ್ಲ ಪ್ರತಿಯೊಂದು ಸಲವೂ ಜುಬೇದಾಳ ಕಣ್ಣುಗಳು ತೇವಗೊಳ್ಳುತ್ತವೆ. ಆಕೆಯು ತನ್ನ ಮನೆಯ ಕಡೆ ನೋಡುತ್ತಾಳೆ. ತನ್ನ ಮುದಿ ವಯಸ್ಸಿನ ಗಂಟು ಬೆರಳುಗಳನ್ನು ನೋಡಿಕೊಳ್ಳುತ್ತಾಳೆ ಮತ್ತು ನಿಟ್ಟುಸಿರಿಡುತ್ತಾಳೆ.

* * *

ಶಾಲೆಯ ವ್ಯಾಸಂಗವನ್ನು ಮುಗಿಸಿದ ತರುವಾಯ, ನಾಸ್ರ್ ನಗರಕ್ಕೆ ಹೋದನು. ಅವನಿಗೆ ಅಲ್ಲೊಂದು ಕೆಲಸವೂ ಬೇಗನೆ ಸಿಕ್ಕಿತು. ಅವನು ಬಹುಮಟ್ಟಿಗೆ, ಸ್ವಭಾವದಲ್ಲಿಯೂ ತನ್ನ ತಾಯಿಯನ್ನೇ ಹೋಲುತ್ತಿದ್ದನು. ಶ್ರಮವಹಿಸಿ ಬೇಗಬೇಗನೆ ಕೆಲಸ ಮಾಡಲು ಅವನು ಸಮರ್ಥನಾಗಿದ್ದನು. ಹೆಚ್ಚು ಮಾತುಕತೆಗಳಲ್ಲಿ ತೊಡಗಿರುವುದು ಅವನಿಗೆ ಇಷ್ಟವಿರಲಿಲ್ಲ. ಗದ್ದಲದ ಸ್ವಭಾವದವರ ಸಹವಾಸವನ್ನು ಅವನು ಆದಷ್ಟು ಮಟ್ಟಿಗೂ ತಪ್ಪಿಸಿಕೊಳ್ಳುತ್ತಿದ್ದನು. ತನ್ನ ಸ್ನೇಹಿತರ ಭೇಟಿಗೆ ಹೋದಾಗ ಎಷ್ಟೋ ಸಲ ತೊಂದರೆಗಾರ ಮಾತುಗಾರರಿಂದ ತಪ್ಪಿಸಿಕೊಂಡು ಒಂದು ಮೂಲೆಯಲ್ಲಿ ಕುಳಿತುಕೊಂಡಿರುತ್ತಿದ್ದನು.

ಬಹುಮಟ್ಟಿಗೆ ಅವನು ಆಗಾಗ್ಗೆ ತನ್ನ ತಾಯಿಯ ಬಗೆಗೆ ಆಲೋಚಿಸುತ್ತಿದ್ದನು. ತನ್ನ ಕೋಣೆಯಲ್ಲಿಯೇ ಮೂಲೆಯಿಂದ ಮೂಲೆಗೆ ಶತಪಥ ತುಳಿಯುತ್ತಿದ್ದಾಗ ವಿಷಾದದ ಮನೋಭಾವದಿಂದ ಅವನು ತನ್ನ ಬಾಲ್ಯ ಕಾಲವನ್ನು ಸ್ಮರಿಸಿಕೊಳ್ಳುತ್ತಿದ್ದನು. ತಾಯಿಯು ಬಳಲಿ, ಬೇಸತ್ತು ಮನೆಗೆ ಬರುತ್ತಿದ್ದಳು ಮತ್ತು ಅವನಿಗೆ ಆಹಾರ ನೀಡುತ್ತಿದ್ದಳು. ಆದರೆ ಆ ರೋಗ ಪೀಡಿತ ಮುಖದಲ್ಲಿ ಉಜ್ವಲವಾದ ಮುಗುಳ್ನಗೆ ಕಂಡು ಬರುತ್ತಿತ್ತು. ಒಡನೆಯೇ ಅದು ಹಿತಕರವಾಗಿ ಸುಖಕರವಾಗಿ, ಇರುತ್ತಿತ್ತು....

ತಾಯಿಯನ್ನು ನೋಡುವುದಕ್ಕಾಗಿ ಅವನು ಬೇಗನೆ ತನ್ನ ಊರಿಗೆ ಹಿಂದಿರುಗಿ ಹೋಗುವ ಪ್ರಯತ್ನದಲ್ಲಿದ್ದನು. ಆಕೆಗೊಂದು ಉಡುಗೊರೆಯನ್ನು ತೆಗೆದುಕೊಂಡು ಹೋಗಬೇಕೆಂದು ಅವನಿಗನಿಸಿತು. "ನೀನು ದೊಡ್ಡವನಾದಾಗ, ಮತ್ತು ನಿನ್ನ ಕಾಲುಗಳ ಮೇಲೆಯೇ ನೀನು ನಿಂತುಕೊಂಡಾಗ, ಆಗ ನೀನೊಂದು ಜಮಖಾನ ಕೊಳ್ಳುವಿಯಂತೆ" ಎಂದು ಹಿಂದೆ ಎಂದೋ ತನ್ನ ತಾಯಿಯು ಹೇಳಿದ್ದ ಮಾತು ಅವನಿಗೆ ನೆನಪಾಯಿತು.

° ° °

ಜುಬೇದಾ ಬಳಲಿದ್ದಳು. ನೆಲದ ಮೇಲೆ ಕುಳಿತಿದ್ದಳು. ಇಲ್ಲಿ, ಮಹಡಿಯಲ್ಲಿ ಅಷ್ಟೇನೂ ನೆರಳಾಗಿಲ್ಲ. ಆಕೆಯ ಕಣ್ಣುಗಳು ರಸ್ತೆಯ ಕಡೆಗೇ ನೆಟ್ಟ ನೋಟವನ್ನು ಬೀರುತ್ತಿವೆ. ಇಂದು ಆಕೆಯ ಮಗನು ಪಟ್ಟಣದಿಂದ ಬರುತ್ತಿದ್ದಾನೆ.

ಬಿಸಿಲಿನ ಬೇಗೆಯ ಹೊಡೆತವು ಆಕೆಗೆ ತಟ್ಟಿತು, ಕಣ್ಣು ರೆಪ್ಪೆಗಳು ತಾವಾಗಿಯೇ ಮುಚ್ಚಿಕೊಂಡುವು.

"ಅಜ್ಜೀ, ಅಜ್ಜೀ, ನಾಸ್ರ್ ಬಂದಿದ್ದಾನೆ."..ಎಂಬ ಕೂಗು ಆಕೆಗೆ ಕೇಳಿಸಿತು.

ಜುಬೇದಾ ಕಣ್ತೆರೆದಳು. ಕೆಲವು ಮಂದಿ ಹುಡುಗರು ಆಕೆಯ ಕಡೆಗೆ ಓಡೋಡಿ ಬರುತ್ತಿದ್ದುದು ಆಕೆಗೆ ಕಾಣಿಸಿತು. ಅವರ ಹಿಂದೆ, ಆಕೆಯ ಮಗ... ನಾಸ್ರ್ ಬರುತ್ತಿದ್ದನು.

"ಅಮ್ಮಾ, ನಾನು ಬಂದಿದ್ದೇನೆ ನಾವು ಹಿಂದೆ ಒಮ್ಮೆ ಜಮಖಾನದ ವಿಷಯವಾಗಿ ಮಾತನಾಡಿಕೊಂಡದ್ದು, ನಿನಗೆ ನೆನಪಿದೆಯೇ, ಅಮ್ಮಾ? ನಾನು ಈಗ ನಮ್ಮ ಮನೆಗೋಸ್ಕರ ಒಂದು ಜಮಖಾನೆ ತಂದಿದ್ದೇನೆ."

ತಾಯಿಯು ಮಾತನಾಡಲಿಲ್ಲವೇ, ಮೌನಧಾರಣೆ ಮಾಡಿಕೊಂಡು ನಿಂತಿದ್ದಳು. ಆಕೆಯ ಮುಖದ ಸುಕ್ಕುಗಳ ಮೇಲೆ ಕಟುವಾದ ಕಣ್ಣೀರು ಹರಿಯುತ್ತಿತ್ತು. ಆಕೆಯು ಗೊಣಗತೊಡಗಿದಳು:

"ಆದರೆ ಮಗನೇ! ಮನೆಯೇ ಇಲ್ಲ. ಅದನ್ನು ಮಾರಿದ್ದಾಯಿತು.

ಬಹುಕಾಲ ಕಳೆದ ಮೇಲೆ ಪರಸ್ಪರರನ್ನು ಭೇಟಿಯಾಗುತ್ತಿದ್ದ, ಆ ತಾಯಿಯೂ ಮಗನೂ ಯಾಕೆ ಅಳುತ್ತಿದ್ದರೆಂಬುದನ್ನು ತಿಳಿದುಕೊಳ್ಳಲು, ಅಲ್ಲಿ ಗುಂಪುಗೂಡಿದ್ದ ಹುಡುಗರು ಅಸಮರ್ಥರಾಗಿದ್ದರು. ●

(ವಿಶ್ವ ಕಥಾ ಕೋಶದ "ಮಳೆಗಾಡಿನ ಮದುವೆ" ಸಂಕಲನದಿಂದ)

ಕೃಪೆ : ನವಕರ್ನಾಟಕ ಪ್ರಕಾಶನ

ನಾಗಸಾಕಿಯಲ್ಲಿ ಮಳೆ

ನಾಗಸಾಕಿಯ ಸುತ್ತ ಸುತ್ತುತ್ತದೆ ಎಚ್ಚೆತ್ತ ಮಳೆ, ಕೋಪದಿಂದ
ಬಾಲೆಯೊಬ್ಬಳು ಆತಂಕದಿಂದ ಅಪ್ಪಿಹಿಡಿದಿದ್ದಾಳೆ,
ಕಣ್ಣಿಲ್ಲದ ಕಾಲಿಲ್ಲದ ಬೊಂಬೆಯನ್ನು,
ಇಂತಹ ಮಳೆ ಯಾರಿಗೂ ಬೇಡ, ಮರಗಿಡಗಳಿಗೂ ಸಂತಸ ತರದು
ಹೂವರಳಿಸಲು ಕಾದುನಿಂತಿದೆ ಚೆರ್ರಿಗಿಡ ಆದರೇನು?
ಮೊಗ್ಗುಗಳೇ ಮುರುಟಿ ಹೋಗಿವೆ.

ಈ ಮಳೆಯಲ್ಲಿ ಬೂದಿ ಬೆರೆತಿದೆ, ಸ್ಮಶಾನದ ಬೂದಿ
ಬೊಂಬೆ ಕುಕುಡು ಇಂದು, ನಾಳೆ ಬಾಲೆಯೇ ಕುರುಡು
ಶಿಶುವಿನ ಶವಪೆಟ್ಟಿಗೆ, ವಿಧಿಯ ಕ್ರೂರವಿಷದ ಆಗರ
ತೀರಲಾರದ ದುಃಖ, ಕಾಲ ಮಾಗಿದಂತೆ ದ್ವೇಷವಾಗುತ್ತದೆ
ದ್ವೇಷ, ಮಳೆಯಂತೆ ಎಲ್ಲವನ್ನು ಆವರಿಸುತ್ತದೆ.
ಆಸರೆಯೆಲ್ಲಿಯೂ ಕಾಣದು.

ಮೀನುಗಳು ಹುಚ್ಚಾಗುತ್ತವೆ
ಹಾರುವ ಹಕ್ಕಿ ನೆಲಕ್ಕಪ್ಪಳಿಸುತ್ತದೆ
ಪಾರಿವಾಳಗಳು ವಿಕಾರವಾಗಿ ಅರಚಲಾರಂಭಿಸುತ್ತವೆ,
ಡೊಂಬರ ಕಾಗೆಯೊಡನೆ ಸ್ಪರ್ಧಿಸುತ್ತವೆ
ಸಾವಧಾನದಿಂದ ನೀರಲ್ಲಿ ಸಾಗುತ್ತಿರುವ
ಜಲಚರಗಳು ಕಿರುಚಾಡಿ ಕಚ್ಚಾಡುತ್ತವೆ
ಹುಲ್ಲು ಮಲೆತು ನಿಲ್ಲುತ್ತದೆ,
ಜನರ ವಿರುದ್ಧ, ಹೂವಿನ ವಿರುದ್ಧ
ಪ್ರಾಣವಾಯು ನಿಮ್ಮೆದೆಯ ನೋವಾಗಿ
ಹೃದಯವನ್ನು ಹೀರುತ್ತದೆ, ನುಂಗುತ್ತದೆ, ನೊಣೆಯುತ್ತದೆ

ಓ ನಾಗಸಾಕಿ,
ಮಳೆಯಂತೆಯೇ ದ್ವೇಷವನ್ನೂ ತಾಳಲಾಗುವುದಿಲ್ಲ ನಿನಗೆ
ಆದರೆ ನಿನ್ನನ್ನು ಸಾಯಲು ಬಿಡುವವರಲ್ಲ ನಾವು
ಜೀವ ತುಂಬುತ್ತೇವೆ

ಸಿದ್ಧಾಂತಗಳ ಪ್ರಶ್ನೆಯಿಲ್ಲಿಲ್ಲ
ಧರ್ಮಗಳ ಪ್ರಶ್ನೆಯೂ ಇಲ್ಲಿಲ್ಲ
ಇದು ಕೇವಲ ಜೀವನದ ಪ್ರಶ್ನೆ
ಸರಳ ಸುಂದರ ಜೀವನದ ಪ್ರಶ್ನೆ
ಆಗ, ನಾವೆಲ್ಲರೂ ಒಟ್ಟಾದಾಗ,
'ನಾಗಸಾಕಿಗಳನ್ನು ಸೃಷ್ಟಿಸಲು ಯಾರಿಗೂ ಬಿಡೆವು'
ಎಂದು ದಣಿತೊಟ್ಟಾಗ
ಮಳೆ ಬಯಲಾಗುತ್ತದೆ
ಮರಗಿಡಗಳು ಬಾಡದೆ ನಳ ನಳಿಸುತ್ತವೆ

ಇಲ್ಯಾ ಎಹರೆನ್‌ಬರ್ಗ್

ಇಂಗ್ಲೀಷ್ ಅನುವಾದ : ಇವಾಸ್ಟ್ಸ್‌ಷ್ – ಕನ್ನಡಕ್ಕೆ : ಜಿ. ಎನ್. ನಾಗರಾಜ್

ಕರ್ನಾಟಕ ರಾಜ್ಯದ ರಾಜಕೀಯ ಪರಿಸ್ಥಿತಿ

ಕರ್ನಾಟಕದ ರಾಜಕಾರಣವು ಇಂದು ರಾಷ್ಟ್ರೀಯ ರಾಜಕಾರಣದ ಸಂದರ್ಭದಲ್ಲಿ ಎದ್ದು ಕಾಣುವ ವೈಶಿಷ್ಟ್ಯವುಳ್ಳದ್ದಾಗಿದೆ. ಇತ್ತೀಚೆಗೆ ಮಂಗಳೂರಿನಲ್ಲಿ ಮಂತ್ರಿ ಬೊಮ್ಮಾಯಿಯವರು ಹೇಳಿದ ಮಾತುಗಳು ಅರ್ಥಗರ್ಭಿತವಾಗಿವೆ. "ಕರ್ನಾಟಕದಲ್ಲಿ ಒಂದು ಹೊಸ ರಾಜಕೀಯ ಪ್ರಯೋಗ ನಡೆಯುತ್ತಿದೆ. ಜನತಾ ಪಕ್ಷಕ್ಕೆ ಬಹುಮತವಿಲ್ಲದಿದ್ದರೂ, ಅದು ಇಂದು ಮಿತ್ರ ಪಕ್ಷಗಳ ಬೆಂಬಲದಿಂದ ಧೃಡವಾಗಿ ಆಳುತ್ತಾ ಬರುತ್ತಿದೆ. ಅತ್ಯಧಿಕ ಬಹುಮತವುಳ್ಳ, ಬಿಹಾರ್, ಉತ್ತರ ಪ್ರದೇಶ ಮಹಾರಾಷ್ಟ್ರಗಳ ಕಾಂಗ್ರೆಸ್ (ಐ) ಸರ್ಕಾರಗಳಿಗಿಂತ ಹೆಚ್ಚು ಭದ್ರವಾಗಿದೆ". ರಾಜ್ಯದ ಜನತಾ ಸರ್ಕಾರಕ್ಕೆ ಬೆಂಬಲ ಕೊಡುತ್ತಿರುವ ಮಿತ್ರ ಪಕ್ಷಗಳು ಯಾವುವು ಎಂಬುದನ್ನು ನೋಡಿದರೆ, ಕರ್ನಾಟಕ ರಾಜಕೀಯದ 'ವಿಶಿಷ್ಟತೆ' ಅರ್ಥವಾಗುವುದು. ಒಂದೆಡೆ ಬಿ.ಜೆ.ಪಿ. ಇನ್ನೊಂದೆಡೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಿ.ಪಿ.ಐ. ಪಕ್ಷಗಳು, ಮೂಲಭೂತವಾಗಿ ವಿಭಿನ್ನ ರಾಜಕೀಯ ಸಿದ್ಧಾಂತಗಳು ಮತ್ತು ಕಾರ್ಯಕ್ರಮಗಳುಳ್ಳ ಪಕ್ಷಗಳು, ಬೆಂಬಲ ಕೊಡುತ್ತಿರುವುದೇ ಈ ವಿಶಿಷ್ಟತೆ.

ಯಾಕೆ ಈ ಪಕ್ಷಗಳು ಬೆಂಬಲ ಕೊಡುತ್ತಿವೆ ಎಂಬುದನ್ನು ಸೂಕ್ಷ್ಮವಾಗಿ ಪರಿಶೀಲಿಸುವುದೇ ಈ ಲೇಖನದ ಉದ್ದೇಶ.

ಕರ್ನಾಟಕ ರಾಜ್ಯದ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳು ಭಾರತ ರಾಷ್ಟ್ರದ ಸಾಮಾಜಿಕ—ಆರ್ಥಿಕ ಸ್ಥಿತಿಗತಿಗಳಿಗಿಂತ ಭಿನ್ನವಾಗಿಲ್ಲ. ಪಾಳೆಯಗಾರಿ ಪದ್ಧತಿಯ ಸಂಬಂಧಗಳು ಬದಲಾಗುತ್ತಾ ಬಂಡವಾಳಶಾಹಿ ಪದ್ಧತಿಯ ಸಂಬಂಧಗಳು ಹೆಚ್ಚೆಚ್ಚಾಗಿ ಗ್ರಾಮಾಂತರ ಪ್ರದೇಶಗಳಿಗೆ ನುಸುಳುತ್ತಿವೆ. ಹಳೆಯ ಪಾಳೆಯಗಾರಿ ಮೌಲ್ಯಗಳ ಸ್ಥಾನದಲ್ಲಿ ಹೊಸ ಬಂಡವಾಳಶಾಹಿ ಮೌಲ್ಯಗಳು (ಎಲ್ಲವನ್ನೂ ಹಣದ ಪ್ರಮಾಣದಿಂದ ಅಳೆಯುವುದು) ತೀವ್ರಗತಿಯಲ್ಲಿ ಹರಡುತ್ತಿವೆ. ಜಾಗತಿಕವಾಗಿಯೂ ರಾಷ್ಟ್ರಮಟ್ಟದಲ್ಲಿಯೂ ಎಡಶಕ್ತಿಗಳು ಪ್ರಬಲವಾಗುತ್ತಿರುವ ಹಿನ್ನೆಲೆಯಲ್ಲಿ ಭಾರತದಲ್ಲಿ ತೀವ್ರ ವರ್ಗ ಹೋರಾಟವಿಲ್ಲದೆ ಎರಡು ಶೋಷಕ ವರ್ಗಗಳು—ಭೂ ಮಾಲೀಕ ವರ್ಗ ಮತ್ತು ಬಂಡವಾಳ ವರ್ಗ—ತಮ್ಮೊಳಗಿನ ಮೂಲಭೂತ ಭಿನ್ನತೆಯನ್ನು ಮರೆತು ಒಪ್ಪಂದಮಾಡಿಕೊಂಡು, ಈ ಮೂಲಕ ತಮ್ಮ ಎರಡೂ ವರ್ಗಗಳಿಗೆ ಶತ್ರುಪ್ರಾಯವಾದ ಎಡಶಕ್ತಿಗಳನ್ನು (ಅಂದರೆ ಕಾರ್ಮಿಕ—ರೈತ ವರ್ಗ ಶಕ್ತಿಗಳನ್ನು) ಮುಂದಿನ ದಿನಗಳಲ್ಲಿ ಎದುರಿಸಲು ಸಜ್ಜಾಗುತ್ತಿವೆ. ಇದೇ ಚಿತ್ರವನ್ನು ಕರ್ನಾಟಕದಲ್ಲಿಯೂ ಕಾಣಬಹುದು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ರಾಷ್ಟ್ರದಲ್ಲಿ ಇಂದಿರುವ ಕಾಂಗ್ರೆಸ್ (ಐ) ಪಕ್ಷ, ಜನತಾ ಪಕ್ಷ, ಬಿ.ಜೆ.ಪಿ. ಪಕ್ಷ ಮೊದಲಾದ ಪಕ್ಷಗಳ ವರ್ಗ ಹಿನ್ನೆಲೆಯನ್ನು ವಿಶ್ಲೇಷಿಸುತ್ತಾ, ಈ ಪಕ್ಷಗಳೆಲ್ಲವೂ ಒಂದಲ್ಲ ಒಂದು ರೀತಿಯಲ್ಲಿ ಬಂಡವಾಳಶಾಹಿ—ಭೂ ಮಾಲೀಕ ವರ್ಗಗಳ ಹಿತಗಳನ್ನು ರಕ್ಷಿಸಿ ಪ್ರತಿಪಾದಿಸುವಂತಹ ಪಕ್ಷಗಳು ಎಂದು ಸ್ಪಷ್ಟವಾಗಿ ಹೇಳಿದೆ. ಈ ಪಕ್ಷಗಳನ್ನು ಸಮೀಪದಿಂದ ಅವುಗಳ ಕಾರ್ಯಾಚರಣೆಯ ರಾಜಕೀಯ ನಡುವಳಿಕೆಯ ಆಧಾರದಲ್ಲಿ ಪರಿಶೀಲಿಸುವಾಗ ಈ ಪಕ್ಷಗಳ ವರ್ಗ ಮೂಲ, ವರ್ಗಗುಣ ಒಂದೆ ಎಂಬುದು ಸ್ಪಷ್ಟವಾಗುವುದು. ಹಣದ ಉಪಯೋಗ, ಜಾತಿಯ ಉಪಯೋಗ, ಧರ್ಮದ ಉಪಯೋಗ, ಪಕ್ಷಾಂತರದ ಉಪಯೋಗ, ಭಾಷೆಯ ಉಪಯೋಗ - ಇವೆಲ್ಲವೂ ಈ ಪಕ್ಷಗಳಿಗೆ ಸಮಾನವಾಗಿದೆ. ಒಂದು ಪಕ್ಷವು ಒಂದನ್ನು ಹೆಚ್ಚಾಗಿ ಬಳಸುತ್ತದೆ. ಎಂದರೆ ಇನ್ನೊಂದು ಪಕ್ಷವು ಅದನ್ನು ಅಷ್ಟು ಹೆಚ್ಚಾಗಿ ಬಳಸುತ್ತಿಲ್ಲ ಎಂಬರ್ಥವಷ್ಟೆ. ಎಲ್ಲಾ ಪಕ್ಷಗಳು ಈ ಎಲ್ಲಾ ಅಂಶಗಳನ್ನು ಬಂಡವಾಳಶಾಹಿ - ಭೂ ಮಾಲಿಕ ವರ್ಗಗಳ ಹಿತರಕ್ಷಣೆಗಾಗಿ ಉಪಯೋಗಿಸುತ್ತವೆ.

ಕರ್ನಾಟಕದ ರಾಜಕೀಯದಲ್ಲಿ ಕಾಂಗ್ರೆಸ್ (ಐ) ಪಕ್ಷ, ಜನತಾಪಕ್ಷ ಮತ್ತು ಬಿ.ಜೆ.ಪಿ. ಪಕ್ಷಗಳು ಈ ಎಲ್ಲಾ ಅಂಶಗಳನ್ನು ಸ್ವಲ್ಪ ಹೆಚ್ಚು ಸ್ವಲ್ಪ ಕಡಿಮೆ, ವಿವಿಧ ಪ್ರಮಾಣಗಳಲ್ಲಿ, ತಮ್ಮ ಪ್ರಾಬಲ್ಯಕ್ಕಾಗಿ ಉಪಯೋಗಿಸುತ್ತವೆ. ಅಧಿಕಾರದಲ್ಲಿ ಇದ್ದಾಗ ಒಂದು ರೀತಿಯಲ್ಲಿ, ಅಧಿಕಾರದಲ್ಲಿ ಇಲ್ಲದಾಗ ಇನ್ನೊಂದು ರೀತಿಯಲ್ಲಿ. ಕಾಂಗ್ರೆಸ್ [ಐ] ಪಕ್ಷವು ಈ ಎಲ್ಲಾ ಅಂಶಗಳನ್ನು ಯಾವ ಅಳುಕೂ, ಜನಾಭಿಪ್ರಾಯದ ಅಂಜಿಕೆಯೂ ಇಲ್ಲದೆ, ನಿರ್ಲಜ್ಜೆಯಿಂದ ನೇರವಾಗಿ ಬಳಸಿದೆ. ಈ ಅಂಶಗಳನ್ನು ಜಾತಿ, ಧರ್ಮ, ಪಕ್ಷಾಂತರಗಳನ್ನು ಉಪಯೋಗಿಸುವುದಕ್ಕೆ ಜನತಾಪಕ್ಷವೂ ಹೊರಗಿನದಾಗಿಲ್ಲ.

ಕಾರ್ಮಿಕರನ್ನೂ, ರೈತರನ್ನೂ ಉಳಿದ ಎಲ್ಲಾ ಜನ ವಿಭಾಗಗಳನ್ನು ಸಂಘಟಿಸಿ ರಾಷ್ಟ್ರೀಯ ಮತ್ತು ರಾಜ್ಯದ ರಾಜಕೀಯದಲ್ಲಿ ಪ್ರಾಬಲ್ಯ ಬೆಳೆಸಲು ದುಡಿಯುತ್ತಿರುವ ಎಡಶಕ್ತಿಗಳು — ಮುಖ್ಯವಾಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ — ಬಗ್ಗೆ ಮೂಲವಾಗಿ ಈ ಎಲ್ಲಾ ಪಕ್ಷಗಳ ಒಳನೋಟ ಅಂತರ ದೃಷ್ಟಿ ಸಮಾನವಾಗಿದೆ.

ಆದ್ದರಿಂದ ಹಿಂದೆ ಕಾಂಗ್ರೆಸ್ (ಐ) ಅಧಿಕಾರದಲ್ಲಿದ್ದಾಗ ಯಾವ ಕಾರ್ಮಿಕ ವಿರೋಧಿ, ರೈತ ವಿರೋಧೀ ಧೋರಣೆಗಳನ್ನು ಮೂಲವಾಗಿ ಅನುಸರಿಸುತ್ತಿದ್ದರೋ, ಅದೇ ಧೋರಣೆಗಳು ಈ ಅಧಿಕಾರದಲ್ಲಿರುವ ಜನತಾ ಪಕ್ಷನಾದರೂ ಈಗಲೂ ಮೂಲಭೂತವಾಗಿ ಮುಂದುವರಿಸುತ್ತಿರುವುದು. ಬಿ.ಜೆ.ಪಿ. ಪಕ್ಷ ಜನತಾ ಪಕ್ಷದ ಸರ್ಕಾರವನ್ನು ಬೆಂಬಲಿಸುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಜನತಾ ಪಕ್ಷವು ಈಗ ಅಧಿಕಾರದಲ್ಲಿರುವುದರಿಂದ, ತನ್ನ ಶಕ್ತಿಯು ರಾಜ್ಯದಲ್ಲಿ ಬಹಳ ಸಣ್ಣ ಶಕ್ತಿಯಾಗಿರುವುದರಿಂದ, ತನ್ನ ಬೆಳವಣಿಗೆಯು, ಈ ಸರ್ಕಾರದೊಡನೆ ಎಲ್ಲಾ ರೀತಿಯಲ್ಲಿ ಜತೆಗೂಡಿದರೆ [ಆದರೆ ಅದರಿಂದುಂಟಾಗುವ ಯಾವುದೇ ದುಷ್ಪರಿಣಾಮಗಳಿಂದ ತನ್ನ ಹಿತಕ್ಕೆ ಮಾರಕವಾಗುವ ಪ್ರತಿಕ್ರಿಯೆಗಳಿಂದ] ಮಾತ್ರ ಸಾಧ್ಯ ಎಂಬುದನ್ನು ಬಿ.ಜೆ.ಪಿ. ಚೆನ್ನಾಗಿ ತಿಳಿದಿದೆ. ಅದ

ಪಿ. ರಾಮಚಂದ್ರ ರಾವ್

ಕಾರಣವೇ ಅವರ ಬೆಂಬಲ ಮತ್ತು ಆಗಾಗ್ಗೆ ಅವರು ಸರ್ಕಾರದ ಮೇಲೆ ಒತ್ತಡ ಹಾಕಲು ನಡೆಸುತ್ತಿರುವ ಕಸರತ್ತು. ಅವರ ರಾಷ್ಟ್ರೀಯ ನಿಲುವುಗಳಿಗೆ ಈ ನಿಲುವಿನಿಂದ ಬಾಧಕವೂ ಇಲ್ಲ.

ಅಲ್ಲದೆ, ಈ ಬಂಡವಾಳಶಾಹಿ ಪಕ್ಷಗಳಿಗೆ ಧೋರಣೆಗಳಲ್ಲಿ "ಸ್ಥಿರತೆ, ಏಕರೂಪತೆ" ಇರಬೇಕೆಂದಿಲ್ಲ. ಈ ಪಕ್ಷಗಳು ಜಾತಿ, ಧರ್ಮ, ಭಾಷೆ, ಗಡಿ ಇತ್ಯಾದಿಗಳ ಬಗ್ಗೆ ಒಂದೊಂದು ರಾಜ್ಯದಲ್ಲಿ ಒಂದೊಂದು ಧೋರಣೆಯನ್ನು ಅನುಸರಿಸಬಹುದು.

ರಾಮಕೃಷ್ಣ ಹೆಗಡೆ ಮತ್ತು ಆಚಾರ್ಯರು ಅಥವಾ ಶಿವಪ್ಪನವರು ಹೇಗೆ ಹೊಂದಿಕೊಂಡು ಹೋಗುತ್ತಾರೆ ಎಂಬುದಕ್ಕೆ ಈ ವಿಶ್ಲೇಷಣೆಯು ಬೆಳಕು ಚೆಲ್ಲುವುದು. ಬಿ.ಜೆ.ಪಿ.ಗೆ ಯಾಕೆ ಪ್ರತಿಯೊಂದು ಸರಕಾರದ ಸಮಿತಿಯ ರಚನೆಯಲ್ಲಿ, ಪ್ರತಿಯೊಂದು ಉಪ ಚುನಾವಣೆಯಲ್ಲಿ ಮಹತ್ವ ಕೊಡುತ್ತಿದ್ದಾರೆ ರಾಮಕೃಷ್ಣ ಹೆಗಡೆಯವರು ಎಂಬುದು ಕೂಡ ಇದರಿಂದ ಚೆನ್ನಾಗಿ ಅರಿವಾಗುವುದು.

ಇನ್ನು ನಾವು ಪರಿಶೀಲಿಸಬೇಕಾದುದು ಯಾಕೆ ಎಡಶಕ್ತಿಗಳು ಜನತಾ ಪಕ್ಷಕ್ಕೆ ಬೆಂಬಲ ವ್ಯಕ್ತಪಡಿಸುತ್ತಿರುವುದು ಎಂಬುದನ್ನು.

ಪ್ರಧಾನವಾಗಿ, ಭಾರತದ ರಾಜಕೀಯದಲ್ಲಿ ಸ್ವಾತಂತ್ರ್ಯಾನಂತರ ಕಾಂಗ್ರೆಸ್ ಪಕ್ಷವು ಅನುಸರಿಸುತ್ತಿರುವ ಧೋರಣೆಗಳ ಫಲವೇ ಇಂದಿನ ಭಾರತದ ಸಾಮಾಜಿಕ — ಆರ್ಥಿಕ ಪರಿಸ್ಥಿತಿಗೆ ಕಾರಣ ಎಂಬುದನ್ನು ಮಾರ್ಕ್ಸ್‌ವಾದಿ ಪಕ್ಷ ತಿಳಿದುಕೊಂಡಿರುವುದೇ ಜನತಾ ಪಕ್ಷ ಆಡಳಿತೆಗೆ, ಅಂದರೆ ಕಾಂಗ್ರೆಸ್ಸೇತರ ಪಕ್ಷದ ಆಡಳಿತೆಗೆ ಬೆಂಬಲಕೊಡಲು ಕಾರಣವಾಗಿದೆ. ಈ ಬೆಂಬಲದಿಂದ, ದೇಶದಾದ್ಯಂತವಾಗಿ ಕಾಂಗ್ರೆಸ್ (ಐ) ಧೋರಣೆಗಳ ವಿಫಲತೆಯನ್ನು ಬೊಟ್ಟು ಮಾಡಿ ತೋರಿಸಿ, ಜನತೆಯಿಂದ ಅದರ ವರ್ಚಸ್ಸನ್ನು ದೂರಮಾಡಿ, ಅದರ ಸ್ಥಾನ ಪಲ್ಲಟ ಮಾಡುವುದೇ ಜನತಾ ಪಕ್ಷದ ಆಡಳಿತೆಯನ್ನು ಬೆಂಬಲಿಸಲು ಕಾರಣ.

ರಾಷ್ಟ್ರೀಯವಾಗಿ, ಕಾಂಗ್ರೆಸ್ (ಐ) ಸರ್ವಾಧಿಕಾರವನ್ನು ಎದುರಿಸಿ ಸೋಲಿಸುವುದರಲ್ಲಿ- ಜನತಾ ಪಕ್ಷದ ಪಾತ್ರವು ಮಹತ್ವದ್ದಾಗಿದೆ. ಈ ಪಕ್ಷವು ಎಡಪಕ್ಷಗಳ ಜತೆಗೂಡಿ ಬೆಳೆದು ಬಂದರೆ ಮಾತ್ರ ಕಾಂಗ್ರೆಸ್ (ಐ)ನ ಸರ್ವಾಧಿಕಾರವನ್ನು ಎದುರಿಸಿ ಸೋಲಿಸುವುದಕ್ಕೆ ಸಾಧ್ಯತೆ ಇದೆ ಎಂಬ ಅರಿವೇ ಜನತಾ ಪಕ್ಷದ ಆಡಳಿತೆಗೆ ಕರ್ನಾಟಕದಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಬೆಂಬಲಕ್ಕೆ ಪ್ರಬಲ ಕಾರಣವಾಗಿದೆ. ಎಡಪಕ್ಷಗಳ ಜತೆಗೂಡದೆ, ಜನತಾ ಪಕ್ಷವು ರಾಷ್ಟ್ರೀಯವಾಗಿಯಾಗಲೀ, ರಾಜ್ಯದಲ್ಲಾಗಲಿ ಬಿ.ಜೆ.ಪಿ. — ಲೋಕದಳದಂತಹ ಪಕ್ಷಗಳ ಜತೆಗೂಡಿ ವರ್ತಿಸಿದರೆ, ದೇಶದ ರಾಜಕೀಯಕ್ಕೆ ಗಂಡಾಂತರವಿದೆ ಮಾತ್ರವಲ್ಲ, ಇಂದಿನ ಸ್ಥಿತಿಗಳಲ್ಲಿ ಕಾಂಗ್ರೆಸ್ (ಐ)ಯ ಏಕಚಕ್ರಾಧಿಪತ್ಯವನ್ನು ಅಂತ್ಯಗೊಳಿಸುವುದು ಕೂಡ ಅಸಾಧ್ಯ. ಎಡಶಕ್ತಿಗಳ ಜತೆಗೂಡಬೇಕೆಂದು ಹೇಳುವವರೂ, ಅವುಗಳ ಜತೆ ಕೂಡಬಾರದು ಎಂದು ಹೇಳುವವರೂ ಜನತಾ ಪಕ್ಷದಲ್ಲಿ ಇದ್ದಾರೆ.

ಎರಡನೇ ಮುಖ್ಯ ಕಾರಣ, ಕೇಂದ್ರದಲ್ಲಿ ಸತತವಾಗಿ ಕಾಂಗ್ರೆಸ್ಸು ಪಕ್ಷವು ರಾಜ್ಯಭಾರ ಮಾಡಿದುದರ ಪರಿಣಾಮವಾಗಿ, ರಾಜ್ಯಗಳಲ್ಲಿದ್ದ ಕಾಂಗ್ರೆಸ್ ಪಕ್ಷದ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ಡೊಗ್ಗು ಸಲಾಮು ಹಾಕುತ್ತಾ ಆಡಳಿತ ನಡೆಸಿದ್ದರಿಂದ, ಸಂವಿಧಾನದತ್ತ ಅಧಿಕಾರಗಳನ್ನು ಕೂಡ ಕೇಂದ್ರದ ಅಡಿದಾವರೆಗಳಲ್ಲಿ ಸಮರ್ಪಿಸಿಬಿಟ್ಟದ್ದರಿಂದ, ಕೇಂದ್ರ ಸರ್ಕಾರವೇ ನೇರವಾಗಿ ಹಲವು ಸಂವಿಧಾನ ತಿದ್ದುಪಡಿಗಳ ಮೂಲಕ ರಾಜ್ಯ ಅಧಿಕಾರವನ್ನು ತೀರಾ ಮೊಟಕುಗೊಳಿಸಿದ್ದರಿಂದ ರಾಜ್ಯ ಸರ್ಕಾರಗಳು ಸಿಂಗಾರ ಮಾಡಿದ ಮುದುಕಿಯಂತೆ ಕೇವಲ ಅಲಂಕೃತ ಪುರಸಭೆಗಳಾಗಿವೆ.

1957-58 ರಲ್ಲಿ ಕಮ್ಯುನಿಸ್ಟ್ ಪಕ್ಷ ಮೊದಲ ಬಾರಿಗೆ ರಾಜ್ಯಾಡಳಿತ ಮಾಡಿದ ದಿನಗಳಿಂದಲೇ ಕೇಂದ್ರ ಸರ್ಕಾರದ, ಅಧಿಕಾರ ಕೇಂದ್ರೀಕರಣದ ನೀತಿಗಳನ್ನು ಕಮ್ಯುನಿಸ್ಟ್ ಪಕ್ಷ ವಿರೋಧಿಸಿತು. ಆದರೆ ಆಗ ಅದು ಒಂಟಿದನಿಯಾಗಿತ್ತು. ಈಗ ಹಲವಾರು ರಾಜ್ಯಗಳಲ್ಲಿ ಕಾಂಗ್ರೆಸ್ಸೇತರ ಸರ್ಕಾರಗಳು ಆಡಳಿತ ಮಾಡುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಗಳ ಸಂವಿಧಾನಾತ್ಮಕ ಅಧಿಕಾರಗಳಿಗಾಗಿ ಹೋರಾಟ ನಡೆಯುವುದು, ದೇಶದ ಸಮಗ್ರತೆಯನ್ನು ಉಳಿಸುವ ಏಕಮಾತ್ರ ಹಾದಿಯಾಗಿದೆ; ಒಂದು ರಾಷ್ಟ್ರೀಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ನಮ್ಮ ಪಕ್ಷವು ಕರ್ನಾಟಕದಲ್ಲಿ ರಾಮಕೃಷ್ಣ ಹೆಗಡೆಯವರ ನೇತೃತ್ವದಲ್ಲಿರುವ ಜನತಾ ಪಕ್ಷದ ಸರ್ಕಾರಕ್ಕೆ ಬೆಂಬಲ ಕೊಡುತ್ತಿದೆ.

ನಮಗೆ ಸಿಕ್ಕಿದ್ದು
ಕತ್ತಲೆಯಲ್ಲಿ
ಆದರೆ ಇನ್ನೂ
ಬೆಳಗೇ ಆಗಿಲ್ಲ

— ಒರ್ವ ತಮಿಳು ಕವಿ

ಮೇ ದಿನ, 1984 - ಶಾಂತಿ ರಕ್ಷಣೆಗೆ ಮುಂದಾಗೋಣ

—ಬಿ. ಟಿ. ರಣದಿವೆ



ಕಾರ್ಲ್ ಮಾರ್ಕ್ಸ್‌ರ ಮರಣ ಶತಾಬ್ಧಿಯ ಆಚರಣೆ ಕೆಲವು ವಾರಗಳ ಹಿಂದೆಯಷ್ಟೇ ಕೊನೆಗೊಂಡಿತು. ಆಧುನಿಕ ಜಗತ್ತಿನ ಸ್ವರೂಪವನ್ನು ಕ್ರಾಂತಿಕಾರಿ ಗೊಳಿಸುವಲ್ಲಿ ಇತರೆಲ್ಲರಿಗಿಂತಲೂ ಹೆಚ್ಚು ಕಾರಣೀಭೂತರಾದ ಕಾರ್ಲ್ ಮಾರ್ಕ್ಸ್‌ರ ಸಂದೇಶವನ್ನು ಜಗತ್ತಿನಾದ್ಯಂತ ಕೋಟಿಗಟ್ಟಲೆ ಜನ ಆಲಿಸಿದರು ಕಮ್ಯೂನಿಸ್ಟ್ ಮ್ಯಾನಿಫೆಸ್ಟೋದಲ್ಲಿನ, "ಜಗತ್ತಿನ ಕಾರ್ಮಿಕರೇ ಒಗ್ಗಟ್ಟಾಗಿ!" ಎಂದು ಕರೆನೀಡಿದ, ಕಾರ್ಮಿಕವರ್ಗದ ಅಂತರ್‌ರಾಷ್ಟ್ರೀಯತೆ ಮತ್ತು ಸೌಹಾರ್ದತೆಯ ಕುರಿತಾದ ಆತನ ಬೋಧನೆಗಳನ್ನು ಕೋಟಿಗಟ್ಟಲೆ ಜನ ಆಲಿಸಿದರು.

ಗಂಭೀರ, ಸಂಘರ್ಷಮಯವಾದ ಸದ್ಯದ ಅಂತರ್‌ರಾಷ್ಟ್ರೀಯ ಪರಿಸ್ಥಿತಿಯಲ್ಲಿ ಈ ಕರೆ ಕಾರ್ಮಿಕರ ಮತ್ತು ಜನತೆಯ ಮನಸ್ಸಿನಲ್ಲಿ ಆಳವಾದ ಭಾವನೆಗಳನ್ನು ಎಬ್ಬಿಸಿತು. ತಮ್ಮ ಸುತ್ತಮುತ್ತ ವಿನಾಶಕಾರಿ ನ್ಯೂಕ್ಲಿಯರ್ ಶಸ್ತ್ರಾಸ್ತ್ರಗಳು ಆವರಿಸಿರುವಾಗ ಜನತೆ ಬೇರೇನು ತಾನೆ ಯೋಚಿಸಬಲ್ಲರು. ?

ಆದ್ದರಿಂದಲೇ 1983 ರಲ್ಲಿ ಹೆಚ್ಚೆಚ್ಚು ಕಾರ್ಮಿಕರು ಮತ್ತು ಜನಸಾಮಾನ್ಯರು ಶಾಂತಿಯ ಪರವಾಗಿ, ನ್ಯೂಕ್ಲಿಯರ್ ಯುದ್ಧದ ವಿರುದ್ಧವಾಗಿ ಹೋರಾಟಕ್ಕಿಳಿದರು. ಯುದ್ಧ ಅಪಾಯದ ಬಗ್ಗೆ ನಿರ್ಲಕ್ಷ್ಯರಾಗಿದ್ದ ಜನತೆ, ಸುಧಾರಣಾವಾದೀ ನಾಯಕರುಗಳಿಂದಾಗಿ ಶಾಂತಿ ಚಳುವಳಿಯಿಂದ ದೂರವಿದ್ದ ಕಾರ್ಮಿಕರು ಕೂಡ ಹೋರಾಟಕ್ಕೆ ಧುಮುಕಲಾರಂಭಿಸಿದರು. ಸೋವಿಯತ್ ಅಪಾಯದ ಬೆದರಿಕೆ ಹರಡುತ್ತಿದ್ದ ಕಾರ್ಮಿಕ ಸಂಘಗಳ ನಾಯಕರೂ, ಪಾಶ್ಚಿಮಾತ್ಯ ಜಗತ್ತಿನ ಭದ್ರತೆ ಯೆಂಬ ಸಾಮ್ರಾಜ್ಯಶಾಹೀ ಕಲ್ಪನೆ[illegible] ಸಾಮಾಜಿಕ ಜನತಂತ್ರವಾದಿ ನಾಯಕರೂ, [illegible] ಜೊತೆಗೆ ಸೋವಿಯತ್ ವಿರೋಧಿ ಪ್ರಚಾರ ನಡೆಸುತ್ತಿದ್ದ ಸಂಘಟನೆಗಳೂ ಶಾಂತಿ [illegible] ಹೋರಾಟವನ್ನು [illegible].

ಇವರೆಲ್ಲಾ ತಮ್ಮ [illegible] ವಿರೋಧಿ ನಿಲುವನ್ನು ತೋರಿಸುವುದರಿಂದೀ

ನಲ್ಲ ಅವರು ಈಗಲೂ ಅಮೇರಿಕನ್ ಸಾಮ್ರಾಜ್ಯಶಾಹೀ ಧೋರಣೆಗಳನ್ನು ಖಂಡಿಸುತ್ತಿಲ್ಲ; ಎರಡು 'ಸೂಪರ್ ಪವರ್'ನ ಮಾತಾಡುತ್ತಾರೆ; ಸೋವಿಯತ್ ಸಂಘ ಇದಕ್ಕೆ ಹೆಚ್ಚು ಹೊಣೆಗಾರ ವೆಂದೆಲ್ಲಾ ಹೇಳುತ್ತಿದ್ದಾರೆ ಆದರೂ ಅಮೇರಿಕನ್ ಸಾಮ್ರಾಜ್ಯಶಾಹಿಗಳ ಮತ್ತು ಅವರ ಮಿತ್ರರ ಯುದ್ಧ ತಯಾರಿಗಳ ವಿರುದ್ಧ ಜನತೆಯ ಹೋರಾಟವನ್ನು ಸೇರದೆ ಅವರಿಗೆ ನಿರ್ವಾಹವಿಲ್ಲವಾಗಿದೆ. ಇದಕ್ಕೆ ಕಾರಣ ಪಶ್ಚಿಮ ಯುರೋಪಿನಲ್ಲಿ ಶಸ್ತ್ರಾಸ್ತ್ರಗಳನ್ನು ನೆಲೆಗೊಳಿಸಬೇಕೆಂಬ ಸಾಮ್ರಾಜ್ಯ ಶಾಹಿಗಳ ನಿರ್ಧಾರ. ಈಗಾಗಲೇ ಹಲವು ದೇಶಗಳಲ್ಲಿ ಇದನ್ನು ನೆಲೆಗೊಳಿಸಲಾಗಿದೆ.

ಸಾಮ್ರಾಜ್ಯ ಶಾಹಿಗಳು ತಮ್ಮ ಯುದ್ಧ ತಯಾರಿಯನ್ನು ಮುಂದುವರೆಸಿದಾಗ ಸೋವಿಯತ್ ಸಂಘ ತಾನೇ ವಿಧಿಸಿಕೊಂಡ ನಿರ್ಬಂಧಗಳಲ್ಲಿ ಕೆಲವನ್ನು ತೆರವು ಮಾಡಿ ಸಮಾಜವಾದೀ ದೇಶಗಳು ತಮ್ಮನ್ನು ಮತ್ತು ಜಗತ್ತನ್ನು ರಕ್ಷಿಸುವ ಸಾಮರ್ಥ್ಯ ಹೊಂದಿವೆ ಎಂದು ತೋರಿಸಿಕೊಟ್ಟಿತು

ತಮ್ಮ ಆಳುವವರ್ಗಗಳ ಯುದ್ಧೋನ್ಮಾದವನ್ನು ತಡೆಯದಿದ್ದರೆ ತಮ್ಮ ಅಸ್ತಿತ್ವಕ್ಕೆ ಸಂಚಕಾರ ಎಂಬುದನ್ನು ಯುರೋಪ್ ಮತ್ತು ಅಮೇರಿಕಾದ ಜನತೆ ಮನಗಾಣಲಾರಂಭಿಸಿದ್ದಾರೆ. ಆದ್ದರಿಂದಲೇ ಇದುವರೆಗೆ ಶಾಂತಿ ಚಳುವಳಿಯಿಂದ ದೂರ ವಿದ್ದವರೂ ಅದನ್ನು ಸೇರಿಕೊಳ್ಳುತ್ತಿದ್ದಾರೆ.

ಪ್ರಗತಿಶೀಲ ಶಕ್ತಿಗಳು, ವಿವಿಧ ದೇಶಗಳ ಮುಂದುವರಿದ ಕಾರ್ಮಿಕ ಆಂದೋಳನಗಳೂ ಹಾಗೂ ಪ್ರಜಾಪ್ರಭುತ್ವವಾದೀ ಆಂದೋಲನಗಳು ಅಮೇರಿಕಾ ಈಗ ಯೋಚಿಸುತ್ತಿರುವುದು ಸಮಾಜವಾದೀ ವ್ಯವಸ್ಥೆಯ ವಿರುದ್ಧ ಪ್ರತಿಕ್ರಾಂತಿಯನ್ನು ಎಂಬುದನ್ನು ಕಾಣುತ್ತಿವೆ; ಜಾಗತಿಕ ಆಧಿಪತ್ಯ ಸಾಮ್ರಾಜ್ಯಶಾಹಿಗಳ ಉದ್ದೇಶ ಎಂಬುದನ್ನು ಕಾಣುತ್ತಿವೆ.

ಕಾರ್ಮಿಕ ವರ್ಗ ಮತ್ತು ಜಗತ್ತಿನ ಜನತೆ ಈ ಸವಾಲನ್ನು ಹೆಚ್ಚೆಚ್ಚು ಅರಿತು ಜಗತ್ತನ್ನು ಮಾನವ ಕುಲವನ್ನು ಉಳಿಸಲು ಹೆಚ್ಚೆಚ್ಚು ಒಗ್ಗಟ್ಟಾಗುತ್ತಿದ್ದಾರೆ. ಇವೆಲ್ಲದಕ್ಕೂ ಕೇಂದ್ರ ನಾಯಕತ್ವ ಮತ್ತು ಯುದ್ಧವನ್ನು ಧಿಕ್ಕರಿಸುವ ಕಾರ್ಯಾಚರಣೆಯ ಯೋಜನೆ ರೂಪಗೊಳ್ಳುತ್ತಿರುವುದು ಸೋವಿಯತ್ ಸಂಘ ಮತ್ತು ಇತರ ಸಮಾಜವಾದೀ ದೇಶಗಳ ಶಾಂತಿ ಧೋರಣೆ ಗಳಿಂದಾಗಿ ಎಂಬುದಂತೂ ನಿಜ. ಎಲ್ಲೆಡೆಯೂ ಶಾಂತಿ ಹೋರಾಟಕ್ಕೆ ಹೋರಾಟ ಸೌಹಾರ್ದತೆಗಾಗಿ ಕಾರ್ಮಿಕ

ಗಾರರಿಗೆ ಪ್ರೇರಣೆ ನೀಡಿವೆ. ಸೋವಿಯತ್ ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕ ಸಂಘಗಳ ಅಂತರ್‌ರಾಷ್ಟ್ರೀಯ ಒಕ್ಕೂಟ ಜಗತ್ತಿನ ಕಾರ್ಮಿಕವರ್ಗದ ಮುಂದುವರಿದ ಭಾಗಗಳಿಗೆ ಮೇಲ್ಪಂಕ್ತಿ ಹಾಕಿಕೊಟ್ಟಿವೆ.

ಅಂತರ್‌ರಾಷ್ಟ್ರೀಯತೆಯ ಅಭಿವ್ಯಕ್ತಿ :

ಸಾಮಾಜಿಕ ಜನತಂತ್ರವಾದಿಗಳ ಸುಧಾರಣಾವಾದೀ ಪ್ರಭಾವದಲ್ಲಿ ಇನ್ನೂ ಉಳಿದಿದ್ದ ಜನ ಸಾಮಾನ್ಯರೂ ಈಗ ಒಬ್ಬೊಬ್ಬರಾಗಿ ಆ ಪ್ರಭಾವ ದಿಂದ ಹೊರಬರುತ್ತಿದ್ದಾರೆ. ಬ್ರಿಟನ್ನಿನ ಕಾರ್ಮಿಕ ಸಂಘಗಳು, ಲೇಬರ್ ಪಕ್ಷ ಬೇಶರತ್ ಏಕಪಕ್ಷೀಯ ನಿಶ್ಶಸ್ತ್ರೀಕರಣ ನಿರ್ಣಯವನ್ನು ಅಂಗೀಕರಿಸಿವೆ. ಪಶ್ಚಿಮ ಜರ್ಮನಿಯ ಸೋಶಿಯಲ್ ಡೆಮೊಕ್ರೆಟಿಕ್ ಪಕ್ಷದ ವಿಶೇಷ ಅಧಿವೇಶನವೊಂದರಲ್ಲಿ ಪಶ್ಚಿಮಜರ್ಮನಿಯಲ್ಲಿ ಅಮೇರಿಕನ್ ಕ್ಷಿಪಣಿಯನ್ನು ನೆಲೆಗೊಳಿಸುವ ವಿರುದ್ಧ ಠರಾವೊಂದನ್ನು ಅಲ್ಲಿನ ಹಿಂದಿನ ಅಧ್ಯಕ್ಷ ಹೆಲ್ಮಟ್‌ಶ್ಮಿಡ್ ವಿರೋಧಿಸಿದರೂ ಕೂಡಾ ಅಧಿವೇಶನಕ್ಕೆ ಬಂದ ಪ್ರತಿನಿಧಿಗಳು ಅಂಗೀಕರಿಸಿದರು. ಒಂದು ವರ್ಷದ ಹಿಂದೆ ಸರಕಾರವನ್ನು ಬೆಂಬಲಿಸುತ್ತಿದ್ದ ಪಶ್ಚಿಮ ಜರ್ಮನಿಯ ಕಾರ್ಮಿಕ ಸಂಘಗಳ ನಾಯಕತ್ವ ಕೂಡಾ ಈಗ ಶಾಂತಿಯನ್ನು ದೃಢಗೊಳಿಸಲು ಹೋರಾಡುವುದು ಕಾರ್ಮಿಕಸಂಘಗಳ ಕೇಂದ್ರ ಗುರಿಯೆಂದು ಒಪ್ಪಿಕೊಂಡಿವೆ. ಜಪಾನಿನಲ್ಲಿ ಕಾರ್ಮಿಕ ಸಂಘಗಳ ಅತೀ ದೊಡ್ಡ ಒಕ್ಕೂಟ 1983 ರ ಅಕ್ಟೋಬರನ್ನು ಯುದ್ಧ ವಿರೋಧೀ ಚಟುವಟಿಕೆಗಳ ತಿಂಗಳಾಗಿ ಆಚರಿಸಿತು. ಅಮೇರಿಕದಲ್ಲೂ ರೀಗನ್ ಧೋರಣೆಗಳ ವಿರುದ್ಧ ಅತ್ಯಂತ ದೊಡ್ಡ ಮತ ಪ್ರದರ್ಶನ ನಡೆದವು.

ಈ ರೀತಿ ಶಾಂತಿಯ ಉದ್ದೇಶಕ್ಕಾಗಿ ಸಂಘಟಿತ ಕಾರ್ಮಿಕವರ್ಗದ ಆಂದೋಲನ ಕಣಕ್ಕಿಳಿದಿರುವುದು ಯುದ್ಧದ ವಿರುದ್ಧ ಹೋರಾಟದಲ್ಲಿ ಒಂದು ಮಹತ್ವದ ಬೆಳವಣಿಗೆ. ಶಾಂತಿಗಾಗಿ

ಕವರ್ಗದ ಅತ್ಯಂತ ದೊಡ್ಡ ಆಂದೋಲನ, ಕಾರ್ಮಿಕ ವರ್ಗದ ಅಂತರ್‌ರಾಷ್ಟ್ರೀಯತೆಯ ಅಗಾಧ ಪರಿಣಾಮದ ಅಭಿವ್ಯಕ್ತಿ.

ಭಾರತದ ಕಾರ್ಮಿಕ ವರ್ಗ ಮತ್ತು ಸಿ. ಐ. ಟಿ. ಯು. ಬೆಳೆಯುತ್ತಿರುವ ಈ ಒಗ್ಗಟ್ಟನ್ನು ಸ್ವಾಗತಿಸುತ್ತದೆ. ಮತ್ತು ಭಾರತದಲ್ಲಿ ಶಾಂತಿಹೋರಾಟವನ್ನು ಹರಡಲು ಕಾರ್ಯಾಚರಣೆಗಿಳಿಯುವ ತಮ್ಮ ದೃಢ ನಿರ್ಧಾರವನ್ನು ವ್ಯಕ್ತಪಡಿಸುತ್ತದೆ.

ಬಂಡವಾಳಶಾಹಿ ದೇಶಗಳಲ್ಲಿ ಆರ್ಥಿಕ ಬಿಕ್ಕಟ್ಟಿನ ಹಾಗೂ ಅವರ ಸುಧಾರಣೆಯ ಹೆಚ್ಚಿನ ದೋರಣೆಯನ್ನು ಕಾರ್ಮಿಕರು ಹೊರಬೇಕಾಗಿದೆ. ಅಮೇರಿಕದಲ್ಲಿ ನಿರುದ್ಯೋಗ ದೊಂದಿಗೆ ಕಾರ್ಮಿಕರಿಗೆ ಕೆಲಸ ಕಳೆದು ಕೊಳ್ಳುವ ಬೆದರಿಕೆ ಹಾಕಲಾಗುತ್ತಿದೆ. ಇಲ್ಲವಾದರೆ ವೇತನ ಕಡಿತ, ಹೆಚ್ಚಿನ ಶ್ರಮಭಾರ ಒಪ್ಪಲು ಬಲತ್ಕಾರ ಮಾಡಲಾಗುತ್ತಿದೆ. ಬ್ರಿಟನ್ನಿನಲ್ಲಿ ಮತ್ತು ಇತರೆಡೆ ಕಾರ್ಮಿಕ ಸಂಘಟನೆಯ ಹಕ್ಕುಗಳಮೇಲೆ ಪ್ರಹಾರ ನಡೆಯುತ್ತಿದ್ದರೆ, ಗುತ್ತೇದಾರಿಗಳು ಬಿಕ್ಕಟ್ಟಿನ ದುರ್ಲಾಭ ಪಡೆದು ಗಟ್ಟಿಗೊಳ್ಳುತ್ತಿದ್ದಾರೆ, ಸಂಪನ್ಮೂಲಗಳ ಕೇಂದ್ರೀಕರಣ ನಡೆಯುತ್ತಿದೆ.

ಈ ಸಂಕಷ್ಟಗಳು, ಹಲ್ಲೆಗಳ ನಡುವೆ ಕಾರ್ಮಿಕ ವರ್ಗ ತನ್ನ ಹಕ್ಕುಗಳನ್ನು, ಜೀವನ ಮಟ್ಟವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಬೇಕಾಗಿ ಬಂತು, ನಡೆಸುತ್ತಿದೆ. ಮಾರ್ಚ್ 24 ರಂದು ರೋಮಿನಲ್ಲಿ ಐದೂವರೆ ಲಕ್ಷ ಕಾರ್ಮಿಕರು ಮತಪ್ರದರ್ಶನನಡೆಸಿದರು. ಇತರೆಡೆಯೂ, ಸಭೆ ಮತಪ್ರದರ್ಶನ, ಅಲ್ಪಾವಧಿಯ ಮುಷ್ಕರಗಳು, ಕಾರ್ಖಾನೆಯನ್ನು ವಶಪಡಿಸಿಕೊಂಡು ತಾವೇ ನಡೆಸುವುದು ಇತ್ಯಾದಿ ನಡೆಯುತ್ತಿವೆ. ತಕ್ಷಣದ ಮಹತ್ವದ ಪ್ರಶ್ನೆಗಳನ್ನು ಎತ್ತಿಕೊಳ್ಳುವಾಗ ಸಮಸ್ತ ದೇಶಕ್ಕೆ ಮಹತ್ವ ಪೂರ್ಣವಾದ ಧೋರಣೆಗಳನ್ನೂ ಮುಂದುವರಿದ ಬಂಡವಾಳಶಾಹಿ ದೇಶದ ಕಾರ್ಮಿಕ ಸಂಘಗಳು ಎತ್ತಿಕೊಳ್ಳಬೇಕಾಗಿ ಬರುತ್ತಿದೆ. ಆರ್ಥಿಕ ಹೋರಾಟಗಳು ಮತ್ತು ಶಾಂತಿ ಹೋರಾಟ ಒಂದರೊಡನೊಂದು ಬೆಸೆದು ಕೊಳ್ಳುತ್ತಿದೆ.

> ಮುಂದುವರಿದ ಬಂಡವಾಳಶಾಹೀ ದೇಶಗಳ ಕಾರ್ಮಿಕ ವರ್ಗ ಎರಡು ರೀತಿಯ ಹೋರಾಟಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ — ಯುದ್ಧದ ವಿರುದ್ಧ ಮತ್ತು ನಿರುದ್ಯೋಗ ಹಾಗೂ ಬಿಕ್ಕಟ್ಟಿನ ವಿರುದ್ಧ. ಅದು ಆಳುವ ವರ್ಗಗಳ ವಿರುದ್ಧ ಹೆಚ್ಚೆಚ್ಚು ಒಗ್ಗಟ್ಟು ಸಾಧಿಸಿ ಧೀರ ಹೋರಾಟ ನಡೆಸುತ್ತಿದೆ. ಈ ಎರಡು ವಿಧದ ಹೋರಾಟಗಳಲ್ಲಿ ಅವರಿಗೆ ಜಯಸಿಗಲಿ ಎಂದು ಸಿ.ಐ.ಟಿ ಯು ಮತ್ತು ಭಾರತದ ಕಾರ್ಮಿಕ ವರ್ಗ ಹಾರೈಸಬೇಕಾಗಿದೆ.

ಒಟ್ಟಿನಲ್ಲಿ, ಈ ಮುಂದುವರಿದ ಬಂಡವಾಳಶಾಹೀ ದೇಶಗಳಲ್ಲಿ ಕಾರ್ಮಿಕ ವರ್ಗ ಎರಡು ಜಾತಿಯ ಹೋರಾಟಗಳಲ್ಲಿ ತೊಡಗಿರುವುದನ್ನು ಕಾಣಬಹುದಾಗಿದೆ. ಯುದ್ಧದ ವಿರುದ್ಧ ಮತ್ತು ನಿರುದ್ಯೋಗ ಮತ್ತು ಬಿಕ್ಕಟ್ಟಿನ ವಿರುದ್ಧ. ಅದು ಆಳುವ ವರ್ಗಗಳ ವಿರುದ್ಧ ಹೆಚ್ಚೆಚ್ಚು ಒಗ್ಗಟ್ಟು ಸಾಧಿಸಿ ಧೀರ ಹೋರಾಟ ನಡೆಸುತ್ತಿದೆ. ಈ ಎರಡು ವಿಧ ಹೋರಾಟಗಳಲ್ಲಿ ಅವರಿಗೆ ಜಯ ಸಿಗಲಿ ಎಂದು ಸಿ. ಐ. ಟಿ. ಯು. ಮತ್ತು ಭಾರತದ ಕಾರ್ಮಿಕ ವರ್ಗ ಹಾರೈಸಬೇಕಾಗಿದೆ.

ನಮ್ಮ ಕರ್ತವ್ಯ

ಈ ಹಿನ್ನೆಲೆಯಲ್ಲಿ ನಾವು ನಿರ್ವಹಿಸಬೇಕಾದ ಕರ್ತವ್ಯವನ್ನು ಈ ವರ್ಷದ ಮೇ ದಿನ ನಮ್ಮ ನೆನಪಿಗೆ ತರುತ್ತಿದೆ. ಯುದ್ಧ ಮತ್ತು ಶಾಂತಿಯ ಮುಖ್ಯ ಪ್ರಶ್ನೆಯನ್ನು ನಮ್ಮ ಕಾರ್ಮಿಕ ಸಂಘಗಳು ಮತ್ತು ನಮ್ಮ ಸಮಸ್ತ ಕಾರ್ಮಿಕ ಆಂದೋಲನ ಇನ್ನೂ ಕೈಗೆತ್ತಿಕೊಂಡಿಲ್ಲ ಎಂಬ ಅರಿವು ನಮಗೆಲ್ಲರಿಗಿದೆ ಜಗತ್ತಿನ ಕಾರ್ಮಿಕ ವರ್ಗದ, ಜನತೆಗಳಿಗೆ ಪ್ರತಿಯಾಗಿ ಭಾರತದ ಕಾರ್ಮಿಕ ವರ್ಗ ತನ್ನ ಕನಿಷ್ಠ ಕರ್ತವ್ಯವನ್ನು ನಿರ್ವಹಿಸಬೇಕಾದರೆ ಈ ದೌರ್ಬಲ್ಯವನ್ನು ನೀಗಬೇಕಾಗಿದೆ.

ನಾವು ಈಗಾಗಲೇ ಈ ಹಾದಿಯಲ್ಲಿ ಮುಂದುವರೆದಿದ್ದೇವೆ. ನಮ್ಮ ಘಟಕಗಳು ಅಂದರೆ ಪಶ್ಚಿಮ ಬಂಗಾಲ, ಕೇರಳದ ಸಿ ಐ.ಟಿ.ಯು. ಸಮಿತಿಗಳು ಮುಂತಾದವುಗಳು ಕಾರ್ಮಿಕ ಸಮೂಹದೆದುರು ಈ ಪ್ರಶ್ನೆಗಳನ್ನು ಪ್ರಸ್ತುತಪಡಿಸುತ್ತಿವೆ. ಈಗ ಇತರ ಶಕ್ತಿಗಳೂ ಈ ಕ್ಷೇತ್ರವನ್ನು ಪ್ರವೇಶಿಸಿ ನಮಗೆ ನೆರವು ನೀಡುತ್ತಿವೆ. ಇತ್ತೀಚಿಗೆ ನವದೆಹಲಿಯಲ್ಲಿ ನಡೆದ ರಾಜಕೀಯ ಪಕ್ಷಗಳ ಶಾಂತಿಸಮ್ಮೇಳನ ಈ ಪ್ರಶ್ನೆಯನ್ನು ಜನತೆಯ ನಡುವೆ ಕೊಂಡೊಯ್ಯಲು ನಮಗೊಂದು ಅವಕಾಶ ನೀಡಿವೆ. ಕಾರ್ಮಿಕ ವರ್ಗ ಮತ್ತು ಇತರ ಜನವಿಭಾಗಗಳಲ್ಲಿ ಜಾಗೃತಿ ಮೂಡಿಸಲು ನಮ್ಮ ಸಂಘಗಳೆಲ್ಲಾ ಈ ಅವಕಾಶವನ್ನು ಬಳಸಿಕೊಳ್ಳಬೇಕು. ಬೂರ್ಜ್ವಾ ಮತ್ತು ಸುಧಾರಣಾವಾದಿ ಪ್ರಭಾವಗಳಿಂದಾಗಿ ನಮ್ಮ ಕಾರ್ಮಿಕ ವರ್ಗದಲ್ಲಿ ಬಂದಿರುವ ಅಂತರ್‌ರಾಷ್ಟ್ರೀಯತೆಯ ಅಭಾವವನ್ನು ಎದುರಿಸಿ ಕ್ರಮೇಣ ಸತತವಾಗಿ ಅದನ್ನು ನೀಗಿ ನಮ್ಮ ಕಾರ್ಮಿಕ ವರ್ಗ ಜಾಗತಿಕ ಶಾಂ

ಸೇನೆಯ ಶಕ್ತಿಶಾಲಿ ತುಕಡಿಯಾಗುವಂತೆ ಮಾಡಬೇಕಾಗಿದೆ.

ಕಳೆದ ಈ ವರ್ಷದಲ್ಲಿ ನಾವು ಕಾರ್ಮಿಕರ ಹಕ್ಕುಗಳನ್ನು ರಕ್ಷಿಸುವ ಹಲವು ಹೋರಾಟಗಳಲ್ಲಿ ನಿರತರಾಗಿದ್ದೆವು. ದಮನ ದಂಡನೆಗಳನ್ನು ಸಹಿಸಿಯೂ ಕಾರ್ಮಿಕ ಸಂಘಗಳು ಮತ್ತು ಕಾರ್ಮಿಕರು ಹೋರಾಟ ಮುಂದುವರಿಸಿದರು. ಹಲವರಿಗೆ ದೀರ್ಘಾವಧಿ ಜೇಲುಶಿಕ್ಷೆಯಾಯಿತು ಹಲವರ ಮೇಲೆ ಬಾಡಿಗೆ ಗೂಂಡಾಗಳು ಅಮಾನುಷ ಹಲ್ಲೆ ನಡೆಸಿದರು, ಅವರ ಹೆಂಡತಿ-ಮಕ್ಕಳೂ ಕೂಡ ಹಂತಕರ ಪ್ರಯತ್ನಗಳಿಗೆ ಹೊರತಾಗಿರಲಿಲ್ಲ.

ಹಲವು ವಿಜಯಗಳನ್ನು ಸಾಧಿಸಿದೆವು. ದಮನವಲ್ಲದೆ ಲಾಕೌಟುಗಳ ಮೂಲಕ ಹಲವರನ್ನು ಬೀದಿಗೆಸೆಯಲಾಯಿತು. ಲಾಕೌಟ್‌ಗಳಿಂದಾಗಿ 1980ರಲ್ಲಿ 99.9 ಲಕ್ಷ ಶ್ರಮದಿನಗಳು, 1981 ರಲ್ಲಿ 1 ಕೋಟಿ 53.8 ಲಕ್ಷ ಮತ್ತು 1982 ರಲ್ಲಿ 1 ಕೋಟಿ 75.5 ಲಕ್ಷ ಶ್ರಮದಿನಗಳು ನಷ್ಟವಾಗಿವೆ ಎಂದು ಅಧಿಕೃತ ಅಂಕೆ ಸಂಖ್ಯೆಗಳಿಂದ ತಿಳಿದು ಬರುತ್ತಿದೆ. ನಮ್ಮ ವರ್ಗದ ಮೇಲೆ ಹೇರಿದ ಈ ಅಗಾಧ ಗಾತ್ರದ ಸಾಕಷ್ಟು ತೊಂದರೆಯನ್ನು ಇದರಿಂದ ಯಾರಾದರೂ ಊಹಿಸಬಹುದು. ಈ ಸಂಕಷ್ಟಗಳ ಪ್ರಮುಖ ಹೊರೆಯನ್ನು ಪಶ್ಚಿಮ ಬಂಗಾಳ ಹೊರಬೇಕಾಗಿ ಬಂತು.

ಕಾರ್ಮಿಕರ ಐಕ್ಯತೆ

ಈ ರಾಕ್ಷಸೀ ಹಲ್ಲೆ ಹಾಗೂ ತೀವ್ರಗೊಳ್ಳುತ್ತಿರುವ ನಿರುದ್ಯೋಗದ ವಿರುದ್ಧ ಸಿ.ಐ.ಟಿ.ಯು. ಹಾಗೂ ಅದರ ಸಂಘಗಳು ಎಡಬಿಡದೆ ಹೋರಾಟ ನಡೆಸಿದವು ಸಿ.ಐ.ಟಿ.ಯು. ಕಾರ್ಮಿಕ ಸಂಘಗಳ ಐಕ್ಯತೆಗಾಗಿ ಶ್ರಮಿಸುತ್ತಲೇ ಇದೆ ರಾಷ್ಟ್ರೀಯ ಆಂದೋಲನ ಸಮಿತಿ (ಎನ್. ಸಿ. ಸಿ.) ಹೆಚ್ಚೆಚ್ಚಾಗಿ ಆಂದೋಲನದ ಒಗ್ಗಟ್ಟಿನ ಮುಖವಾಣಿಯಾಗಿ ಮೂಡಿಬರುತ್ತಿದೆ.

ಸರಕಾರದೊಡನೆ ಮಾತುಕತೆಗಳಲ್ಲಿ ಈ ಹೆಚ್ಚುತ್ತಿರುವ ಒಗ್ಗಟ್ಟಿನಿಂದಾಗಿ ಉಕ್ಕು, ಕಲ್ಲಿದ್ದಲು ಮತ್ತು ಇತರ ಕೈಗಾರಿಕೆಗಳಲ್ಲಿ ಹಲವು ಪ್ರಯೋಜನಕಾರೀ, ಲಾಭಪ್ರದ ಒಪ್ಪಂದಗಳಿಗೆ ಸಹಿ ಹಾಕುವುದು ಸಾಧ್ಯವಾಯಿತು. ಈ ಮಾತುಕತೆಗಳಲ್ಲಿ ಇಂಟಕ್ ಕೂಡಾ ಎನ್.ಸಿ.ಸಿ. ಯ ಘಟಕಗಳಿಗೆ ಬೆಂಬಲವಾಗಿ ನಿಂತಿತು. ಕಳೆದ ವರ್ಷದಲ್ಲಿ ಕಾರ್ಮಿಕ ಸಂಘಗಳ ಐಕ್ಯತೆಯಲ್ಲಿ ನಾವು ಹೊಸ ಯಶಸ್ಸು ಸಾಧಿಸಿದೆವು ಎಂದು ಹೇಳಬಹುದು. ಪಶ್ಚಿಮ ಬಂಗಾಳದ ಸೆಣಬು ಮುಷ್ಕರದಲ್ಲಿ, ಬಂದರು ಮತ್ತು ಹಡಗುಕಟ್ಟೆ ಕಾರ್ಮಿಕರ ಮುಷ್ಕರದಲ್ಲಿ ಅದನ್ನು ನಾವು ನೋಡಿದೆವು.

ಎನ್.ಸಿ.ಸಿ. ಯನ್ನು ಬಲಯುತಗೊಳಿಸಿ ಐಕ್ಯತೆಯ ಅಭೀಪ್ಸೆಯನ್ನು ವ್ಯಾಪಕಗೊಳಿಸಿದ್ದು ನಮ್ಮ ಹೋರಾಟ ನಿರತ ಕಾರ್ಮಿಕ ವರ್ಗ ಮತ್ತು ಸಂಘಗಳ ಮಹತ್ವ ಪೂರ್ಣ ಸಾಧನೆ.

ಈ ಮೇ ದಿನದಂದು ಈ ಐಕ್ಯತೆಯನ್ನು ಸರ್ವ ವ್ಯಾಪಕಗೊಳಿಸಿ, ಎಲ್ಲಾ ಕಾರ್ಮಿಕ ಸಂಘಗಳ ಕೇಂದ್ರಗಳ ಹಾಗೂ ಕೈಗಾರಿಕಾ ಒಕ್ಕೂಟಗಳ ಒಂದು ಮಹಾ ಒಕ್ಕೂಟದ ಮೂಲಕ ಅದಕ್ಕೊಂದು ಸ್ಥಿರ ಸ್ವರೂಪ ಕೊಡಲು ನಾವು ನಿರ್ಧರಿಸಬೇಕು. ಸರಕಾರೀ ಧೋರಣೆಗಳನ್ನು ಎದುರಿಸಿ ಜನತೆಯ ಹಿತಾಸಕ್ತಿಗಳಿಗನುಗುಣವಾಗಿ ಅರ್ಥ ವ್ಯವಸ್ಥೆಯನ್ನು ನಡೆಸುವ ಧೋರಣೆಗಳನ್ನು ಪ್ರತಿಪಾದಿಸಲು ಅನುವಾಗುವಂತೆ ಕಾರ್ಮಿಕ ಆಂದೋಲನದ ಸಮಸ್ತ ಬಲವನ್ನು ಒಗ್ಗೂಡಿಸುವುದಕ್ಕಾಗಿ ಸಿ.ಐ.ಟಿ.ಯು. ಇಂತಹ ಒಂದು ಮಹಾ ಒಕ್ಕೂಟದ ಬಗ್ಗೆ ಹೇಳುತ್ತಾ ಬಂದಿದೆ.

ಅರ್ಥ ವ್ಯವಸ್ಥೆಯ ನಿರ್ವಹಣೆ ಹಾಗೂ ಕೈಗಾರಿಕಾ ನಿರ್ವಹಣೆಯಲ್ಲಿ ತಾನು ಸಮಾನ ಸ್ಥಾನಮಾನಕ್ಕಾಗಿ ಒತ್ತಾಯಿಸಬೇಕಾದ ಸಮಯವೀಗ ಬಂದಿದೆ ಎಂದು ಕಾರ್ಮಿಕ ವರ್ಗ ಈ ಮೇ ದಿನದಂದು ಅರಿಯಬೇಕಾಗಿದೆ. ಅಗಾಧ ನಿರುದ್ಯೋಗ, ಕಾರ್ಖಾನೆ ಮುಚ್ಚುವಿಕೆ, ಲಾಕೌಟ್ ಜತೆಗೆ ಅಭಾವ ಮತ್ತು ಕೈಗಾರಿಕಾ ಸಾಮರ್ಥ್ಯದ ಪೂರ್ಣ ಬಳಕೆಯಾಗದಿರುವುದು ಇವೆಲ್ಲಾ ಖಾಸಗೀ ಮತ್ತು ಅಧಿಕಾರಶಾಹೀ ನಿರ್ವಹಣೆಯ ಹಾಗೂ ಸರಕಾರ ಧೋರಣೆಗಳ ದಿವಾಳಿಕೋರತನವನ್ನು ತೋರಿಸಿಕೊಡುತ್ತಿವೆ. ಖಾಸಗೀ ಕ್ಷೇತ್ರಗಳಲ್ಲಿ ಆಡಳಿತದ ಈ ಗುತ್ತೇದಾರಿಯಿಂದಾಗಿ ಕಾರ್ಮಿಕ ವರ್ಗ ಮತ್ತು ನಮ್ಮ ಜನತೆ ಅಗಣಿತ ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂದಿದೆ. ನಮ್ಮ ದೇಶದ ಮತ್ತು ನಮ್ಮ ಜನತೆಯ ಹಿತಾಸಕ್ತಿಗನುಗುಣವಾಗಿ ಕೈಗಾರಿಕೆ ಮತ್ತು ಅರ್ಥವ್ಯವಸ್ಥೆಯ ನಿರ್ವಹಣೆಯಲ್ಲಿ ಕಾರ್ಮಿಕರು ಸಮಾನ ಸ್ಥಾನಮಾನ ಮತ್ತು ಹಕ್ಕುಗಳಿಗಾಗಿ ಒತ್ತಾಯಿಸುತ್ತೇವೆ.

ಕಳೆದ ಮೇ ದಿನದ ನಂತರದ ಈ ಒಂದು ವರ್ಷದಲ್ಲಿ ಭಾರತದ ಕಾರ್ಮಿಕರು ಸರ್ವಾಧಿಕಾರೀ ಸರಕಾರದ ವಿರುದ್ಧ ಸತತ ಘರ್ಷಣೆಯಲ್ಲಿ ತೊಡಗಿದ್ದಾರೆ ವಿಶೇಷವಾಗಿ ಪಶ್ಚಿಮಬಂಗಾಳ ಮತ್ತು ಕೇರಳದಲ್ಲಿ ಅವರು ಕೇಂದ್ರದ ಆಳುವ ಪಕ್ಷದೊಂದಿಗೆ ಒಂದು ರಾಜಕೀಯ ಹೋರಾಟದಲ್ಲಿ ನಿರತರಾಗಿದ್ದಾರೆ.

ಕೇಂದ್ರ – ರಾಜ್ಯ ಸಂಬಂಧ

ಕಾಂಗ್ರೆಸ್ (ಐ)ನ ಉರುಳಿಸುವ ಆಟವನ್ನು ವಿಫಲಗೊಳಿಸಿ ಪಶ್ಚಿಮ ಬಂಗಾಳದ ಎಡರಂಗ ಸರಕಾರದ ಧೀರ ರಕ್ಷಣೆಗೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ನೆರವಾದ ಆ ರಾಜ್ಯದ ಕಾರ್ಮಿಕರು ಮತ್ತು ಸಿ.ಐ.ಟಿ.ಯು ಸಂಘಗಳು ಶ್ಲಾಘನಾರ್ಹ ಎಡರಂಗ ಸರಕಾರದ. ಹೇರು ಕೆಡಿಸಲು ದೋಷಾರೋಪಣೆ ಮಾಡಲು ಎಲ್ಲಾ ನೆವಗಳನ್ನೂ ಒಡ್ಡುವಲ್ಲಿ, ವಿಧಾನ ಸಭೆಯಲ್ಲಿ ಹೊಲಸು ರೀತಿಯ, ಅರಾಜಕ ಹಿಂಸೆಯಲ್ಲಿ ತೊಡಗಿದಾಗ ಆಳುವ ಕಾಂಗ್ರೆಸ್ (ಐ) ಪಕ್ಷ ಮತ್ತು ಅದರ ಪ್ರತಿನಿಧಿಗಳು ನಮ್ಮನ್ನು ಅತ್ಯಂತ ನಿಕೃಷ್ಟ ಮಟ್ಟಕ್ಕೆ ಇಳಿಸಿಕೊಂಡರು. ಇದು ಸರ್ವಾಧಿಕಾರೀ ಶಕ್ತಿಗಳು ಮತ್ತು ಪ್ರಜಾಪ್ರಭುತ್ವ ಚಳುವಳಿಯ ಮುಂದುವರಿದ ವಿಭಾಗಗಳ ನಡುವಿನ ಯುದ್ಧ ಎಂಬುದು ಅವರಿಗೆ ತಿಳಿದಿದೆ. ಎಡರಂಗವನ್ನು ಒಂಟಿಯಾಗಿಸುವ ಅವರ ಪ್ರಯತ್ನಗಳು ಬಾರಿ ಬಾರಿಗೂ ವಿಫಲಗೊಂಡಿವೆ. ಇದಕ್ಕೆ ಕಾರಣ ಕಾರ್ಮಿಕರ ಮತ್ತು ಜನತೆಯ ರಾಜಕೀಯ ಜಾಗರೂಕತೆ.

ಎಡರಂಗ ಮತ್ತು ಕಾಂಗ್ರೆಸ್ (ಐ) ಪಕ್ಷ, ಅದರ ಬೆಂಬಲಕ್ಕೆ ನಿಂತ ಕೇಂದ್ರ ಸರಕಾರ ಇವುಗಳ ನಡುವಿನ ಹೋರಾಟ ನಿಂತ ಕಾಂ ಜ್ಯೋತಿ ಬಸುರವರ ನೇತೃತ್ವದ ಎಡರಂಗ ಸರಕಾರದ ಪ್ರಯೋಜನವನ್ನು ಪಶ್ಚಿಮ ಬಂಗಾಳದ ಕಾರ್ಮಿಕರು ಪಡೆದಿದ್ದಾರೆ. ಅಲ್ಲಿ ಮುಷ್ಕರದ ಹಕ್ಕಿಗೆ ಸಂಪೂರ್ಣ ರಕ್ಷಣೆ ದೊರೆತಿದೆ. ಕೈಗಾರಿಕಾ ವಿವಾದಗಳಲ್ಲಿ ಪೋಲಿಸ್ ಮಧ್ಯ ಪ್ರವೇಶಿಸುವುದಿಲ್ಲ ಎಂಬ ಬಗ್ಗೆ ಭರವಸೆಯಿದೆ. ಕಾಂಗ್ರೆಸ್ (ಐ) ಆಳ್ವಿಕೆಯ ಯಾವ ರಾಜ್ಯಗಳಲ್ಲೂ ಎಂದೂ ಕಾಣಸಿಗದ ಸಂಪೂರ್ಣ ಸ್ವಾತಂತ್ರ್ಯದ ಸನ್ನಿವೇಶದಲ್ಲಿ ಎರಡು ಲಕ್ಷ ಕಾರ್ಮಿಕರು ಭಾಗವಹಿಸಿದ್ದ ಸೆಣಬು ಮುಷ್ಕರ ನಡೆಯಿತು. ಕಾರ್ಮಿಕ ಮಂತ್ರಿಯ ಮಧ್ಯ ಪ್ರವೇಶದಿಂದಾಗಿ ಹಲವು ವೇತನ ಮತ್ತು ಇತರ ಒಪ್ಪಂದಗಳು ಕೈಗೂಡಿವೆ.

ಆದರೂ ಈ ಅಪೂರ್ವ ಪ್ರಯೋಜನಕಾರೀ ಸನ್ನಿವೇಶವನ್ನು ಸಾಮೂಹಿಕ ಸದಸ್ಯತ್ವ ಪಡೆದು ಮುನ್ನಡೆಸಾಧಿಸುವಲ್ಲಿ, ಕಾಂಗ್ರೆಸ್ (ಐ)ನ್ನು ಕಾರ್ಮಿಕ

> ಎಲ್ಲಾ ರಾಜ್ಯಗಳಲ್ಲಿ ಸಿ.ಐ.ಟಿ.ಯು. ಸಂಘಗಳು ನಿರಂತರ ಹೋರಾಟ ನಡೆಸುತ್ತಾ ಎನ್.ಸಿ.ಸಿ.ಯನ್ನು ಬಲಪಡಿಸುವಲ್ಲಿ ಹಾಗೂ ಕಾರ್ಮಿಕ ಸಂಘಗಳ ಐಕ್ಯತೆ ಸಾಧಿಸಲು ಸಕಲ ಪ್ರಯತ್ನ ಮಾಡುತ್ತಿವೆ. ಆಂಧ್ರ, ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಎಲ್ಲೆಡೆ ವ್ಯಾಪಕ ಪ್ರತಿರೋಧ ಸಂಘಟಿಸಲಾಗುತ್ತಿದೆ ಜಾತೀವಾದ ಕೋಮುವಾದ ಭಾಷಾವಾದ ತಲೆಯೆತ್ತಿರುವ ಸನ್ನಿವೇಶದಲ್ಲಿ ಕಾರ್ಮಿಕರ ಒಗ್ಗಟ್ಟು ಕಾಯ್ದುಕೊಳ್ಳಲು ನಮ್ಮ ಸಂಘಗಳು ಬಹಳ ಶ್ರಮಪಡಬೇಕಾಗಿದೆ. ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ಹೋರಾಡುತ್ತಾ ತಾನು ರಾಷ್ಟ್ರೀಯ ಐಕ್ಯತೆಯ ಪ್ರತಿಪಾದಕ ಎಂಬುದನ್ನು ನಮ್ಮ ಕಾರ್ಮಿಕ ವರ್ಗ ತೋರಿಸಿಕೊಡುತ್ತಿದೆ.

ತೀವ್ರಗೊಂಡುದು ಕಳೆದ ವರ್ಷದ ಒಂದು ಪ್ರಮುಖ ಅಂಶ. ಇದರಿಂದಾಗಿ ಕೇಂದ್ರ ರಾಜ್ಯ ಸಂಬಂಧಗಳು ಒಂದು ಪ್ರಮುಖ ಪ್ರಶ್ನೆಯಾಗಿ ಜನತೆಯ ಸಮ್ಮುಖ ಸ್ಪಷ್ಟವಾಗಿ ನಿಂತಿದೆ.

ಕೇಂದ್ರದಲ್ಲಿ ಸಂಪನ್ಮೂಲಗಳ ಮತ್ತು ರಾಜಕೀಯ ಶಕ್ತಿಯ ಕೇಂದ್ರೀಕರಣ, ಪಶ್ಚಿಮ ಬಂಗಾಲ ಮತ್ತು ತ್ರಿಪುರದ ಸರ್ಕಾರಗಳ ವಿರುದ್ಧ ನಗ್ನ ರೀತಿಯ ಪಕ್ಷಪಾತ, ಓವರ್‌ಡ್ರಾಫ್ಟ್ ಪ್ರಶ್ನೆ ಇವೆಲ್ಲಾ ಪ್ರಜಾಪ್ರಭುತ್ವವಾದೀ ಶಕ್ತಿಗಳಲ್ಲಿ ಆತಂಕ ಮೂಡಿಸಿದ ಪ್ರಶ್ನೆಗಳು ಕೇಂದ್ರ-ರಾಜ್ಯ ಸಂಬಂಧಗಳಲ್ಲಿ ಒಂದು ತೀವ್ರ ಬದಲಾವಣೆಯ ಅಗತ್ಯವನ್ನು ಅವು ಸಾರಿ ಹೇಳುತ್ತಿದೆ.

ಈ ಪ್ರಮುಖ ಪ್ರಶ್ನೆ ಪಶ್ಚಿಮ ಬಂಗಾಲ ಮತ್ತು ಕೇರಳದ ಕಾರ್ಮಿಕರು ಸುಮಾರಾಗಿ ತಮ್ಮ ಪ್ರಶ್ನೆಯೇ ಎಂದು ಬಗೆದಿದ್ದರೆ ಉಳಿದೆಡೆ ನಮ್ಮ ಸಂಘಗಳು ಹಾಗೂ ಕಾರ್ಮಿಕರು ಜನತೆಯಲ್ಲಿ ರಾಜ್ಯಕ್ಕೆ ಸ್ವಾಯತ್ತತೆ ಪಡೆಯಲು ಸಂವಿಧಾನದಲ್ಲಿ ಒಂದು ತೀವ್ರ ಬದಲಾವಣೆ ತರಬೇಕಾದುದರ ಅಗತ್ಯದ ಬಗ್ಗೆ ಪ್ರಜ್ಞೆಯನ್ನು ಇನ್ನು ಮೂಡಿಸಬೇಕಾಗಿದೆಯಷ್ಟೆ.

ಏಳು ವರ್ಷಗಳ ಕಾಲ ತಮ್ಮ ಹಕ್ಕುಗಳ ರಕ್ಷಣೆ ಮತ್ತು ಬೆಂಬಲಕ್ಕೆ ವರ್ಗದಿಂದ ಪೂರ್ಣವಾಗಿ ದೂರಮಾಡುವಲ್ಲಿ, ನಮ್ಮ ಸಂಘಗಳನ್ನು ಇತರರಿಗಿಂತ ಬಲಶಾಲಿಗೊಳಿಸುವಲ್ಲಿ ಪೂರ್ಣವಾಗಿ ಉಪಯೋಗಿಸಿಕೊಂಡಿದ್ದೇವೆ. ಎಂದು ಹೇಳಲು ಸಾಧ್ಯವಿಲ್ಲ. ಸದ್ಯದ ಸಾಧನೆಯಿಂದಲೇ ನಾವು ತೃಪ್ತರಾಗಲು ಸಾಧ್ಯವಿಲ್ಲ. ಇದರಲ್ಲಿ ಸಮಯದೊಂದಿಗೆ ನಾವು ಸ್ಪರ್ಧಿಸಬೇಕಾಗಿದೆ. ಜನತೆಗೆ ವಿರೋಧಿಯಾದ ಶಕ್ತಿಗಳು ನಮ್ಮ ಪ್ರತಿಯೊಂದು ದೌರ್ಬಲ್ಯವನ್ನು ಉಪಯೋಗಿಸಿ ನಮ್ಮನ್ನೇ ಸೋಲಿಸಲು ತಯಾರಾಗುತ್ತಿವೆ.

ನಿರಂತರ ಹೋರಾಟ

ಕೇರಳದಲ್ಲಿ ಐಕ್ಯತೆ ಸಾಧಿಸುವಲ್ಲಿ ನಮ್ಮ ಸಂಘಗಳು ಗಮನಾರ್ಹ ಪ್ರಗತಿ ಸಾಧಿಸಿವೆ. ಮತ್ತು ಆಳುವ ಕಾಂಗ್ರೆಸ್ (ಐ) ಸರಕಾರದ ಧೋರಣೆಗಳ ವಿರುದ್ಧ ಒಂದಾದಮೇಲೊಂದರಂತೆ ಹೋರಾಟ ನಡೆಸುವಲ್ಲಿ ಯಶಸ್ವಿಯಾಗಿದೆ. ಕೆಲವು ಹೋರಾಟಗಳಲ್ಲಿ ಇಂಟಕ್ ಕೂಡ ಸೇರಿದಂತೆ ಎಲ್ಲಾ ಸಂಘಗಳನ್ನು ಕಾಂಗ್ರೆಸ್ [ಐ] ಮಂತ್ರಿಮಂಡಲದ ವಿರುದ್ಧ ಒಗ್ಗೂಡಿಸುವಲ್ಲಿ ಸಿ. ಐ. ಟಿ. ಯು. ಯಶಸ್ವಿಯಾಗಿದೆ. ಇನ್ನೇನು ಸರಕಾರ ಉರುಳಿಯಿತು. ಎನ್ನುವ ಹಂತಕ್ಕೆ ತರಲು ಅದಕ್ಕೆ ಸಾಧ್ಯವಾಗಿದೆ. ನಮ್ಮ ಕೇರಳ ಸಿ. ಐ. ಟಿ. ಯು.ವ ಇತ್ತೀಚಿನ ಸಾಧನೆಯೆಂದರೆ ವಿದ್ಯುಚ್ಛಕ್ತಿ ಕಾರ್ಮಿಕರ ಸಂಪೂರ್ಣ ಮುಷ್ಕರ. ಇಂಟಕ್ ಸೇರಿದಂತೆ ಎಲ್ಲಾ ಸಂಘಗಳು ಇದರಲ್ಲಿ ಭಾಗವಹಿಸಿವೆ.

ಎಲ್ಲಾ ರಾಜ್ಯಗಳಲ್ಲಿ ಸಿ.ಐ.ಟಿ.ಯು. ಸಂಘಗಳು ನಿರಂತರ ಹೋರಾಟ ನಡೆಸುತ್ತಾ ಎನ್.ಸಿ.ಸಿ.ಯನ್ನು ಬಲಗೊಳಿಸಲು ಹಾಗೂ ಕಾರ್ಮಿಕ ಸಂಘಗಳ ಐಕ್ಯತೆ ಸಾಧಿಸಲು ಸಕಲ ಪ್ರಯತ್ನ ಮಾಡುತ್ತಿವೆ. ಆಂಧ್ರ, ಕರ್ನಾಟಕ ಮಹಾರಾಷ್ಟ್ರ, ಗುಜರಾತ್ ಎಲ್ಲೆಡೆ ವ್ಯಾಪಕ ಪ್ರತಿರೋಧ ಸಂಘಟಿಸಲಾಗುತ್ತಿದೆ, ಐಕ್ಯತೆಯನ್ನು ವ್ಯಾಪಕಗೊಳಿಸಲಾಗುತ್ತಿದೆ ಹಾಗೂ ಎಲ್ಲಾ ಕಡೆಯಿಂದಲೂ ನಡೆಯುತ್ತಿರುವ ವಿಚ್ಛಿದ್ರಕಾರೀ ಹಲ್ಲೆಗಳ ವಿರುದ್ಧ ಹೋರಾಡಲಾಗುತ್ತಿದೆ. ಜಾತೀವಾದ, ಕೋಮುವಾದ ಹಾಗೂ ಭಾಷಾವಾದ ತಲೆಯೆತ್ತಿರುವ ಸನ್ನಿವೇಶದಲ್ಲಿ ಕಾರ್ಮಿಕರ ಒಗ್ಗಟ್ಟು ಕಾಯ್ದುಕೊಳ್ಳಲು ನಮ್ಮ ಸಂಘಗಳು ಬಹಳ ಶ್ರಮ ಪಡಬೇಕಾಗಿದೆ.

ಹರಿಯಾಣ, ಪಂಜಾಬ್ ಮತ್ತು ಅಸ್ಸಾಂನಲ್ಲಿ ಕೋಮುವಾದಿ ಮತ್ತು ಪ್ರತ್ಯೇಕವಾದಿ ಶಕ್ತಿಗಳ ವಿರುದ್ಧ ಸತತ ಹೋರಾಟ ನಡೆಯುತ್ತಿದೆ. ವಿಚ್ಛಿದ್ರಕಾರೀ ಶಕ್ತಿಗಳ ವಿರುದ್ಧ ತಾನು ರಾಷ್ಟ್ರೀಯ ಐಕ್ಯತೆಯ ಪ್ರತಿಪಾದಕ ಎಂಬುದನ್ನು ಕಾರ್ಮಿಕ ವರ್ಗ ತೋರಿಸಿಕೊಡುತ್ತಿದೆ.

ರಾಜಸ್ಥಾನ, ಕೋಟಾ ಹಾಗೂ ಕಾನ್‌ಪುರಗಳಲ್ಲಿ ಮಾಲೀಕರು ಮತ್ತು ಸರಕಾರದಿಂದ ಸತತ ಕಿರುಕುಳಕ್ಕೊಳಗಾಗಿರುವ ನಮ್ಮ ಸಂಘಗಳು ಕಳೆದ ವರ್ಷ ನಡೆಸಿದ ತಿಂಗಳಾನುಗಟ್ಟಲೆ ಹೋರಾಟದ ನಂತರ ಇತ್ತೀಚೆಗೆ ಸಂಪೂರ್ಣವಾದ ಮತ್ತು ಪರಿಣಾಮಕಾರಿಯಾದ ಪ್ರತಿಭಟನೆ ಸಂಘಟಿಸಲು ಅವರಿಗೆ ಸಾಧ್ಯವಾಗಿದೆ. ಇದು ನಿಜವಾಗಿಯೂ ಒಂದು ಧೀರ ಕಾರ್ಯ. ಕಾಂಗ್ರೆಸ್ [ಐ] ಆಳ್ವಿಕೆಯ ರಾಜ್ಯಗಳಲ್ಲಿ ನಮ್ಮ ಸಂಘಗಳು ಎದುರಿಸಬೇಕಾದ ಅಮಾನುಷ ದಮನವನ್ನು ಅರಿಯುವಲ್ಲಿ ನಮ್ಮ ಹಲವು ಸಂಘಗಳು ಮತ್ತು ಸಂಗಾತಿಗಳು ವಿಫಲರಾಗಿದ್ದಾರೆ ಕೇರಳದಲ್ಲೇ ಆರ್. ಎಸ್ ಎಸ್. ಗೂಂಡಾಗಳು ಮತ್ತು ಇತರರು ಅಡಳಿತದ ಕುಮ್ಮಕ್ಕಿನಿಂದ ನಮ್ಮ ಹಲವರ ಕೊಲೆ ನಡೆಸಿದ್ದಾರೆ.

ಕಳೆದು ಹೋದ ವರ್ಷ ಹಲವು ಮಹತ್ವಪೂರ್ಣ ಪ್ರಶ್ನೆಗಳನ್ನು ಕಾರ್ಮಿಕ ಆಂದೋಲನದ ಸಮ್ಮುಖ ತಂದಿಟ್ಟಿದೆ. ಕಾರ್ಮಿಕ ವರ್ಗ ಮತ್ತು ಕಿಸಾನ್ ಆಂದೋಲನದ ನಡುವಿನ ಸಂಪರ್ಕದ ಸ್ಥಾಪನೆ ಅವುಗಳಲ್ಲೊಂದು.

ಕಳೆದ ಕೆಲವು ತಿಂಗಳುಗಳಲ್ಲಿ ದೇಶದ ಸುತ್ತ ಮುತ್ತ ಆತಂಕಕಾರಿ ಬೆಳವಣಿಗೆಗಳು ಕಂಡು ಬರುತ್ತಿವೆ.

[20 ನೇ ಪುಟ ನೋಡಿ]

ಮೇ ದಿನ, 1984...

[17 ನೇ ಪುಟದಿಂದ]

ಪ್ರತಿಕ್ರಿಯಾವಾದಿ ಸರ್ವಾಧಿಕಾರಿಗಳಿಂದ ದೇಶ ಸುತ್ತುವರಿಯಲ್ಪಡುತ್ತಿದೆ. ಪಾಕಿಸ್ತಾನ ಮತ್ತು ಬಾಂಗ್ಲಾ ದೇಶಗಳಲ್ಲಿ ಅಲ್ಲಿಯ ಜನರಿಗೇ ವಿರುದ್ಧವಾದ ಮಿಲಿಟರಿ ಸರ್ವಾಧಿಕಾರಗಳಿವೆ. ಅವು ಹೆಚ್ಚೆಚ್ಚು ಅಮೇರಿಕಾದ ನೆರವಿಗೆ ಬದ್ಧವಾಗುತ್ತಿವೆ. ಈ ಅಮೇರಿಕಾ ಭಾರತದಲ್ಲಿ ಗಂಭೀರ ಸ್ಥಿತಿ ಮತ್ತು ಒತ್ತಡ ಉಂಟುಮಾಡಲು ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ, ರಾಶಿರಾಶಿಯಾಗಿ ಸುರಿಯುತ್ತಿದೆ. [illegible] ವೈಷಮ್ಯಕ್ಕೆ ಬುನಾದಿ ಹಾಕಲಶಕ್ಯವೋ ಈ ಶಸ್ತ್ರಾಸ್ತ್ರಗಳು. ತಮಿಳು ಅಲ್ಪ ಸಂಖ್ಯಾತರ ಬೇಟೆಮಾಡುತ್ತಿರುವ ಶ್ರೀಲಂಕಾದ ಆಳುವ ವರ್ಗ ಕೂಡ ಇದೇ ದಾರಿ ಹಿಡಿದಿದೆ. ಅಮೇರಿಕನ್ ಸಾಮ್ರಾಜ್ಯಶಾಹಿ ಶ್ರೀಲಂಕೆಯೊಂದಿಗೆ ತನ್ನ ರಾಜಿಯನ್ನು ಮುಚ್ಚಿಹಾಕಲು ಭಾರತ - ವಿರೋಧಿ ಭಾವನೆಗಳನ್ನು ಕೆರಳಿಸುತ್ತಿದೆ. ಅಮೇರಿಕನ್ ಸಾಮ್ರಾಜ್ಯಶಾಹಿಗಳು ಟ್ರಿಂಕೋಮಾಲಿ ಮತ್ತು ಚಿತ್ತಗಾಂಗ್‌ನಲ್ಲಿ ಮಿಲಿಟರಿ ನೆಲೆಗಾಗಿ ಪ್ರಯತ್ನಿಸುತ್ತಿವೆ.

[illegible] ಈ ಸಾಮ್ರಾಜ್ಯ [illegible] ಯೊಂದಿಗೆ ದೇಶದಲ್ಲಿನ [illegible] ವಾದಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದೆ. ಅಸ್ಸಾಂನಲ್ಲಿ ಸಾಮ್ರಾಜ್ಯಶಾಹೀ ಏಜೆಂಸಿಗಳ ಪಾತ್ರ ಪೂರ್ಣವಾಗಿ ಜಾಹೀರಾಗಿದೆ ಪಂಜಾಬಿನ ಪರಿಸ್ಥಿತಿಯು ದುರ್ಲಾಭ ಪಡೆದು ಪ್ರತ್ಯೇಕತಾವಾದಿ ಮತ್ತು ಕೋಮುವಾದಿ ಶಕ್ತಿಗಳಿಗೂ ಅವರು ಕುಮ್ಮಕ್ಕು ನೀಡುತ್ತಿದ್ದಾರೆ. ಆಗಾಗ ತನ್ನ ರಾಷ್ಟ್ರೀಯವಾದೀ ದೃಷ್ಟಿಕೋನದ ಘೋಷಣೆ ಮಾಡುವ ಅಕಾಲಿ ನಾಯಕತ್ವ ಕೋಮುವಾದಿ ಶಕ್ತಿಗಳ ಅಸಹಾಯಕ ಕೈಗೊಂಬೆಯಾಗುತ್ತಿದೆ ತಕ್ಷಣದ ಪ್ರಯೋಜನಕ್ಕಾಗಿ ಕೋಮು ಭಾವನೆಗಳನ್ನು ಬಡಿದೆಬ್ಬಿಸುವ ಯಾರೇ ಆದರೂ ಅಂತಿಮವಾಗಿ ದೇಶದ ಶತ್ರುಗಳ ಕೈಗೊಂಬೆಯಾಗಬೇಕಾಗುತ್ತದೆ ಎಂಬುದನ್ನು ಇದು ತೋರಿಸುತ್ತದೆ.

ಈಗ ಸಾಮ್ರಾಜ್ಯಶಾಹಿಯಿಂದ ಪ್ರೋತ್ಸಾಹ ಪಡೆಯುತ್ತಿರುವ ವಿಚ್ಛಿದ್ರಕಾರೀ ಶಕ್ತಿಗಳು ಬೂರ್ಜ್ವಾ-ಭೂಮಾಲೀಕ ಕಾಂಗ್ರೆಸ್ ಸರಕಾರ ಒದಗಿಸಿದ ನೆಲದಲ್ಲಿ ಅರಳಲು ಅವಕಾಶವಾಗಿದೆ. ಬೂರ್ಜ್ವಾ-ಭೂಮಾಲಕ ವರ್ಗಗಳ ಹಿತಾಸಕ್ತಿಗಳೂ ರಕ್ಷಣೆಗೆ ಬದ್ಧವಾದ ಒಂದು ಸರಕಾರ ದೇಶದ ಐಕ್ಯತೆಯನ್ನಾಗಲೀ, ಅದರ ಸ್ವಾತಂತ್ರ್ಯವನ್ನಾಗಲೀ ರಕ್ಷಿಸಲಾರದು ಎಂಬುದನ್ನು ಇದು ಮತ್ತೊಮ್ಮೆ ತೋರಿಸಿಕೊಟ್ಟಿದೆ.

ಕಾಂಗ್ರೆಸ್ (ಐ) ಸರಕಾರ ತನ್ನ ಆರ್ಥಿಕ ಮತ್ತು ರಾಜಕೀಯ ಧೋರಣೆಗಳಿಂದಾಗಿ ಶೀಘ್ರಗತಿಯಲ್ಲಿ ದೇಶದ ವಿಘಟನೆಗೆ ದಾರಿ ಮಾಡಿಕೊಡುತ್ತಿದೆ. ತನ್ನನ್ನು ರಕ್ಷಿಸಿಕೊಳ್ಳಲು ಅದು ಮತ್ತೊಮ್ಮೆ ಜನತೆಯ ಮೇಲೆ ಅಧ್ಯಕ್ಷ ಮಾದರಿ ಸರಕಾರವನ್ನು ಹೇರಲು ಪ್ರಯತ್ನಿಸುತ್ತಿದೆ. ಇತ್ತೀಚಿನ ರಾಜ್ಯ ಸಭಾ ಚುನಾವಣೆಗಳಿಂದಾಗಿ ಸಂಸತ್ತಿನಲ್ಲಿ ಅದರ ಸದಸ್ಯ ಬಲ ಹೆಚ್ಚಿದೆ. ಆದ್ದರಿಂದ ಒಂದು ಸಂವಿಧಾನಿಕ ತಿದ್ದುಪಡಿ ಮೂಲಕ ಅಧ್ಯಕ್ಷ ಮಾದರಿ ಸರಕಾರವೊಂದನ್ನು ಆರಂಭಿಸಲು ಅದು ಪ್ರಯತ್ನಿಸಬಹುದು.

ನಮ್ಮ ಸಮ್ಮುಖ ತೀವ್ರ ಸ್ವರೂಪದಲ್ಲಿ ಕಂಡು ಬರುತ್ತಿರುವ ಸವಾಲುಗಳಿವು. ನಮ್ಮ ಕಾರ್ಮಿಕ ಆಂದೋಲನ ಈ ಸವಾಲುಗಳನ್ನು ಎದುರಿಸಲು ಜಾಗರೂಕವಾಗಿರಬೇಕು.

●

ಇಂದಿನ ಯಕ್ಷಗಾನ ಬಯಲಾಟ

ಪರದೇಶಿಯರಿಂದ ಬಿಡುಗಡೆ ಹೊಂದಿದ ಭಾರತ ಸ್ವತಂತ್ರ ದೇಶವಾಗಿ ಮಾರ್ಪಟ್ಟು ಮುಂದುವರಿಯುತ್ತಿರುವಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಮೀಸಲು ಎಂಬಂತಿರುವ ಯಕ್ಷಗಾನ ಕಲೆಯೇನಾಗಿದೆ ಎಂದು ಒಂದಿಷ್ಟು ಯೋಚಿಸುವ. ಈಚೆಗೆ ಹಲವು ಸುಧಾರಕ ಕಲಾವಿದರು (ಅಥವಾ ಮೇಳಗಳು) ತಮ್ಮ ಹಿಂದಿನ ಪರಂಪರೆಯ ಪುರಾಣ ಪ್ರಸಿದ್ಧವಾದ ರಾಮಾಯಣ, ಭಾರತ, ಭಾಗವತಾದಿಗಳಿಂದ ಆಯ್ದ ಕಥೆಗಳನ್ನು ಬಿಟ್ಟು ಕೆಲವು ತುಳು ಪಾಡ್ದನಗಳನ್ನೋ, ಅಥವ ಇತಿಹಾಸಕ್ಕೆ ಸಂಬಂಧಪಟ್ಟ ಕೆಲವು ಮಹಾಪುರುಷರ ಕಥೆಗಳನ್ನೋ ಆಯ್ದುಕೊಂಡು ತುಳು ಕನ್ನಡ ಅಥವಾ ಮಿಶ್ರ ಭಾಷೆಗಳಲ್ಲಿ ಆಡುವುದನ್ನು ನಾವು ಕಾಣುತ್ತಿದ್ದೇವೆ. ಜೊತೆಗೆ ಕೆಲವರು ಇವನ್ನು ಟೀಕಿಸುವುದನ್ನು ನಾವು ಕಾಣುತ್ತಿದ್ದೇವೆ. ಹಾಗೆ ಟೀಕಿಸುವವರ ವಾದ ಹೀಗಿದೆ. ನಮ್ಮ ಪುರಾಣ ಪ್ರಸಿದ್ಧರಾದ ರಾಮಕೃಷ್ಣಾದಿ ದೇವತೆಗಳನ್ನು ಬಿಟ್ಟು ಕೇವಲ ಕೋಟಿ ಚೆನ್ನಯ ದೇವು ಪುಂಜ ಮೊದಲಾದ ಐತಿಹಾಸಿಕ ವ್ಯಕ್ತಿಗಳನ್ನು ರಂಗದ ಮೇಲೆ ತರುವುದು ಯೋಗ್ಯವೇ ? ಇದು ಯಕ್ಷಗಾನಕ್ಕೆ ಅಪಚಾರವಲ್ಲವೇ ? ಹಾಗೆಯೇ ಯಕ್ಷಗಾನದ ಸಾಂಪ್ರದಾಯಿಕ ವೇಷಗಳನ್ನು ಬಿಟ್ಟು ನಾಟಕದ ವೇಷ ಧರಿಸಿ ರಂಗಕ್ಕೆ ಬರುವುದು ಸರಿಯೇ ? ಇನ್ನೊಂದು ರೀತಿಯ ಟೀಕೆಯೇನೆಂದರೆ ಇದು ಯಕ್ಷಗಾನ ಸಾಂಪ್ರದಾಯದ ಯಾವ ಅನುಭವವೂ ಇಲ್ಲದೇ ಕೇವಲ ಹೊಟ್ಟೆಯಪಾಡಿಗಾಗಿ ಬಣ್ಣ ಬಳಿದು ರಂಗಕ್ಕೆ ಬರುವ (ಯಕ್ಷಗಾನದ ಮಟ್ಟಿಗೆ) ಅವಿದ್ಯಾವಂತರ ತಂಡವೆಂದು ದೂರುವುದು. ಇಂಥ ಸ್ಥಿತಿಯಲ್ಲಿ ಸಾಮಾನ್ಯ ಜನತೆ ಇಂತಹ ಆಟಗಳನ್ನು ಪ್ರೋತ್ಸಾಹಿಸಬೇಕೇ ? ಅಥವಾ ಹಿಂದಣ ಆಟಗಳೇ ಬೇಕೇ ಎಂಬುದನ್ನು ತಿಳಿದುಕೊಳ್ಳುವುದು ಅಗತ್ಯವೂ ಆಗಿದೆ.

ಇಲ್ಲಿ ಚರ್ಚಿಸುವ ಮೊದಲು ನಾವು ಕಲೆಯನ್ನು ಯಾವ ದೃಷ್ಟಿಯಿಂದ ಕಾಣಬೇಕು ಎಂಬುದನ್ನು ತಿಳಿಯೋಣ. ಒಂದು ವಾದ ಹೀಗಿದೆ. ಕಲೆ ಕೇವಲ ಕಲೆಗಾಗಿ, ಶೃಂಗಾರ ಹಾಸ್ಯ ಮೊದಲಾದ ರಸಭರಿತ ದೃಶ್ಯಗಳಿಂದ ಜನ ಮನರಂಜನೆಗೈಯುವುದೇ ಕಲಾವಿದರ ಧ್ಯೇಯ. ಅಲ್ಲಿ ಶೀಲ-ಅಶ್ಲೀಲ ಬೇರೆಲ್ಲವೂ ಪ್ರೇಕ್ಷಕರ ಮನರಂಜನೆಗಾಗಿ ; ಈ ದೃಷ್ಟಿಯಿಂದಲೇ ಯಕ್ಷಗಾನ ರಂಗವು ವಿವಿಧ ಪರದೆಗಳಿಂದ ಬಣ್ಣದ ಎಲೆಕ್ಟ್ರಿಕ್ ದೀಪಗಳಿಂದ ಜನ ಮನ ಮೋಹಿಸಲಾರಂಭಿಸಿತು. ಅಲ್ಲಿ ಭಾಗವತರು ಹಿಂದೆ ಕುಳಿತು ಅವರ ಹಾಡಿನ ಧ್ವನಿ ಮಾತ್ರ ಮೈಕಿನ ಮುಖಾಂತರ ಪ್ರೇಕ್ಷಕರಿಗೆ ಕೇಳಿಸುವಂತಾಯ್ತು. ಚೆಂಡೆ ಮದ್ದಳೆಗಳು ತೆರೆಯ [illegible] ಎಲ್ಲಿ ಅಡಗಿ ಕುಳಿತವು. ರಂಗದಲ್ಲಿ ಮೆರೆವುದೆಲ್ಲವೂ ಬಣ್ಣದ ಮೇಳ. ಕಲೆಯ ಹೆಸರಲ್ಲಿ ಕಳ್ಳತನ ಸೂಳೆಗಾರಿಕೆಗಳು ಪ್ರೇಕ್ಷಕರಿಗೆ ಪ್ರದರ್ಶಿಸಲ್ಪಟ್ಟವು ; ಆದರ್ಶದ ಅಗತ್ಯವೇ ಇಲ್ಲದೆ ನಾನಾ ಭೂತ ಪ್ರೇತಗಳಿಗೆ ಆರಾಧನೀಯ ಕೋಲಗಳು ರಂಗ ಸ್ಥಳದಲ್ಲೇ ನಡೆಯ ತೊಡಗಿದವು. ಎಲ್ಲವೂ ಜನ ಮೆಚ್ಚುಗೆಗಾಗಿ. ಜನ ಮೆಚ್ಚುಗೆಯಾಯ್ತೆ ? ಒಂದು ರೀತಿಯಿಂದ ಹೌದು.

ಆಧುನಿಕ ಸಮಾಜದಲ್ಲಿ ನಾಟಕ ಸಿನೆಮಾಗಳಿಂದ ನವನವೀನ ಮೋಜಿನಾಟಗಳಿಂದ ಆಕರ್ಷಿಸಲ್ಪಟ್ಟ ಜನತೆ ಅದೂ ಅಲ್ಪ ಹೊತ್ತಿನಲ್ಲಿ ಸುಲಭ (ಟಿಕೇಟಿನ) ಬೆಲೆಗೆ ಆಧುನಿಕವಾದ ಸಕಲ ಸಲಕರಣೆಗಳಿಂದ ಕೂಡಿದ ಥಿಯೇಟರುಗಳಿಂದ ಪ್ರದರ್ಶಿಸಲ್ಪಡುವ ಭಾರೀ ಪ್ರದರ್ಶನಗಳಿಂದ ಆಕರ್ಷಿತವಾದ ಜನತೆ ಈ ಕೇವಲ ಮಡಲಿನ ಚಪ್ಪರದ, ನಾಲ್ಕಾರು ಪೆಟ್ರೊಮೆಕ್ಸ್ ದೀಪಗಳಿಂದ ಕೂಡಿದ ರಂಗ ಸ್ಥಳದಲ್ಲಿ, ಮಾವಿನಸೊಪ್ಪು ಕಟ್ಟಿಕೊಂಡು ಕುಣಿಯುವ ಕೋಡಂಗಿವೇಷ ನೋಡಲು ಯಾವ ರಸಿಕ ಜನತೆ ಮುಂದಾದಾರು? ಹಾಗೆಂದು ಮೇಳಗಳೇನು ಲಾಭ ಗಿಟ್ಟಿಸುತ್ತಿದ್ದವೇ ? ಒಂದು ಮೇಳದವರಿಗೆ ಮುನ್ನೂರ ಹದಿನೈದು ರೂಪಾಯಿ ಕೊಟ್ಟರೆ ಅಷ್ಟರಿಂದಲೇ ತೃಪ್ತಿಗೊಂಡು ಸಂಜೆಯಿಂದ ಬೆಳಗಿನ ವರೆಗೆ ರಂಗಸ್ಥಳವನ್ನು ಪುಡಿಗುಟ್ಟಿ ನಾಳೆ ಬೇರೊಂದೆಡೆಗೆ ಹೊರಟು ಹೋಗುವ ಕ್ರಮ ಈ ಬೆಲೆಯೇರಿಕೆಯ ಕಾಲದಲ್ಲಿ ಸಾಧ್ಯವೇ ? ಆ ದೆಸೆಯಿಂದಲೇ ಅಲ್ಲವೇ ಪರಕೀಯ ಸರಕಾರ ನಮ್ಮನ್ನಾಳುತ್ತಿರುವ ಕಾಲದಲ್ಲದರೂ ಹದಿನೈದು ರೂಪಾಯಿಗೆ ಆಡಬಹುದಾಗಿದ್ದ ಆಟ ಇಂದು ನಮ್ಮವರ ಕಾಲದಲ್ಲಿ ಮುನ್ನೂರು ರೂಪಾಯಿ ಪಡೆದರು ಸಾಧ್ಯವಾಗದಿರುವುದು. ಹಾಗಂತ ಅಂದು ಊರ ಜಮೀನುದಾರರೋ ಶ್ರೀಮಂತ ಗುತ್ತಿನವರೋ ಅಥವಾ ಜನ ಸಾಮಾನ್ಯರಾದರೋ ವಂತಿಗೆ ಮಾಡಿ ಆಟ ಆಡಿಸುತ್ತಿದ್ದರೆ, ಇಂದಿನ ಕಾಲದಲ್ಲಿ ಒಬ್ಬೊಬ್ಬರಿಗೆ ಅಷ್ಟು ಹಣ ಖರ್ಚು ಮಾಡಿ ಆಡಿಸಲು ಸಾಧ್ಯವೂ ಇಲ್ಲದಿರುವಾಗ ಯಕ್ಷಗಾನ ಆಟದ ವೇಷಧಾರಿಗಳಾಗಲಿ ಮೇಳಗಳನ್ನು ನಡೆಸುತ್ತಿದ್ದ ಅದರ ಯಜಮಾನರೇ ಆಗಲಿ-ಏನು ಮಾಡಬೇಕು ? ಇತ್ತ ಜನತೆಯಿಂದ ಸಾಧ್ಯವಿಲ್ಲ, ಅತ್ತ ಸರಕಾರದ ಸಹಕಾರವಿಲ್ಲ, ಈ ಸ್ಥಿತಿ ಬಂತು ಆಟದ ಮೇಳಗಳಿಗೆ, ಇನ್ನೇನು ಹಿಂದಿನಿಂದಲೂ ಸಾಂಪ್ರದಾಯಕವಾಗಿ ನಡೆದುಕೊಂಡು ಬಂದಿದ್ದ ಕಲೆ, ಅದರಲ್ಲೂ ನಾಗರಿಕತೆಯ ಸೋಂಕು ತಗಲಿದ ಇಂದಿನ ಜನ ಮೂಗು ಮುರಿಯುವ ಸ್ಥಿತಿಯಲ್ಲಿರುವಾಗ, ತನ್ನ ಉಳಿವಿಗೆ ಗತಿಯೇನು ಎಂದು ಯೋಚಿಸ ತೊಡಗಿತು.

ಇದೇ ವೇಳೆ ಎಲ್ಲೆಡೆಗಳಂತೆ ಇಲ್ಲಿಯೂ ಕೆಲವರು (ಹೆಸರಿಗೆ) ಸುಧಾರಕರೆಂಬ ವಿದ್ಯಾವಂತರು ರಂಗ ಪ್ರವೇಶಿಸಲಾರಂಭಿಸಿದರು. ಅವರಿಗೂ ಯಕ್ಷಗಾನದ ಕಟ್ಟು ನಿಟ್ಟಿನ ನಿತ್ಯಾಭಿನಯಗಳು ಗೊತ್ತಿಲ್ಲದಿದ್ದರೂ ಸ್ವತಹಾ ಅವರು ವಿದ್ಯಾವಂತರಾದುದರಿಂದ (ಯಕ್ಷಗಾನಕ್ಕೆ ಸಂಬಂಧ ಪಟ್ಟ ವಿದ್ಯೆ ಅಲ್ಲ-ಶಾಲೆಯ ಓದು ಬರಹ ಬಲ್ಲವರಾದುದರಿಂದ) ಅಂಥವರಿಗೆ ವಿದ್ಯಾವಂತ ಜನ ಸಮುದಾಯದಲ್ಲಿ ಬೆಲೆ ಬರತೊಡಗಿತು. ಹಾಗಾಗಿ ಅವರು ಮಾಡಿದ್ದೇ ಸರಿಯೆಂಬ ಭಾವನೆ ಮೂಡಿ ಬರುವಂತಾಯಿತು. ಹಾಗಾಗಿಯೇ ಅಂದಿನವರೆಗೆ ರಂಗದಲ್ಲಿ ರಾರಾಜಿಸುತ್ತಿದ್ದ ಬಣ್ಣದ ರಾವಣ ಮರೆಯಾಗಿ ಕಾಲಿ ತಲೆಯ ಬೆಪ್ಪ ರಾವಣ ಮೆರೆಯುವಂತಾಯಿತು. ಚರ್ಚೆಗೆ ಎಡೆಯೇ ಇಲ್ಲ ಕೇಳಿದರೆ ತನ್ನದು ನಾಟಕದ ವೇಷ ಎಂಬ ಉತ್ತರ ಸಿದ್ಧವಾಗಿಯೇ ಇತ್ತು. ನಾಟಕ ಸಿನಿಮಾ ಗಳಲ್ಲಿ ಕಂಡು ಮೆಚ್ಚಿದ ವೇಷಗಳೇ ಆಟದ ರಂಗದಲ್ಲೂ ಕಾಣಸಿಗುವಾಗ ಮತ್ತು ಅದನ್ನು ಹೆಚ್ಚಾಗಿ ಇಂದಿನ ವಿದ್ಯಾವಂತ ಜನರೇ ಮೆಚ್ಚುತ್ತಿರುವಾಗ ಸಾಮಾನ್ಯ ಜನತೆಯು ಸರಿಯೆಂದು ಸೈ ಗುಟ್ಟುತ್ತಿರುವುದರಲ್ಲಿ ಆಶ್ಚರ್ಯವೇನಿಲ್ಲ. ಹಾಗಾಗಿ ಈ ವರೆಗೂ ಅನೇಕ ದಶಮಾನಗಳ ಸತತ ಸಾಧನೆಯಿಂದ ರೂಢಿಸಿದ ಸಾಂಪ್ರದಾಯದ ವೇಷ ಹಿಂದೆ ಬೀಳುವಂತಾಯಿತು. ಅದಕ್ಕೆ ಕಾರಣವು ಇತ್ತು. ಎಷ್ಟೇ ಪಳಗಿದ ವೇಷದಾರಿಯಾದರೂ ಈಗಿನ ಜನತೆಯ ದೃಷ್ಟಿಯಿಂದ ಇಂಗ್ಲೀಷ್ ಭಾಷೆ ಅರಿಯದ ಅಜ್ಞಾನಿಯಾಗಿದ್ದ, ಸುಧಾರಕರು ಯಕ್ಷಗಾನದ ಬಗ್ಗೆ ಏನೂ ಅರಿಯದ ಮೂಢರಾಗಿದ್ದರೂ ಇಂಗ್ಲೀಷ್ ಬಲ್ಲ ಸುಜ್ಞಾನಿಗಳಾಗಿದ್ದರೂ. ಆ ದಿಸೆಯಿಂದಲೇ ಯಕ್ಷಗಾನದ ಆಟ ಯಕ್ಷಗಾನ ನಾಟಕವಾಯಿತು. ಕಲಾವಿದರು ತಬ್ಬಿಬ್ಬಾದರೂ ತಮ್ಮಲ್ಲಿರುವ ಕಲೆಯ ಉಳಿವಿಗಾಗಿ ಅಲ್ಲದಿದ್ದರೂ ತಮ್ಮ ಉಳಿವಿಗಾಗಿ ಹಾದಿ ಹುಡುಕ ತೊಡಗಿದರು. ದಿನದಿಂದ ದಿನಕ್ಕೆ ಊರಿಂದ ಊರಿಗೆ ಮೂಟೆ ಕಟ್ಟಿ ತಿರುಗಿ ನಿದ್ದೆಗೆಟ್ಟು ಕುಣಿದು ದಣಿದಿದ್ದ ವೇಷಧಾರಿ ವಿಶ್ರಾಂತಿಗಾಗಿ ಆಸೆಪಡುತ್ತಿದ್ದ. ಅಂಥ ಸ್ಥಿತಿಯಲ್ಲಿ ಭಾರತದ ಎಲ್ಲೆಡೆಯೂ ಬೀಸುತ್ತಿದ್ದ ಸುಧಾರಣೆಯ ಗಾಳಿ ನಮ್ಮ ಬಡ ಯಕ್ಷಗಾನಕ್ಕೂ ಬೀಸ ತೊಡಗಿತು ಎನ್ನಬಹುದು. ಹಿಂದೆ ಉಚ್ಚ ವರ್ಗದವರಿಗೆ ಮಾತ್ರ ಮೀಸಲು ಎಂದೆನಿಸುತ್ತಿದ್ದ ನಮ್ಮ ದೇವಸ್ಥಾನಗಳೂ ಉಚ್ಚ ನೀಚ ಬೇಧವಿಲ್ಲದೆ ಎಲ್ಲರಿಗೂ ತೆರೆಯಲ್ಪಟ್ಟಿತು ಎನ್ನುವಾಗ, ಆ ವರೆಗೆ ಗುಡಿಯಲ್ಲಿ ಮಡಿಯಾಗಿ ಕುಳಿತ್ತಿದ್ದ ದೇವರು ಇಲೆಕ್ಟ್ರಿಕ್ ದೀಪದ ಬೆಳಕಿನಲ್ಲಿ ಮತ್ತಷ್ಟು ಪ್ರಕಾಶಿಸುವಾಗ ನಮ್ಮಲ್ಲೂ ಸುಧಾರಣೆಗಳಾಗುತ್ತಿವೆ ಎಂದಲ್ಲವೇ ಅರ್ಥ ? ಇಂದು ಎಲ್ಲೆಡೆಯಲ್ಲೂ ನವೀನತೆ ತಲೆ ಹಾಕಿ ಮೆರೆಯುತ್ತಿರುವಾಗ ತನ್ನ ಹೊಟ್ಟೆಯ ಹಸಿವನ್ನು ಇಂಗಿಸಲಾರದ ಮೇಳದ ಬಡ ವೇಷಧಾರಿ ಹೊಸದನ್ನು ಹುಡುಕ ತೊಡಗಿದ.

ಜತೆಯಲ್ಲೇ ಆಟದ ಮೇಳಕ್ಕೆ ಹೊಸ ಪ್ರಸಂಗಗಳೂ ಹೊಸ ವೇಷಗಳೂ ಬರ ತೊಡಗಿದವು. ಆ ವರೆಗೂ ಕನ್ನಡಕ್ಕೆ ಮಾತ್ರ ಮೀಸಲಾಗಿದ್ದ ರಂಗ ಸ್ಥಳದಲ್ಲಿ ತುಳು ಬರತೊಡಗಿತು. ಜನತೆ ಆಶ್ಚರ್ಯಪಟ್ಟಿತು. ಆನಂದಪಟ್ಟಿತು. ಮಹಾತ್ಸಾಧನೆಯೊಂದು ಹೊಗಳಿತು. ರಾಮಲಕ್ಷ್ಮಣರು ಕುಣಿದ ರಂಗ ಸ್ಥಳದಲ್ಲಿ ಕೋಟಿ ಚೆನ್ನಯ್ಯರೂ ಕುಣಿಯ ತೊಡಗಿದರು. ಅಂತೂ ಇಂತೂ ಹೊಸ ಪ್ರಸಂಗಗಳಿಗೆ ದೊರೆತ ಪ್ರೋತ್ಸಾಹದಿಂದ ಮೇಳಗಳು ಧೈರ್ಯಗೊಂಡವು. ಇನ್ನೂ ಹಲವು ಪ್ರಸಂಗಗಳನ್ನು ತಂದರು, ಮಾತ್ರವಲ್ಲ ಆ ವರೆಗೆ ಬೆರಕೆಯಾಗಿ ರಂಗಕ್ಕೆ ಬಂದಿದ್ದ ತುಳು ಧೈರ್ಯಗೊಂಡು ಪೂರ್ತಿ ತುಳುವಾಗಿಯೇ ರಂಗದಲ್ಲಿ ಮೆರೆಯ ತೊಡಗಿತು.

ಭಾರತೀಯರ ಜೀವನದಲ್ಲಿ ಪರಮ ಪಾವನವಾಗಿ ಮೆರೆಯುತ್ತಿದ್ದ ದೇವ ದೇವತೆಗಳಿಗೆ ಮಾತ್ರವೇ ಮೀಸಲಾಗಿದ್ದ ಯಕ್ಷಗಾನ ರಂಗ ಕೇವಲ ಶತಮಾನಗಳ ಹಿಂದೆ ಅಳಿದ ವೀರರ ಕಥೆಯನ್ನು ಅಭಿನಯಿಸುವುದೇ ? ಎಂದು ಕೆರಳಿತು ಒಂದು ವಿಭಾಗದ ಜನ- ನಿಜವಾಗಿ ನೋಡಿದರೆ ಅಂಥವರು ಕೆರಳಿದರೆ ತಪ್ಪಲ್ಲ. ದೇವರುಗಳು ಮೆರೆಯುತ್ತಿದ್ದ ಸ್ಥಾನದಲ್ಲಿ ಮಾನವರು ಮೆರೆಯುವುದೇ ಎಂದು ಕೇಳಿದರೆ ಯಾರೇನೆನ್ನಬೇಕು ? ಆದರೂ ಕಾಲ ಗತಿ ಹಾಗಿದೆ. ಹಾಗೆ ಹೇಳುವವರು ಕೇಳಿಯೇ ಕೇಳುತ್ತಾರೆ. ಹಿಂದೆ ಗಾಂಧೀಜಿಯವರು ಹರಿಜನರಿಗೆ ದೇವಸ್ಥಾನ ಪ್ರವೇಶಕ್ಕೆಡೆ ಕೊಡಬೇಕು ಎನ್ನುವಾಗ ಅದನ್ನು ವಿರೋಧಿಸಿ ದೇವರಿಗೆ ಅವಮಾನ ಎಂದು ಬೊಬ್ಬಿಟ್ಟವರಿಲ್ಲವೇ ? ಹಾಗೆಯೇ ಅಂಥ ಸುಧಾರಣೆಗಳು ರಂಗದಲ್ಲೂ ನಡೆಯಿತು ಎನ್ನಬಹುದು. ಪರಿಸ್ಥಿತಿಗೆ ಸರಿಯಾಗಿ ಆಟಗಳು ಡೇರೆ ಅಥವಾ ಥಿಯೇಟರುಗಳಲ್ಲಿ ಸೇರಿಕೊಂಡು ಟಿಕೇಟ್ ನಾಟಕಕ್ಕೆ ಆರಂಭವಾಯಿತು. ಹಣ ಸಂಪಾದನೆಯೂ ಆಗ ತೊಡಗಿತು. ಜೊತೆಗೆ ಆವರೆಗೂ ನಿರಾಶರಾಗಿದ್ದ ಮೇಳಗಳ ನಾಯಕರು ಧೈರ್ಯಗೊಂಡು ಧನಗಳಿಕೆಗಾಗಿ ಎಂಬ ಒಂದೇ ಕಾರಣ ಕೊಟ್ಟು ಜನತೆಗೆ ಬೇಡಾದದನ್ನು ಹೊಸತೆಂಬ ಕಾರಣ ನೀಡಿ ರಂಗದಲ್ಲಿ ತುರುಕ ತೊಡಗಿದರು. ಆ ವರೆಗೂ ಸತ್ಯ, ಧರ್ಮ, ನ್ಯಾಯಗಳೆಂಬ ಮಾನವತೆಯ ಸದ್ಗುಣಾಂಶಗಳನ್ನೇ ಎತ್ತಿ ತೋರಿಸುತ್ತಿದ್ದ ರಂಗ ನೀಚ ಗುಣಗಳನ್ನು ಪ್ರೋತ್ಸಾಹಿಸುವ ಅಂಶಗಳೂ ಹೆಚ್ಚಿದುವು. ಹಿಂದಕ್ಕಾದರೋ ಎಂಥಹ ಸ್ಥಿತಿಯಲ್ಲೂ ಕೊನೆಯ ಜಯ ಸತ್ಯಕ್ಕೆ ಮಾತ್ರ ಎನ್ನುವ ಭಾವನೆ ಇಂದಿಗೆ ಕಡಿಮೆಯಾಯಿತು. ಭೂತ ಪ್ರೇತಗಳಿಗೆ ನೇಮ ಕೋಲಗಳೇ ರಂಗ ಸ್ಥಳದಲ್ಲಿ ಪ್ರಾಮುಖ್ಯತೆ ಪಡೆಯಿತು. ಜನತೆಯ ಅಜ್ಞಾನದ ದುರುಪಯೋಗವಾಗ ತೊಡಗಿತು, ಆ ವರೆಗೂ ಕಣ್ಣು ಬಾಯಿ ಬಿಟ್ಟು ನೋಡುತ್ತಿದ್ದ ಜನ ಇದು ತಪ್ಪು ಎನ್ನ ತೊಡಗಿತು ; ಬೊಂಬಾಯಿ ಮೊದಲಾದೆಡೆಗಳಲ್ಲಿ ದ. ಕನ್ನಡದ ಯಕ್ಷಗಾನದ ಪ್ರದರ್ಶನಕ್ಕೆ ಇದಿರಾಗಿ ಸತ್ಯಾಗ್ರಹಗಳೂ ಆದುವಂತೆ. ಆದುದರಿಂದಲೇ ಸಂಪಾದನೆಯ ದೃಷ್ಟಿಯಿಂದ ಏನು ಮಾಡಿದರೂ ಆಗುತ್ತದೆ ಎಂಬ ಕಲಾ ಸಂಘಗಳ ಭಾವನೆ ಬದಲಾಗಬೇಕು. ಜನತೆಯ ಬೇಕುಗಳನ್ನು ತಮ್ಮ ವ್ಯವಸಾಯದ ಅವಶ್ಯಕತೆಗಳನ್ನು ಸಚ್ಚಾರಿತ್ರ್ಯಕ್ಕೆ ಕೊರತೆ ಬಾರದಂತೆ ನೋಡಿ ಕೊಳ್ಳುವುದು ಇಂದಿನ ಸುಧಾರಕರೆಂದೆನಿಸಿರುವ ಯಕ್ಷಗಾನ ಸಂಘಗಳ ಕರ್ತವ್ಯವಾಗಿ ಬಹಳೆಂದು ಹಾರೈಸಬೇಕಾಗಿದೆ.

ಕೆ. ಶಂಕರ್, ಕುಂದಾಪುರ

ಭಾರತದಲ್ಲಿ ಮೇ ದಿನಾಚರಣೆಗಳು

1920ರ ಸುಮಾರಿನಲ್ಲಿ ಐಕ್ಯ ಕಾರ್ಮಿಕ ಚಳವಳಿ ರೂಪುಗೊಂಡಂದಿನಿಂದಲೂ ಮೇ ದಿನ ವನ್ನು ಭಾರತದಲ್ಲಿ ಆಚರಿಸಲಾಗುತ್ತಿದೆ.

ದೇಶದ ಹಲವಾರು ಭಾಗಗಳಲ್ಲಿ ಪ್ರಾರಂಭಗೊಂಡ ಕಾರ್ಮಿಕ ಚಳವಳಿಯ ಪ್ರತಿನಿಧಿಗಳು 1920ರ ಅಕ್ಟೋಬರ್ 31 ರಂದು ಬೊಂಬಾಯಿಯಲ್ಲಿ ಸಭೆ ಸೇರಿ ಅಖಿಲ ಭಾರತ ಮಟ್ಟದ ಸಂಘಟನೆಯನ್ನು ಕಟ್ಟಲು ತೀರ್ಮಾನಿಸಿದರು. ಆ ಪ್ರಕಾರವಾಗಿ ಸ್ಥಾಪನೆಗೊಂಡ ಆಲ್ ಇಂಡಿಯಾ ಟ್ರೇಡ್ ಯೂನಿಯನ್ ಕಾಂಗ್ರೆಸ್ (ಎ.ಐ.ಟಿ.ಯು.ಸಿ.) ನ ಏಳನೆಯ ಸಮ್ಮೇಳನ 1927 ರ ಏಪ್ರಿಲ್ ನಲ್ಲಿ ದೆಹಲಿಯಲ್ಲಿ ಸೇರಿದಾಗ "ಮೇ ದಿನ"ವನ್ನು ಆಚರಿಸಬೇಕೆಂದು ಕೆಳ ಘಟಕಗಳಿಗೆ ಆದೇಶ ನೀಡುವ ತೀರ್ಮಾನವನ್ನು ಕೈಗೊಂಡಿತು.

ಪ್ರಥಮ ಮೇ ದಿನಾಚರಣೆ

ಆದರೂ ಸಹ 1927 ರಲ್ಲೇ ಭಾರತದಲ್ಲಿ ಪ್ರಥಮವಾಗಿ ಮೇ ದಿನವನ್ನಾಚರಿಸಲಾಯಿತೆಂದು ಭಾವಿಸಬಾರದು. ಇದಕ್ಕೂ ಮೊದಲೇ ಅಂದರೆ 1923 ರಲ್ಲೇ "ಕಾನ್ಪುರ ಸಂಚು" ಮೊಕದ್ದಮೆಯ ಅಪಾದಿತರ ಪರ ವಿಚಾರಣೆಯಲ್ಲಿ ಭಾಗವಹಿಸಿದ್ದ ಸಿಂಗಾರವೇಲು ಸೆಟ್ಟಿಯಾರ್ ಎಂಬುವವರು ಮದ್ರಾಸಿನಲ್ಲಿನ ತಮ್ಮ ಮನೆಯಲ್ಲಿ ಕಾರ್ಮಿಕರನ್ನು ಆಮಂತ್ರಿಸಿ ಮೇ ದಿನವನ್ನು ಆಚರಿಸಿದರು, ಇದುವೇ ಭಾರತದಲ್ಲಿ ನಡೆದ ಪ್ರಥಮ ಮೇ ದಿನಾಚರಣೆಯಾಗಿದೆ.

ನಂತರ 1927ಕ್ಕೂ ಮೊದಲು 'ಮೇ ದಿನ'ವನ್ನು ಪಾಲ್ಗೊಂಡವರಲ್ಲಿ ಇಂಗ್ಲೆಂಡಿನಲ್ಲಿ ವಾಸಿಸುತ್ತಿದ್ದ ಭಾರತೀಯ ಕಾರ್ಮಿಕರು ಸೇರಿದ್ದಾರೆ. ಅವರು 1925 ರಲ್ಲಿ ಹೈಡ್ ಪಾರ್ಕ್‌ನಲ್ಲಿ ನಡೆದ ಮೇ ದಿನದ ಪ್ರದರ್ಶನದಲ್ಲಿ ಒಂದು ಮೆರವಣಿಗೆಯನ್ನು ನಡೆಸಿದರು.

1927 ರಲ್ಲಿ ಬೊಂಬಾಯಿಯಲ್ಲಿ ನಡೆದ ಮೇ ದಿನಾಚರಣೆಗೆ ಪೂರ್ವ ಸಿದ್ಧತೆ ನಡೆಸಿದವರು ಎನ್ ಎಮ್ ಜೋಶಿ, ಎಸ್ ಎಚ್ ಜಬ್ವಾಲಾ, ಎಸ್ ಎಸ್ ಮಿರಜ್‌ಕರ್, ಕೆ ಎನ್ ಜೋಗಳೇಕರ್ ಮುಂತಾದವರು ಸೇರಿದ್ದರು.

ಕಲ್ಕತ್ತಾದಲ್ಲಿ ಪ್ರಥಮವಾಗಿ ಮೇ ದಿನವನ್ನಾಚರಿಸಿದ್ದು 1927ರಲ್ಲಿ ಬೆಂಗಾಲ್ ಪ್ರಾವಿನ್ಸ್ ಟ್ರೇಡ್ ಯೂನಿಯನ್ ಕಾಂಗ್ರೆಸ್. ಅಂದು ನಗರದ ಪೋಲಿಸ್ ಕಮಿಶನರ್ ಕಾರ್ಮಿಕ ಮುಖಂಡರುಗಳಿಗೆದುರಾಗಿ ನಡೆಸಿದ ಆಕ್ರಮಣವನ್ನು ಮೀರಿ 'ಮೇ ದಿನ' ಆಚರಿಸಲ್ಪಟ್ಟಿತು.

ತೀವ್ರಗೊಂಡ ಹೋರಾಟಗಳು

1928-34ರ ಕಾಲ ಘಟ್ಟದಲ್ಲಿ ದೇಶದ ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ ನಡೆದ ಕಾರ್ಮಿಕರ ಮುಷ್ಕರದ ಜೊತೆ ಜೊತೆಯಲ್ಲೇ ಮೇ ದಿನಾಚರಣೆಗಳೂ ನಡೆದವು. ಆ ಕಾಲ ಘಟ್ಟದಲ್ಲಿ ದೇಶಾದ್ಯಂತ ಕಾರ್ಮಿಕರ ಹೋರಾಟಗಳು ಉಗ್ರಗೊಂಡವು. ಇದರಿಂದ ಭೀತರಾದ ಬ್ರಿಟಿಷ್ ಆಡಳಿತಗಾರರು ಹೋರಾಟಗಳನ್ನು ದಮನ ಮಾಡಲು ಎಲ್ಲಾ ರೀತಿಯ ದಬ್ಬಾಳಿಕೆಯನ್ನು ಇಷ್ಟಾನುಸಾರ ಪ್ರಯೋಗಿಸಿದರು.

1930 ರ ಏಪ್ರಿಲ್ 19 ರಂದು ಅದರ ಹಿಂದಿನ ದಿನ ನಡೆದ ಚಿತ್ತಗಾಂಗ್ ಶಸ್ತ್ರ ಸಂಗ್ರಹದ ಮೇಲೆ ನಡೆದ ಆಕ್ರಮಣದ ಕಾರಣವಾಗಿ ಬ್ರಿಟಿಷ್ ಸರ್ಕಾರ ಬಂಗಾಳದಲ್ಲಿ ತುರ್ತು ಪರಿಸ್ಥಿತಿ ಹೇರಿತು. ಏಪ್ರಿಲ್ 30 ರಂದು ಕಲ್ಕತ್ತಾದ ಕುದುರೆಗಾಡಿ ಕಾರ್ಮಿಕರು ಸಾರ್ವತ್ರಿಕ ಮುಷ್ಕರ ನಡೆಸಿದಾಗ ಬೀದಿಗಳಲ್ಲಿ ಸಶಸ್ತ್ರ ಪೋಲಿಸರೊಡನೆ ಘರ್ಷಣೆ ನಡೆಯಿತು. ಹೋರಾಟದ ಮುಖಂಡರನ್ನು ಬಂಧಿಸಿ, ಜೈಲಿಗಟ್ಟಲಾಯಿತು. ಮರುದಿನ ಅಂದರೆ ಮೇ ದಿನದಂದು ಏನಾದರೂ ನಡೆಯಬಹುದೆಂದು ನಿರೀಕ್ಷಿಸಿ ಪೋಲಿಸರು ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡರು.

ಆದರೂ ಕೂಡ ಕಲ್ಕತ್ತಾದ ಅನೇಕ ಭಾಗಗಳಲ್ಲಿ ಕಾರ್ಮಿಕರು ಮೇ ದಿನ ಆಚರಿಸಿದರು. ಮರು ವರ್ಷವೂ ಕೂಡ ಹೆಚ್ಚು ಕಡಿಮೆ ಇಂಥದೇ ಪರಿಸ್ಥಿತಿಯಲ್ಲಿ ಮೇ ದಿನಾಚರಣೆ ನಡೆಯಿತು.

ಕಮ್ಯುನಿಸ್ಟ್ ಪಕ್ಷದ ಕರೆ

ಮೇ ದಿನವನ್ನು ವೈಭವ ಪೂರ್ಣವಾಗಿ ಆಚರಿಸಬೇಕೆಂದು ಭಾರತ ಕಮ್ಯುನಿಸ್ಟ್ ಪಕ್ಷದ ಕಲ್ಕತ್ತಾ ಸಮಿತಿ 1932 ರಲ್ಲಿ ಕಾರ್ಮಿಕರಿಗೂ ಇನ್ನಿತರ ಶ್ರಮ ಜೀವಿ ವರ್ಗಕ್ಕೂ ವಿನಂತಿಸಿಕೊಂಡು ಒಂದು ಕಾನೂನು ಬಾಹಿರವಾದ ಕರೆ ನೀಡಿತು. ಈ ಕರೆಯಂತೆ ಬೃಹತ್ ಪ್ರಮಾಣದಲ್ಲಿ ಕಾರ್ಮಿಕರು ಒಂದುಗೂಡಿ ಮೇ ದಿನವನ್ನು ಆಚರಿಸಿದರು.

1933 ರಲ್ಲಿ ಬೊಂಬಾಯಿಯಲ್ಲೂ, ಕಲ್ಕತ್ತಾದಲ್ಲೂ ನಾಗಪುರ, ಮದ್ರಾಸುಗಳಲ್ಲೂ ಮೇ ದಿನವನ್ನು ಆಚರಿಸಲಾಯಿತು. ನಾಗಪುರದಲ್ಲಿ ನಡೆದ ಸಭೆಯಲ್ಲಿ 2000 ಮಂದಿ ಭಾಗವಹಿಸಿದ್ದರು. ಎಂ. ಎನ್ ರಾಯ್ ಮತ್ತು ಮೀರತ್ ಮೊಕದ್ದಮೆಯ ಕೈದಿಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯಿಸುವ ಒಂದು ನಿರ್ಣಯವನ್ನು ಕೈಗೊಳ್ಳಲಾಯಿತು. ಮದ್ರಾಸಿನಲ್ಲಿ ನಡೆದ ಸಭೆಗೆ ಸಿಂಗಾರವೇಲು ಸೆಟ್ಟಿಯಾರ್ ಅಧ್ಯಕ್ಷತೆ ವಹಿಸಿದ್ದರು.

1934 ರಲ್ಲಿ ಬ್ರಿಟಿಷ್ ಸರ್ಕಾರ ಕಮ್ಯುನಿಸ್ಟ್ ಪಕ್ಷವನ್ನು ಪ್ರತಿಬಂಧಿಸಿತು ಆ ಸಂದರ್ಭದಲ್ಲಿ ಪಾರ್ಟಿಯ, ಕಾರ್ಮಿಕರ ಸಂಘದ ಮುಖಂಡರುಗಳು ಬಂಧಿಸಲ್ಪಟ್ಟಿದ್ದರು ಅಥವ ಗಡೀಪಾರು ಮಾಡಲ್ಪಟ್ಟಿದ್ದರು ಆದರೂ ಕೂಡ ಕಾರ್ಮಿಕರು ತುಂಬಾ ಪ್ರಾಮುಖ್ಯತೆ ನೀಡಿ ಮೇ ದಿನವನ್ನು ಆಚರಿಸಿದರು.

ಮೇ 1 ರಜಾ ದಿನವಾಗಲಿ

1934 ಮೇ 1 ರಂದು ದೆಹಲಿಯ ಬಟ್ಟೆ ಗಿರಣಿ ಕಾರ್ಮಿಕರು ಮುಷ್ಕರ ನಡೆಸಿ ಮೇ 1 ನ್ನು ರಜಾ ದಿನವೆಂದು ಘೋಷಿಸಬೇಕೆಂದು ಒತ್ತಾಯಿಸಿದರು. ಮೇ ದಿನದಂದು ಕೆಲಸ ಮಾಡುವುದಿಲ್ಲ ಎಂಬ ಘೋಷಣೆಯೊಂದಿಗೆ ಅಂದು ಸಂಜೆ ಮೆರವಣಿಗೆ, ಬಹಿರಂಗ ಸಭೆಗಳನ್ನು ನಡೆಸಿದರು. 1934 ರಲ್ಲಿ ಕರಾಚಿಯಲ್ಲೂ ಅಮೃತಸರದಲ್ಲೂ ಮೇ ದಿನ ನಡೆಯಿತು ಅಮೃತಸರದ ಜಲಿಯನ್ ವಾಲಾ ಬಾಗ್‌ನಲ್ಲಿ ನಡೆದ ಪ್ರದರ್ಶನದಲ್ಲಿ ಅಪಾರ ಸಂಖ್ಯೆಯ ಕಾರ್ಮಿಕರು ಪಾಲ್ಗೊಂಡು ಕೆಂಪು ಬಾವುಟವನ್ನು ಹಾರಿಸಿದರು.

1937 ರ ನಂತರ ಬೊಂಬಾಯಿ ಕಲ್ಕತ್ತಾ ಮತ್ತಿತರ ಕಡೆ ನಡೆದ ಮೇ ದಿನಾಚರಣೆಯಲ್ಲಿ ಕಾರ್ಮಿಕರೂ ಅವರ ಸಂಘಟನೆಗಳಷ್ಟೇ ಅಲ್ಲದೆ ರಾಷ್ಟ್ರೀಯ ಕಾಂಗ್ರೆಸಿನ ಒಂದು ವಿಭಾಗವು ಭಾಗವಹಿಸಲಾರಂಭಿಸಿತು.

1940 ರಲ್ಲಿ ಸುಭಾಷ್ ಚಂದ್ರ ಬೋಸ್‌ರವರ ಅಧ್ಯಕ್ಷತೆಯಲ್ಲಿ ಕಲ್ಕತ್ತಾದ ಶ್ರದ್ಧಾನಂದ ಪಾರ್ಕ್‌ನಲ್ಲಿ ಒಂದು ಮೇ ದಿನದ ಸಭೆ ನಡೆಯಿತು ಈ ಸಭೆಯಲ್ಲಿ ಕಾರ್ಮಿಕರ ಬೇಡಿಕೆಗಳಷ್ಟೇ ಅಲ್ಲದೆ ರೈತರ, ವಿದ್ಯಾರ್ಥಿಗಳ ಬೇಡಿಕೆಗಳನ್ನೊಳಗೊಂಡ ನಿರ್ಣಯವನ್ನು ಅಂಗೀಕರಿಸಲಾಯಿತು ಸ್ವಾತಂತ್ರ್ಯಕ್ಕಾಗಿ ದೇಶಾದ್ಯಂತ ಚಳವಳಿಯನ್ನು ಉಗ್ರಗೊಳಿಸಬೇಕೆಂದು ಸಭೆಯು ಕರೆ ನೀಡಿತು.

1943 ರಲ್ಲಿ ನಾಗಪುರದಲ್ಲಿ ನಡೆದ ಎ. ಐ. ಟಿ. ಯು. ಸಿ. ಯ 10 ನೇ ಸಮ್ಮೇಳನ ದೊಂದಿಗೆ ಮೇ ದಿನವನ್ನು ಆಚರಿಸಲಾಯಿತು.

ಫ್ಯಾಸಿಸಂಗೆದುರಾಗಿ ಚಾರಿತ್ರಿಕ ಹೋರಾಟ ನಡೆಸಿದ ಸೋವಿಯತ್ ಯೂನಿಯನ್ನಿನ ಕಾರ್ಮಿಕರಿಗೂ, ಕೆಂಪು ಸೇನೆಗೂ ಶುಭಾಶಯ ಸಲ್ಲಿಸುವ ತೀರ್ಮಾನವನ್ನು ಈ ಸಭೆ ಕೈಗೊಂಡಿತು ಜಪಾನೀಯರ ಆಕ್ರಮಣಕ್ಕೆದುರಾಗಿ ಧೀರ ಹೋರಾಟ ನಡೆಸಿದ ಚೀನೀ ಜನತೆಗೆ ಸಹ ಸಭೆಯಲ್ಲಿ ಶುಭ ಹಾರೈಸಲಾಯಿತು. ಮೇ ದಿನವನ್ನು ರಜಾ ದಿನವೆಂದು ಘೋಷಿಸಬೇಕೆಂದು ಒತ್ತಾಯಿಸುವ ನಿರ್ಣಯವನ್ನು ಸ್ವೀಕರಿಸಿತು.

ಸ್ವಾತಂತ್ರ್ಯ ನಂತರ ಕಾಂಗ್ರೆಸ್ ಆಡಳಿತಗಾರರು ಕಾರ್ಮಿಕ ವರ್ಗಕ್ಕೆದುರಾಗಿ ದಮನ ಯಂತ್ರಗಳನ್ನು ಬೇಕಾಬಿಟ್ಟಿಯಾಗಿ ಹರಿಯ ಬಿಟ್ಟರು. ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಅದರ ಸಾಮೂಹಿಕ ಸಂಘಟನೆಗಳನ್ನು ಕಾಂಗ್ರೆಸ್ ಸರ್ಕಾರ ನಿಷೇಧಿಸಿತು. ಪಕ್ಷದ ಮುಖಂಡರುಗಳ ಬಂಧನವಾಯಿತು, ಅನೇಕರು ಭೂಗತರಾಗಬೇಕಾಯಿತು ಇಂಥ ಸಂದರ್ಭದಲ್ಲೂ ಕೂಡ ಕಾರ್ಮಿಕರು ಮೇ ದಿನ ಆಚರಿಸುವುದನ್ನು ನಿಲ್ಲಿಸಲಿಲ್ಲ. ಇಂಥ ಸಂದರ್ಭದಲ್ಲಿ ಕಲ್ಕತ್ತಾದಲ್ಲಿ ನಡೆದ 30 ಸಾವಿರ ಕಾರ್ಮಿಕರು ಕೂಡಿದ ಮೇ ದಿನಾಚರಣೆಯ ಸಭೆಯಲ್ಲಿ ಕಾಂಗ್ರೆಸ್ ಸರಕಾರದ ದಮನ ಕಾರ್ಯಕ್ರಮಗಳನ್ನು ಖಂಡಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಮೇ ದಿನದಂದು ರಜಾ ಕೇಳುವ ಕಾರ್ಮಿಕರು ಬೇರೊಂದು ದಿನ ಕೂಲಿಯಿಲ್ಲದೆ ಕೆಲಸ ಮಾಡಬೇಕೆಂಬ ಸರ್ಕಾರದ ಸುತ್ತೋಲೆಯನ್ನು ರದ್ದುಗೊಳಿಸಬೇಕೆಂದು ಸಭೆ ಒತ್ತಾಯಿಸಿತು.

ಇ. ಎಂ. ಎಸ್. ಮಂತ್ರಿ ಮಂಡಲ

1951 ರಲ್ಲಿ ಪಾರ್ಟಿಯ ಮೇಲಿನ ನಿಶೇಧ ರದ್ದಾದನಂತರ ಮತ್ತೂ ವ್ಯಾಪಕವಾಗಿ ಮೇದಿನವನ್ನು ಆಚರಿಸಲಾಯಿತು. ಈಗ ಮೇ ದಿನವನ್ನು ಎಲ್ಲೆಡೆಯಲ್ಲೂ ವೈಭವಪೂರ್ಣವಾಗಿ ಅತ್ಯುತ್ಸಾಹದಿಂದ ಆಚರಿಸಲಾಗುತ್ತಿದೆ. ಭಾರತದಲ್ಲೇ ಮೊಟ್ಟ ಮೊದಲಬಾರಿಗೆ ಮೇ ದಿನವನ್ನು ಸಂಬಳದೊಂದಿಗಿನ ರಜಾ ದಿನವೆಂದು ಘೋಷಿಸಿದ್ದು 1957 ರಲ್ಲಿ ಕೇರಳದಲ್ಲಿ ಅಧಿಕಾರಕ್ಕೆ ಬಂದ ಇ. ಎಂ. ಎಸ್ ನಂಬೂದಿರಿಪಾದ್ ನೇತೃತ್ವದ ಕಮ್ಯೂನಿಸ್ಟ್ ಮಂತ್ರಿ ಮಂಡಲ ಎಂಬುದು ಗಮನಿಸತಕ್ಕ ಅಂಶ.

(ಆಧಾರ)

—ಉದಯ

ಮೇ ದಿನದಂದು

1890
ಚರಿತ್ರೆಯ ಪುಸ್ತಕ ತಿರುವಿದಾಗ
ರಕ್ತದಿ ಬರೆದ ಸಾಲುಗಳ ಕಂಡೆ
ತಲೆಬಾಗಿದ
ಬೆನ್ನುಬಾಗಿದ
ಅನಾಯಕ ಶಕ್ತಿಯೊಂದು
ಜಗತ್ತೇ ನಿಬ್ಬೆರಗಾಗುವಂತೆ
ಸೆಟೆದು ಘರ್ಜಿಸಿ
'ಅಂತರರಾಷ್ಟ್ರೀಯ' ರಚಿಸಿದನ್ನೋದಿದೆ.
ಅದೋ ! ಕೇಳಿಸುತ್ತಿದೆ ! !
ಬಾನಂಚಿನಿಂದ
ನೆರೆನೆರೆದು ಮುನ್ನಡೆಯುತ್ತಿರುವ
ಮಾನವತೆಯ ಪತಾಕೆಯ
ಹಾರಾಟವೊಂದಿಗೆ ಮಿಡಿಯುತ್ತಿರುವ
ತುಡಿಯುತ್ತಿರುವ
ಯಂತ್ರ ಚಾಲಕರ
ಒಕ್ಕೊರಳಿನ ಧ್ವನಿ
" ವಿಶ್ವ ಕಾರ್ಮಿಕರೇ ಒಂದಾಗಿ "!
ದೌಡಾಯಿಸಿದೆ
ಕಲ್ಪನೆಯ ಮಹಲುಗಳಿಂದಿಳಿದು
ನನ್ನ ಇರುವನ್ನು ಗುರುತಿಸಿ
ಜನ ಸಾಗರದಲಿ ಒಂದಾಗಿ
ಹೊಸ ಚರಿತ್ರೆಯ
ಬರಹಗಾರರೊಂದಿಗೆ
'ವಿಶ್ವಶಾಂತಿ'ಯ ಪತಾಕೆಯ ಹಿಡಿದು
ಮೇ ದಿನಕೆ ಜಯವಾಗಲೆಂದು

— ಕುಮಾರ್ ಕುಂದಾಪುರ.

ಆಹಾರದಲ್ಲಿ ಸ್ವಾವಲಂಬನೆ ?

— ಆರ್. ಚಂದ್ರ

1983-84ರಲ್ಲಿ ನಮ್ಮ ದೇಶದ ಆಹಾರ ಉತ್ಪಾದನೆಯು ಸುಮಾರು 150 ಮಿ. ಟನ್‌ಗಳಷ್ಟಾಗಿದ್ದು ಒಂದು ಹೊಸ ದಾಖಲೆ ಆಗಿದೆ ಎಂದೂ, ಆಹಾರದಲ್ಲಿ ಸ್ವಾವಲಂಬನೆಗೆ ಇದೊಂದು ದಿಟ್ಟ ಹೆಜ್ಜೆ ಎಂದೂ ಇಂದಿರಾ ಕಾಂಗ್ರೆಸ್ ಪಕ್ಷದ ಹಾಗೂ ಸರಕಾರದ ವಕ್ತಾರರು ಬಿರುಸಿನ ಪ್ರಚಾರ ಮಾಡುತ್ತಿದ್ದಾರೆ. ಅದರ ಸತ್ಯಾಂಶವೇನು ?

ಮೊತ್ತ ಮೊದಲು, ಸರಕಾರದ ಅಂಕೆ ಸಂಖ್ಯೆಗಳನ್ನೇ ನಂಬುವುದು ಕಷ್ಟ ! 1983-84 ರ ಆಹಾರ ಉತ್ಪಾದನೆ ಒಮ್ಮೆ 143 ಮಿ. ಟನ್‌ಗಳೆಂದೂ, ಮತ್ತೊಮ್ಮೆ 146ಮಿ. ಟನ್‌ಗಳೆಂದೂ ಅಂದಾಜು ಮಾಡಲಾಗಿತ್ತು. ಈಗ ಏಪ್ರಿಲ್ 19 ರಂದು ಕೇಂದ್ರ ಕೃಷಿ ಮಂತ್ರಿ ರಾವ್ ಬೀರೇಂದ್ರ ಸಿಂಗ್ ಲೋಕ ಸಭೆಗೆ ನೀಡಿದ ಹೇಳಿಕೆಯಲ್ಲಿ ಈ ವರ್ಷದ ಆಹಾರ ಉತ್ಪಾದನೆ 150 ಮಿ. ಟನ್‌ಗಳೆಂದು ಘೋಷಿಸಿದ್ದಾರೆ. ಲೋಕ ಸಭಾ ಚುನಾವಣೆ ಸಮೀಪಿಸುತ್ತಿದ್ದಂತೆ ಆಹಾರ ಉತ್ಪಾದನೆಯು ಅಂದಾಜು ಹೆಚ್ಚುತ್ತಿದೆಯೇ ?

ಎರಡನೆಯದಾಗಿ, ಈ ವರ್ಷದ ಆಹಾರ ಉತ್ಪಾದನೆಯನ್ನು ಗಣನೆಗೆ ತೆಗೆದುಕೊಂಡು ನಾವು ಭಾರೀ ಸಾಧಿಸಿದ್ದೇವೆ ಎಂದು ಹೊಗಳಿ ಕೊಳ್ಳುವುದು ಸರಿಯಾಗಲಾರದು. ಈ ವರ್ಷದ ಸಾಧನೆಯನ್ನು ಹಿಂದಿನ ವರ್ಷಗಳ ಸಾಧನೆಯೊಂದಿಗೆ ಹೋಲಿಸಿ ನೋಡಬೇಕು. ಮುಂದಿನ ವರ್ಷಗಳ ಸಾಧನೆಯೊಂದಿಗೆ ಹೋಲಿಸಿ ನೋಡಬೇಕು. ಜೊತೆಗೇ, ಒಟ್ಟು ಉತ್ಪಾದನೆಯಲ್ಲಿ ಜನರ ದಿನ ಬಳಕೆಗೆ ಒದಗುವುದೆಷ್ಟು ಎಂದು ಗಮನಿಸಿರಬೇಕು. ಆಗ ನಮ್ಮ ಆಹಾರ ಉತ್ಪಾದನೆಯ ಸಾಮರ್ಥ್ಯದ ನಿಜ ಸಂಗತಿ ತಿಳಿಯುವುದು. ಈ ದೃಷ್ಟಿಯಿಂದ, ಕೆಳಗಿನ ಅಂಕಿ ಅಂಶಗಳನ್ನು ಪರಿಶೀಲಿಸೋಣ.

ಕೆಳಗಿನ ಅಂಕಿ ಅಂಶಗಳಿಂದ ಆಹಾರ ಉತ್ಪಾದನೆಯಲ್ಲಿನ ಹಾಗೂ ಬಳಕೆಯ ಸ್ಥಗಿತ ಸ್ಥಿತಿಗಳನ್ನು ಗಮನಿಸಬಹುದು.

ಆಹಾರ ಉತ್ಪಾದನೆಯಲ್ಲಿ ಸ್ಥಗಿತ ಸ್ಥಿತಿ

ಅರವತ್ತರ ದಶಕದ ಅಂತ್ಯದಲ್ಲಿ ಬಹು ಪ್ರಚಾರದಿಂದ ಪ್ರಾರಂಭಗೊಂಡ 'ಹಸಿರು ಕ್ರಾಂತಿ' ಕಾರ್ಯಕ್ರಮದಿಂದ 1969-70ರಲ್ಲಿ ಆಹಾರ ಉತ್ಪಾದನೆಯು 100 ಮಿ. ಟನ್ ಸಮೀಪಿಸಿ, 1970-71ರಲ್ಲಿ 108.4 ಮಿ. ಟನ್‌ಗಳಿಗೇರಿತು. ಮುಂದಿನ 12 ವರ್ಷಗಳಲ್ಲಿ 1971-72 ರಿಂದ 1982-83ರವರೆಗೆ, ಆಹಾರ ಉತ್ಪಾದನೆಯೂ ಅನೇಕ ಏರಿಳಿತಗಳಿಗೊಳಗಾಗಿತ್ತು. 1972-73 ಮತ್ತು 1974-75ರಲ್ಲಿ ಆಹಾರ ಉತ್ಪಾದನೆಯೂ ಇಳಿಮುಖವಾಗಿದ್ದು ಅನುಕ್ರಮವಾಗಿ 97 ಮಿ. ಟನ್ ಮತ್ತು 99.8 ಮಿ. ಟನ್‌ಗಳಷ್ಟಾಗಿದ್ದು ಹೆಚ್ಚು ಕಮ್ಮಿ 1969-70 ರ ಉತ್ಪಾದನಾ ಮಟ್ಟದಷ್ಟೇ ಹಿಂದುಳಿದಿತ್ತು. 1979-80ರ ಉತ್ಪಾದನೆಯು 109.7 ಮಿ. ಟನ್ ಆಗಿದ್ದು, 9 ವರ್ಷಗಳ ಹಿಂದಿನ ವರ್ಷದ 1970-71ರ ಉತ್ಪಾದನೆಯ ಮಟ್ಟಕ್ಕೇ ಸ್ಥಗಿತವಾಗಿತ್ತು. 1975-76, 1978-97 ಮತ್ತು 1981-82ರಲ್ಲಿ ಆಹಾರ ಉತ್ಪಾದನೆಯು 120.8 ಮಿ. ಟನ್, 131.9 ಮಿ. ಟನ್ ಮತ್ತು 133.3 ಮಿ. ಟನ್‌ಗಳ ಹೊಸ ದಾಖಲೆಗಳನ್ನು ಸ್ಥಾಪಿಸಿದ್ದರೂ, ಮಧ್ಯಂತರದ ವರ್ಷಗಳಲ್ಲಿ ಪುನಃ ಆಹಾರ ಉತ್ಪಾದನೆಯು ಇಳಿಮುಖವಾಗಿತ್ತು. ಈ ವರ್ಷದ 1983-84ರ ಆಹಾರ ಉತ್ಪಾದನೆಯು 149.8 ಮಿ. ಟನ್ ಆಗಿರುವುದೆಂಬ ಸರಕಾರದ ಲೆಕ್ಕವನ್ನು ನಂಬಿದರೂ, ಈ ಹೊಸ ದಾಖಲೆಯನ್ನೂ ಹಿಂದಿನ 1982-83 ವರ್ಷದ 128.4 ಮಿ. ಟನ್ ಇಳಿಮುಖ ಉತ್ಪಾದನೆಯ ಹಿನ್ನೆಲೆಯಲ್ಲಿ ಪರಿಶೀಲಿಸಬೇಕಾಗಿದೆ. ಆಹಾರ ಉತ್ಪಾದನೆಯ ಈ ಏರಿಳಿತಗಳು ಮುಖ್ಯವಾಗಿ ಮಳೆ ಗಾಳಿಯನ್ನೇ ಹೊಂದಿರುವುವು. ಒಳ್ಳೆಯ ಮಳೆ ಆದರೆ, ಒಳ್ಳೆಯ ಬೆಳೆ ; ನೆರೆ ಬರಗಾಲ ಬಂದರೆ ಬೆಳೆಯಲ್ಲಿ ಇಳಿಮುಖ. ನಮ್ಮ ಕೃಷಿ ಉತ್ಪಾದನೆಯು ಇನ್ನೂ ನಿಸರ್ಗದ ಕೃಪಾ ಕಟಾಕ್ಷದಲ್ಲಿಯೇ ಇದೆ.

ಆಹಾರ ಉತ್ಪಾದನೆಯ ಅಭಿವೃದ್ಧಿಯನ್ನು ಜನ ಸಂಖ್ಯೆಯ ಬೆಳವಣಿಗೆಗೆ ಹೋಲಿಸಿ ನೋಡಿದರೆ, ನಾವು ಎಷ್ಟು ಹಿಂದುಳಿದಿದ್ದೇವೆ ಎಂದು ಇನ್ನೂ ಸ್ಪಷ್ಟವಾಗುವುದು. 1971 ರಲ್ಲಿ ನಮ್ಮ ದೇಶದ ಜನ ಸಂಖ್ಯೆಯು 551 ಮಿಲಿಯವಾಗಿದ್ದು, ಮುಂದೆ 12 ವರ್ಷಗಳಲ್ಲಿ 1983 ರಲ್ಲಿ 722 ಮಿಲಿಯಕ್ಕೇರಿತು. ಅಂದರೆ, ಈ ಅವಧಿಯಲ್ಲಿ ಜನಸಂಖ್ಯೆಯು ಶೇ 31 ಕ್ಕಿಂತಲೂ ಹೆಚ್ಚಾಯಿತು. ಆದರೆ, 1970-71 ರಿಂದ 1982-83 ರವರೆಗಿನ 13 ವರ್ಷಗಳ ಅವಧಿಯಲ್ಲಿ ಆಹಾರ ಉತ್ಪಾದನೆಯ ವಾರ್ಷಿಕ ಸರಾಸರಿ ಕೇವಲ 116 ಮಿ. ಟನ್‌ಗಳಷ್ಟಾಗಿತ್ತು. 1983-84 ರ ಗರಿಷ್ಠ ಉತ್ಪಾದನೆಯನ್ನೂ ಗಣನೆಗೆ ತೆಗೆದುಕೊಂಡರೆ ಕಳೆದ 14 ವರ್ಷಗಳ ಅವಧಿಯಲ್ಲಿ ಆಹಾರ ಉತ್ಪಾದನೆಯ ವಾರ್ಷಿಕ ಸರಾಸರಿ ಕೇವಲ 118 ಮಿ. ಟನ್‌ಗಳಷ್ಟಾಗಿತ್ತು. "ಹಸಿರು ಕ್ರಾಂತಿ"ಯ ಪ್ರಾರಂಭ ವರ್ಷ 1969-70 ರ 100 ಮಿ. ಟನ್ ಆಹಾರ ಉತ್ಪಾದನೆಗೆ ಹೋಲಿಸಿದರೆ, ಅಂದಿನಿಂದ ಇಂದಿನವರೆಗಿನ ಅಭಿವೃದ್ಧಿಯು ಕುಂಠಗಾಮಿಯಾಗಿದ್ದು ಸ್ಥಗಿತಸ್ಥಿತಿಯನ್ನೇ ಪ್ರತಿಬಿಂಬಿಸುತ್ತದೆ.

1980-81 ರಿಂದ 1983-84 ರ ನಾಲ್ಕು ವರ್ಷಗಳ ಇಂದಿರಾ ಆಳ್ವಿಕೆಯ ಅವಧಿಯಲ್ಲಿ ವಾರ್ಷಿಕ ಸರಾಸರಿ ಆಹಾರ ಉತ್ಪಾದನೆ 135.3 ಮಿ. ಟನ್‌ಗಳಷ್ಟಾಗಿದ್ದರೆ, 1974-75 ರಿಂದ 1983-84 ರ ಕಳೆದ ಒಂದು ದಶಕದ ಅವಧಿಯಲ್ಲಿ ಆಹಾರ ಉತ್ಪಾದನೆಯ ವಾರ್ಷಿಕ ಸರಾಸರಿ ಕೇವಲ 124 ಮಿ. ಟನ್‌ಗಳಷ್ಟಾಗಿರುವುದನ್ನು ಗಮನಿಸಬೇಕು. ಜಾಗತಿಕ ಅಭಿವೃದ್ಧಿ ವರದಿ ಒಂದರಂತೆ, ಭಾರತದ ಆಹಾರ ಉತ್ಪಾದನಾ ದರವು, 1960ರ ಮತ್ತು 1970 ರ ದಶಕಗಳಲ್ಲಿ ಶೇ. 1.9 ರಲ್ಲಿಯೇ ಸ್ಥಗಿತವಾಗಿದ್ದು, 1980 ರ ದಶಕದ ನಾಲ್ಕು ವರ್ಷಗಳಲ್ಲಿ ಶೇ 2.1 ರಷ್ಟೇ ಆಗಿದ್ದು ಜನಸಂಖ್ಯೆ ಹೆಚ್ಚಳದ ದರದಷ್ಟೇ ಅಥವಾ ಅದಕ್ಕಿಂತಲೂ ಕಡಿಮೆ ಮಟ್ಟದಲ್ಲಿರುವುದು.

ಆಹಾರ ಬಳಕೆಯಲ್ಲಿ ಇಳಿಮುಖ

ಆಹಾರ ಉತ್ಪಾದನೆಯ ಸ್ಥಗಿತ ಸ್ಥಿತಿಯೊಂದಿಗೇ ಜನ ಕೋಟಿಯ ಆಹಾರ ಬಳಕೆಯ ಪ್ರಮಾಣವೂ ಇಳಿಮುಖವಾಗುತ್ತಿದ್ದು ಜನರ ಜೀವನ ಮಟ್ಟವು ಹದಗೆಡುತ್ತಿದೆ. ಒಟ್ಟು ಆಹಾರ ಉತ್ಪಾದನೆ ಮತ್ತು ಅಗತ್ಯದ ಆಮದು ಇವುಗಳಿಂದ ಬೀಜಕ್ಕೆ, ಕಾವುದಾಸ್ತಾನಕ್ಕೆ, ಅಲ್ಪಸ್ವಲ್ಪ ರಫ್ತಿಗೆ ಮೀಸಲಾಗಿರಿಸಿದ್ದ ಪ್ರಮಾಣವನ್ನು ಕಳೆದರೆ ಜನರ ದಿನ ಬಳಕೆಗೆ ದೊರಕುವ ಆಹಾರ ಪ್ರಮಾಣ ತಿಳಿಯುವುದು.

ಮೇಲಿನ ಕೋಷ್ಟಕವನ್ನು ಪರಿಶೀಲಿಸಿದಾಗ 1970-71 ರಿಂದ 1982-83 ರ ಅವಧಿಯ 13 ವರ್ಷಗಳಲ್ಲಿ ಜನರ ದಿನ ಬಳಕೆಗೆ ದೊರೆಯುವ ಆಹಾರ ವಸ್ತುಗಳ ವಾರ್ಷಿಕ ಪ್ರಮಾಣ 102.4 ಮಿ. ಟನ್‌ಗಳಷ್ಟೇ ಆಗಿತ್ತು. ಇಂದಿರಾ ಆಳ್ವಿಕೆಯ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಜನರ ದಿನ ಬಳಕೆಗೆ ದೊರಕುವ ಆಹಾರ ವಸ್ತುಗಳ ವಾರ್ಷಿಕ ಪ್ರಮಾಣವು 114.7 ಮಿ. ಟನ್‌ಗಳಷ್ಟಾಗಿದ್ದು, ಕಳೆದ ಹತ್ತು ವರ್ಷಗಳಲ್ಲಿ ಆಹಾರ ಬಳಕೆಯ ವಾರ್ಷಿಕ ಪ್ರಮಾಣವು 105.2 ಮಿ. ಟನ್‌ಗಳಷ್ಟಾಗಿತ್ತು. ಜನ ಸಂಖ್ಯೆಗನುಗುಣವಾಗಿ ಪ್ರತಿ ಒಬ್ಬನ ತಲಾ ವಾರ್ಷಿಕ ಆಹಾರ ಬಳಕೆಯ ಪ್ರಮಾಣ 1970-71 ರಲ್ಲಿ 0.1711 ಟನ್ ಇದ್ದುದು ಮುಂದೆ ಇಳಿಮುಖವಾಗುತ್ತಾ 1974-75 ರಲ್ಲಿ 0.1479 ಟನ್‌ಗೆ ಇಳಿದು, 1977-78 ರಲ್ಲಿ ಮಾತ್ರ 0.1800 ಟನ್‌ಗೆ ಏರಿ ಪುನಃ ಇಳಿಮುಖವಾಗುತ್ತಾ 1982-83 ರಷ್ಟರಲ್ಲಿ 0.1575 ಟನ್‌ಗೆ ಕುಸಿದಿರುವುದನ್ನು ಗಮನಿಸಬೇಕು. ಪ್ರತಿ ಒಬ್ಬನ ದೈನಿಕ ಆಹಾರ ಬಳಕೆಯ ಪ್ರಮಾಣವು 1960 ರ ದಶಕದಲ್ಲಿ 442 ಗ್ರಾಂಗಳಷ್ಟಾಗಿದ್ದು, 1980-84 ರ ಅವಧಿಯಲ್ಲಿ 437 ಗ್ರಾಂಗಳಿಗಿಳಿಯಿತು. ಅಂದರೆ, ಸ್ವಾತಂತ್ರ್ಯ ದೊರೆತ 34 ವರ್ಷಗಳಾದರೂ ದೇಶದ ಪ್ರಜೆಗಳಿಗೆ ದಿನಕ್ಕೆ ಸರಾಸರಿ ಅರ್ಧ ಕಿಲೋ ಆಹಾರ ಧಾನ್ಯಗಳೂ ಬಳಕೆಗೆ ಸಿಗುವುದಿಲ್ಲ ಎಂದಂತಾಯಿತು.

ಇಷ್ಟರವರೆಗಿನ ನಮ್ಮ ಸಮೀಕ್ಷೆಯು, ಆಹಾರ ಧಾನ್ಯಗಳ ವಾರ್ಷಿಕ ಸರಾಸರಿ ಉತ್ಪಾದನೆ ಹಾಗೂ ಬಳಕೆಗೆ, ದೈನಂದಿನದ ಸರಾಸರಿ ಬಳಕೆಗೆ ಸೀಮಿತವಾಗಿತ್ತು. ಈ ಸರಾಸರಿ ಬಳಕೆಯು ಅತ್ಯಂತ ಶ್ರೀಮಂತನ ಬಳಕೆ ಮತ್ತು ಅತ್ಯಂತ ಬಡವನ ಬಳಕೆಯನ್ನೊಳಗೊಂಡಿದೆ. ದೇಶದ 73 ಕೋಟಿ ಜನರಲ್ಲಿ ಅರ್ಧಾಂಶಕ್ಕಿಂತಲೂ ಹೆಚ್ಚು ಸಂಖ್ಯೆ ಬಡತನ ರೇಖೆಯ ಕೆಳಮಟ್ಟದಲ್ಲಿ ಜೀವಿಸುತ್ತಿರುವುದರಿಂದ ಬಡವರ, ದರಿದ್ರರ, ದಟ್ಟ ದರಿದ್ರರ ದೈನಿಕ ಹಾಗೂ ವಾರ್ಷಿಕ ಆಹಾರ ಬಳಕೆಯ ಪ್ರಮಾಣವು ವಾಸ್ತವವಾಗಿ ಅತ್ಯಂತ ಕಡಿಮೆಯಾಗಿರುವುದು. ಬೆಲೆ ಏರಿಕೆ ಹಾಗೂ ಅಭಾವ ಪರಿಸ್ಥಿತಿಯಿಂದ, ನಿರುದ್ಯೋಗದಿಂದ ಬಡ ಜನರ, ಶ್ರಮಿಕ ವರ್ಗದ ಗ್ರಾಹಕ ಶಕ್ತಿಯು ಕ್ಷಯಿಸುತ್ತಿರುವುದರಿಂದ ಅವರು ಬಳಸುವ ಆಹಾರ ಧಾನ್ಯಗಳ ಪ್ರಮಾಣವು ಇನ್ನಷ್ಟು ಕಡಿಮೆ

ಆಹಾರ ಉತ್ಪಾದನೆ, ಬಳಕೆ

ವರ್ಷ	ಆಹಾರ ಉತ್ಪಾದನೆ (ಮಿ. ಟನ್)	ಜನಸಂಖ್ಯೆ (ಮಿಲಿಯ)	ಆಹಾರ ಬಳಕೆ (ಮಿ.ಟನ್)	ಪ್ರತಿ ಒಬ್ಬನ ತಲಾ ವಾರ್ಷಿಕ ಆಹಾರ ಬಳಕೆ (ಟನ್)
1970-71	108.4	551	94.3	0.1711
1971-72	105.2	564	96.2	0.1705
1972-73	97.0	576	88.7	0.1540
1973-74	104.7	590	90.6	0.1536
1974-75	99.8	603	89.2	0.1479
1975-76	120.8	617	93.8	0.1520
1976-77	111.2	632	98.9	0.1565
1977-78	126.4	646	116.2	0.1800
1978-79	131.9	660	114.8	0 1740
1979-80	109.7	675	103.6	0 1535
1980-81	129.6	690	114.6	0.1661
1981-82	133.3	706	117.0	0.1757
1982-83	128.4	722	113.4	0.1575
1983-84	149.8	—	—	—

ಪೀಪಲ್ಸ್ ಡೆಮಾಕ್ರಸಿ : 25-3-84,
ಸಾಧಾರ : ಕೇಂದ್ರ ವಾರ್ಷಿಕ ಆರ್ಥಿಕ ಸಮೀಕ್ಷೆ, ಮನೋಹರ ವಾರ್ಷಿಕ : 1978 ಮತ್ತು 1982
ವಿಸೂ : ಆಹಾರ ಬಳಕೆಯ ಪ್ರಮಾಣವು ಒಟ್ಟು ಉತ್ಪಾದನೆ ಮತ್ತು ಆಮದಿನಿಂದ ಒಟ್ಟು ಬೀಜ, ದಾಸ್ತಾನು ಮತ್ತು ರಫ್ತು ಪ್ರಮಾಣವನ್ನು ಕಳೆದು ಉಳಿದಿರುವುದು.

(ಮುಂದಿನ ಪುಟ ನೋಡಿ)

ಆಹಾರದಲ್ಲಿ ಸ್ವಾವಲಂಬನೆ ?

(ಹಿಂದಿನ ಪುಟದಿಂದ)

ಆಗಿರುವುದು. ಆರ್ಥಿಕವಾಗಿ ಹಿಂದೆ ಇರುವ ಈ ಜನರಿಗೆ ಸರಕಾರ ನ್ಯಾಯ ಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡುವ ಆಹಾರ ಧಾನ್ಯಗಳು ಸಮಯಕ್ಕೆ ಸರಿಯಾಗಿ ದೊರೆಯುವುದೂ ಇಲ್ಲ. ಗುಣ ಮಟ್ಟದಲ್ಲಿಯೂ ಕೀಳಾ ಕಳಪೆ ಯಾಗಿರುವುವು. ದಾಸ್ತಾನು, ಸಾಗಣೆ, ಸಾಗಣಿಕೆಯಲ್ಲಿ ಆಹಾರ ಧಾನ್ಯಗಳು ಅದರ ಪ್ರಮಾಣದಲ್ಲಿ ಹಾನಿ ಹೊಂದುತ್ತವೆ. ವ್ಯಾಪಾರಿಗಳು ಅತಿ ಲಾಭಕ್ಕಾಗಿ ಆಹಾರ ಧಾನ್ಯಗಳನ್ನು ಗಣನೀಯವಾಗಿ ಕಲಬೆರಿಕೆಗೊಳಿಸುತ್ತಿರುವರು.

ಮೂಲಭೂತ ಬದಲಾವಣೆಯಾಗಲಿಲ್ಲ

ಭಾರತದ ನೆಲ ಜಲ ಮೊದಲಾದ ನೈಸರ್ಗಿಕ ಸಂಪತ್ತು ಚೀನಾ ದೇಶಕ್ಕಿಂತಲೂ ಶ್ರೀಮಂತವಾಗಿದ್ದರೂ, ಇಲ್ಲಿಯ ಆಹಾರ ಉತ್ಪಾದನೆಯು ಈ ವರ್ಷದ ಹೊಸ ದಾಖಲೆಯನ್ನು ಬಿಟ್ಟು ಇನ್ನೂ 133 ಮಿ. ಟನ್ ಗಡಿಯಲ್ಲಿಯೇ ಇದ್ದು, ಚೀನಾದ ವಾರ್ಷಿಕ ಉತ್ಪಾದನೆ 300 ಮಿ. ಟನ್ ಗಡಿಯನ್ನೂ ದಾಟಿದೆ ! ಸ್ವಾತಂತ್ರ್ಯ ನಂತರದ 'ಹೆಚ್ಚು ಆಹಾರ ಬೆಳೆಸಿರಿ' ಕಾರ್ಯಕ್ರಮವಾಗಲೀ, ನಂತರ 1960 ರ ದಶಕದ ಉತ್ತರಾರ್ಧದಲ್ಲಿ ಪ್ರಾರಂಭಗೊಂಡ 'ಹಸಿರು ಕ್ರಾಂತಿ' ಕಾರ್ಯಕ್ರಮದಿಂದಾಗಲೀ ಆಹಾರ ಉತ್ಪಾದನೆಯಲ್ಲಿ ಸ್ವಾವಲಂಬನೆ ಹಾಗೂ ಆಹಾರ ಬೆಳೆಯ ಹೆಚ್ಚಳ ಸಾಧಿಸಲಾಗದೆ ಸ್ಥಗಿತ ಸ್ಥಿತಿಗೆ ಕಾರಣಗಳೇನು ? ಜಾಗತಿಕ ಬ್ಯಾಂಕು, ಭಾರತ ಸರಕಾರ, ಪ್ರಸಿದ್ಧ ಅರ್ಥಶಾಸ್ತ್ರಜ್ಞರು, ಯೋಜನಾಗಾರರೂ, ಕೆಲವು ಎಡ ಪಂಥೀಯ ಮೇಧಾವಿಗಳು ಬಹಳ ಭರವಸೆ ಹೊಂದಿದ 'ಹಸಿರು ಕ್ರಾಂತಿ' ಮುಂದೆ ಬರೀ ಭ್ರಾಂತಿಯಾಗಲು ಕಾರಣಗಳೇನು ?

ಈ ವಿಷಯದಲ್ಲಿ ಭಾರತದ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷವು ಮೊದಲಿನಿಂದಲೂ ಸ್ಪಷ್ಟ ನಿಲುವು ತಳೆದಿತ್ತು. ಅದರ ಅಭಿಪ್ರಾಯದಂತೆ ನಮ್ಮ ದೇಶದ ಕೃಷಿ ಕ್ಷೇತ್ರದಲ್ಲಿ ಬಂಡವಾಳಶಾಹಿ ಪೂರ್ವದ ಪಾಳೆಯಗಾರಿ, ಅರೆ ಪಾಳೆಯಗಾರಿ ಉತ್ಪಾದನಾ ಸಂಬಂಧವಿರುವುದರಿಂದ ಉತ್ಪಾದನಾ ಶಕ್ತಿಗಳಿಗೆ ತೀವ್ರ ಅಡಚಣೆಗಳುಂಟಾಗಿವೆ. ಇಂತಹ ವ್ಯವಸ್ಥೆಯಲ್ಲಿ ಅಲ್ಲಿ-ಇಲ್ಲಿ ಬಂಡವಾಳಶಾಹಿ ಪದ್ಧತಿ ಯಂತ್ರ ಉತ್ಪಾದನಾ ಕ್ರಮವನ್ನು ಜಾರಿಗೆ ತರುವುದರಿಂದ ನಿರೀಕ್ಷಿತ ಪ್ರತಿಫಲ ಸಿಗಲಾರದು. ದೇಶದ ಪ್ರಭುತ್ವದ ವಿಷಯದಲ್ಲಿ ಬಂಡವಾಳಶಾಹಿಗಳೂ ಭೂಮಾಲಿಕರೂ ಪರಸ್ಪರ ರಾಜಿ ಮಾಡಿಕೊಂಡಿದ್ದಾರೆ. ಆದುದರಿಂದ, ಯೂರೋಪಿನಲ್ಲಿ ನಡೆದಂತೆ ನಮ್ಮ ದೇಶದ ಬಂಡವಾಳ ಶಾಹಿಗಳು ಭೂಮಾಲಿಕ ಪದ್ಧತಿಯನ್ನು - ಬಂಡವಾಳಶಾಹಿ ಪೂರ್ವದ ಕೃಷಿ ಉತ್ಪಾದನಾ ಸಂಬಂಧವನ್ನು ಆಮೂಲಾಗ್ರವಾಗಿ ಕಿತ್ತೊಗೆಯಲು ತಯಾರಿಲ್ಲ. ಆದುದರಿಂದಲೇ ಯೂರೋಪಿನಲ್ಲಿ ಬಂಡವಾಳಶಾಹಿ ಒಂದು ಕಾಲದಲ್ಲಿ ಕೃಷಿ ಕೈಗಾರಿಕೆಗಳ ಉತ್ಪಾದನೆಯಲ್ಲಿ ಉನ್ನತ ಮಟ್ಟಕ್ಕೇರಿದಂತೆ, ಭಾರತದಲ್ಲಿ ಹಾಗಾಗಲು ಅಸಾಧ್ಯ. ಈ ನಿಲುವನ್ನು ಪ್ರಾರಂಭದಲ್ಲಿ ಹೆಚ್ಚಿನವರು ಟೀಕೆ ಮಾಡುತ್ತಿದ್ದರು. ಆದರೆ, ಇಂದು ಇದರ ಸತ್ಯದ ಅರಿವು ಆಗುತ್ತಿದೆ. ಭಾರತದಲ್ಲಿ ಭೂಮಾಲಿಕ ಪದ್ಧತಿ ಪಾಳೆಯಗಾರಿ ಹಾಗೂ ಅರೆ ಪಾಳೆಯಗಾರಿ ಕೃಷಿ ಉತ್ಪಾದನಾ ಸಂಬಂಧವನ್ನು ಕಿತ್ತೊಗೆಯುವ ಕ್ರಾಂತಿಕಾರಿ ಕಾರ್ಯದ ಹೊಣೆಗಾರಿಕೆ ಇಂದು ಶ್ರಮಿಕ ವರ್ಗದ ನೇತೃತ್ವದ ಜನತಾ ಪ್ರಜಾಪ್ರಭುತ್ವ ರಂಗದ್ದಾಗಿರುತ್ತದೆ.

ಭೂಸುಧಾರಣೆಯನ್ನು ಯಶಸ್ವಿಯಾಗಿ ಜ್ಯಾರಿಗೊಳಿಸದಿದ್ದುದು ದೀರ್ಘಕಾಲದ ಕಾಂಗ್ರೆಸ್ ಆಳ್ವಿಕೆಯ ಅತಿ ದೊಡ್ಡ ಸೋಲು. ಭೂಮಿತಿ ಕಾಯಿದೆ ಸಿದ್ಧವಾದ ಪ್ರಾರಂಭದಲ್ಲಿ 1950 ರ ದಶಕದಲ್ಲಿ ಹೆಚ್ಚುವರಿ ವ್ಯವಸಾಯ ಭೂಮಿ 630 ಲಕ್ಷ ಎಕರೆಗಳೆಂದು ಅಂದಾಜು ಮಾಡಲಾಗಿತ್ತು. ಆದರೆ ಯೋಜನಾ ಆಯೋಗದ ಇತ್ತೀಚಿನ ಅಧ್ಯಯನದಂತೆ, ಅಂದಿನಿಂದ ಇಂದಿನವರೆಗೆ ದೇಶಾದ್ಯಂತ ಕೇವಲ 38.05 ಲಕ್ಷ ಎಕರೆಗಳಷ್ಟು ಭೂಮಿಯನ್ನು ಭೂಮಿತಿ ಕಾಯಿದೆಯಂತೆ ಹೆಚ್ಚುವರಿ ಭೂಮಿ ಎಂದು ಗುರುತಿಸಲಾಗಿದ್ದು, 25 ಲಕ್ಷ ಎಕರೆಗಳನ್ನು ರಾಜ್ಯ ಸರಕಾರಗಳು ಸ್ವಾಧೀನ ಪಡಿಸಿಕೊಂಡು, ಕೇವಲ 17.48 ಲಕ್ಷ ಎಕರೆಗಳನ್ನು ಭೂಹೀನ ಕೃಷಿ ಕಾರ್ಮಿಕರಿಗೆ ಹಂಚಲಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ, ಭೂಹೀನ ಕೃಷಿ ಕಾರ್ಮಿಕರ ಸಂಖ್ಯೆಯು ಹೆಚ್ಚುತ್ತಿದೆ. ಚಿಕ್ಕ ಹಿಡುವಳಿಯ ಬಡ ರೈತರೂ ಮಧ್ಯಮ ರೈತರೂ ಲಾಭದಾಯಕವಾಗಿ ವ್ಯವಸಾಯ ಮಾಡಲಾರದೆ ನಿರ್ಗತಿಕರಾಗುತ್ತಿದ್ದು ಅಸಂಖ್ಯಾತ ಕೃಷಿ ಕಾರ್ಮಿಕರ ಸಾಲಿಗೆ ಸೇರುತ್ತಿದ್ದಾರೆ. ಇವರಿಗೆ ಶ್ರೀಮಂತ ರೈತರಿಗೆ ಮತ್ತು ಭೂಮಾಲಿಕರಿಗೆ ದೊರಕುವಂತೆ ವ್ಯವಸಾಯಕ್ಕೆ ಅಗತ್ಯವಿರುವ ಬೀಜ, ಗೊಬ್ಬರ, ನೀರು, ಕ್ರಿಮಿನಾಶಕ, ಸಾಲ, ಯಂತ್ರೋಪಕರಣಗಳು, ತಾಂತ್ರಿಕ ಸಲಹೆ, ಮಾರುಕಟ್ಟೆ ಇತ್ಯಾದಿ ಸೌಕರ್ಯಗಳು ಸಿಗುತ್ತಿಲ್ಲ. ಅವರು ಕಷ್ಟ ಪಟ್ಟು ಬೆಳೆಸಿದ ಬೆಳೆಗೆ ಯೋಗ್ಯ ಬೆಲೆಯೂ ಸಿಗುತ್ತಿಲ್ಲ. ವ್ಯವಸಾಯಕ್ಕೆ ಬೇಕಾಗುವ ಪ್ರತಿ ಒಂದು ಸಾಮಗ್ರಿಯ ಬೆಲೆಯು ಗಗನಕ್ಕೇರುತ್ತಿದೆ.

1971 ರ ಕೃಷಿ ಗಣನೆಯಂತೆ ದೇಶದಲ್ಲಿ ಒಟ್ಟು 70 ಮಿಲಿಯ ವ್ಯವಸಾಯ ಹಿಡುವಳಿಗಳಿದ್ದು 405 ಮಿಲಿಯ ಎಕರೆಗಳಷ್ಟು ವ್ಯವಸಾಯ ಭೂಮಿಯನ್ನು ಹೊಂದಿವೆ. ಆದರೆ, ಅವುಗಳಲ್ಲಿ ಶೇ. 85 ರಷ್ಟು ಹಿಡುವಳಿಗಳು 10 ಎಕರೆಗಳಿಗಿಂತಲೂ ಚಿಕ್ಕವುಗಳಾಗಿದ್ದು ಒಟ್ಟು ವ್ಯವಸಾಯ ಭೂಮಿಯ ಶೇ. 40 ರಷ್ಟು ಮಾತ್ರ ಹೊಂದಿವೆ. ಉಳಿದ ಶೇ. 15 ರಷ್ಟು ದೊಡ್ಡ ಭೂಹಿಡುವಳಿಗಳು ಶೇ. 60 ರಷ್ಟು ವ್ಯವಸಾಯ ಭೂಮಿಯನ್ನು ಹೊಂದಿವೆ.

ಎಲ್ಲಿಯವರೆಗೆ ಗ್ರಾಮೀಣ ಪ್ರದೇಶಗಳಲ್ಲಿ ವ್ಯವಸಾಯ ಭೂಮಿಯ, ಸಂಪತ್ತಿನ, ಆದಾಯದ, ಅನುಭೋಗದ ಅಸಮಾನತೆಗಳು ಇರುವುವೋ ಅಲ್ಲಿಯವರೆಗೆ ಕೃಷಿ ಉತ್ಪನ್ನದಲ್ಲಿ ಸ್ಥಗಿತಸ್ಥಿತಿ ನಿವಾರಣೆಯಾಗಲಾರದು. ಎಲ್ಲಿಯವರೆಗೆ ಶೇ. 40 ರಷ್ಟು ವ್ಯವಸಾಯ ಭೂಮಿಯಿರುವ ಶೇ. 85 ರಷ್ಟು ಸಣ್ಣ ಹಿಡುವಳಿಗಳಲ್ಲಿ ಲಾಭದಾಯಕವಾದ ವ್ಯವಸಾಯ ನಡೆಯುವುದಿಲ್ಲವೋ ಅಲ್ಲಿಯತನಕ ಕೃಷಿ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧ್ಯವಿಲ್ಲ. ಎಲ್ಲಿಯವರೆಗೆ ಕೃಷಿ ಉತ್ಪಾದನೆಯಲ್ಲಿ ಜನ ಸಂಖ್ಯೆ ಏರಿಕೆಯ ದರಕ್ಕಿಂತಲೂ ಶೀಘ್ರಗತಿಯಲ್ಲಿ ಅಭಿವೃದ್ಧಿಯನ್ನು ಸಾಧಿಸಲಾಗುವುದಿಲ್ಲವೋ ಅಲ್ಲಿಯವರೆಗೆ ಕೈಗಾರಿಕಾ ಅಭಿವೃದ್ಧಿಯೂ ಆಗಲಾರದು, ಬಡತನ ಮತ್ತು ನಿರುದ್ಯೋಗವು ನಿವಾರಣೆಯಾಗದು.

ಆದುದರಿಂದ, 1983-84 ರಲ್ಲಿ ಆಹಾರ ಉತ್ಪಾದನೆಯಲ್ಲಿ ಸಂಭವಿಸಿದ ಹೊಸ ದಾಖಲೆಯ ಕುರಿತು ಹೆಚ್ಚು ಭರವಸೆ ಇಟ್ಟುಕೊಳ್ಳುವಂತಿಲ್ಲ. ಬದಲು ಮೂಲಭೂತವಾದ ಭೂಸಂಬಂಧದ ಬದಲಾವಣೆಗೆ ಮತ್ತು ಕೃಷಿ ಕಾರ್ಮಿಕರ, ಬಡ ರೈತರ, ಮಧ್ಯಮ ರೈತರ ಲಾಭದಾಯಕವಾದ ವ್ಯವಸಾಯಕ್ಕೆ ಹೋರಾಟ ನಡೆಸಬೇಕು.

*

ಅರಳಲಾಗದ ಹೂಗಳು

ನೆರೆದ ಗೆಳತಿಯರು
ಚುಡಾಯಿಸಿ ಗುಲ್ಲೆಬ್ಬಿಸಿ
ಕೀಟಲೆ ಮಾತುಗಳ
ಕಿವಿಯಲ್ಲಿ ಪಿಸುಗುಡುವಾಗ
ನಾಚಿ ನೀರಾಗಿ ಕೆನ್ನೆ ಕೆಂಪೇರಿಸಿಕೊಂಡು
ಪತಿ ನಿಷ್ಠಳಾಗಿ ಸಪ್ತ ಪದಿ ತುಳಿವ
ಮುಗ್ಧೆಗೆ ಗೊತ್ತೆ,

ಮುಂದೊಮ್ಮೆ ಇದೇ
ಮೃದು ಮೋಹಕ ಕೈಗಳು

ಚಾವಟಿ ಹಿಡಿದು ನಿರ್ದಯವಾಗಿ ಬೀಸುತ್ತ
ರೋಮಾಂಚಕ್ಕೆಳಸುವ ಮೈ ಮೇಲೆ
ರಕ್ತ ಕಕ್ಕುವ ಬಾಸುಂಡೆಗಳೆಬ್ಬಿಸಬಹುದೆಂದು

ಗಂಧ ಅಕ್ಷತೆ ವೀಳೆಯ ಹಿಡಿದು
ಮದುವೆ ಮನೆಯುದ್ದಕ್ಕೆ
ಬೀಗುತ್ತಿರುವ ಮುದಿಯತ್ತೆ
ಕ್ಯೂ ನಿಂತರೂ ಸಿಗದ
ಡಬ್ಬಗಟ್ಟಲೆ ಸೀಮೆ ಎಣ್ಣೆ ಸುರಿದು
ಬೆಂಕಿ ಕಡ್ಡಿ ಗೀರ ಬಹುದೆಂದು

ಮೈಸೂರು ಪೇಟ ತಲೆ ತುಂಬ
ಜಬರ್ದಸ್ತಾಗಿ ಕೂರಿಸಿ
ತಾನೇ ಹಾಕಿಸುತ್ತಿರುವ ಧಿಮಾಕಿನಿಂದ
ಊಟಕ್ಕೆ ಕೂತವರೆದುರು
ವರಸೆ ವರಸೆಯಾಗಿ ಹಲ್ಕಿರಿಂಜುವ ಮಾವ
ಬಾಯಿಗೆ ಬಟ್ಟೆ ತುರುಕಿ
ಕೋಮಲ ಕೊರಳಿನ ಸುತ್ತ
ಹಗ್ಗದ ಕುಣಿಕೆ ಬಿಗಿಯಬಹುದೆಂದು

ಇಂಥವೆಷ್ಟೋ ಅರಳಲಾಗದ ಹೂಗಳಿಗೆ
ಚಿಗುರಲಾಗದ ಕನಸುಗಳಿಗೆ
ಕೊನೆಯಿಲ್ಲದ ನಿಟ್ಟುಸಿರುಗಳಿಗೆ
ಬೆಲೆಯೇ ಇಲ್ಲವೆ ?

ವರದಕ್ಷಿಣೆಯ ವಿಷಚಕ್ರದಿಂದ
ತರುಣಿಯರಿಗೆ ಮುಕ್ತಿಯೇ ಇಲ್ಲವೆ ?

— ನಾಗಸಾಯಕನ ಕೋಟೆ. ಡಿ. ಎನ್ ಸ್ವಾಮಿ

ಶಾಂತಿ ಮತ್ತು ಬದುಕಿಗಾಗಿ ತೀವ್ರತಮ ಹೋರಾಟ

(7ನೇ ಪುಟದಿಂದ)

"ಕಳೆದ ಮಹಾಯುದ್ಧದಲ್ಲಿ ನಾವು ಅನೇಕ ಪ್ರಾಮಾಣಿಕ ಸಂಗಾತಿಗಳನ್ನು ಕಳೆದುಕೊಂಡೆವು. ಯುದ್ಧ ಮುಗಿಸಿ ಹಿಂತಿರುಗಿ ಬರುತ್ತಿರುವಾಗ ನಾವು ಅಳುತ್ತಿರುವ ತಾಯಂದಿರನ್ನು, ವಿಧವೆಯರನ್ನ, ಅನಾಥ ಮಕ್ಕಳನ್ನ ಕಂಡೆವು. ಆಗ ನನ್ನೆದೆ ತಲ್ಲಣಿಸಿತು. ಇನ್ನೆಂದೂ ಮತ್ತೊಂದು ಯುದ್ಧ ಬೇಡ ಎಂದು ನಾನು ಖಂಡಿತವಾಗಿ ಹೇಳುತ್ತೇನೆ"

ಇದು ಎಲ್ಲ ಪ್ರಾಮಾಣಿಕ ಜನತೆಯ ಅಭಿಪ್ರಾಯವೂ ಆಗಿದೆ. ರಷ್ಯಾದ ಮಹಾನ್ ಲೇಖಕ ದಿವಂಗತ ಟಾಲ್‌ಸ್ಟಾಯ್ "ಮನುಷ್ಯನ ಮೂಲ ಭೂತ ವಿಚಾರಧಾರೆ ಮತ್ತು ಪ್ರಕೃತಿಗಳಿಗೇ ವಿರುದ್ಧವಾದುದು 'ಯುದ್ಧ'" ಎಂದಿದ್ದಾರೆ.

ಐನ್‌ಸ್ಟೀನ್--ರಸೆಲ್ ಭವಿಷ್ಯವಾಣಿ

ಮೂರನೇ ಮಹಾ ಯುದ್ಧವಾದರೆ ಮುಂದೆ ಏನಾಗಬಹುದು ?

ಒಮ್ಮೆ ಅಣು ಸಮರ ಆರಂಭವಾದರೆ ಇಡೀ ಭೂಮಂಡಳದಲ್ಲಿ ಬೆಂಕಿ ಹತ್ತಿಕೊಳ್ಳುತ್ತದೆ. ಸುಡುವ ನಗರಗಳು, ಮರಗಿಡಗಳು, ಮಾನವ ನಿರ್ಮಿತ ಮನೆಗಳು-ವಸ್ತುಗಳು, ಇವು ಉರಿಯುತ್ತಿರುವಾಗ ಬೃಹತ್ ಮೋಡಗಳು ಸೃಷ್ಟಿಯಾಗಿ ಸೂರ್ಯನ ಬೆಳಕನ್ನು ತಡೆಯುವುದರಿಂದ, ಅಸಾಧ್ಯ ನ್ಯೂಕ್ಲಿಯರ್ ಚಳಿ ಆರಂಭವಾಗುತ್ತದೆ. ವಾತಾವರಣದಲ್ಲಿ ಆಮ್ಲಜನಕವಿಲ್ಲದುದರಿಂದ ಮನುಷ್ಯ ಬದುಕಿ ಉಳಿಯುವುದೇ ಕಷ್ಟ.

"ಯುದ್ಧದಲ್ಲಿ ಅಣು ಬಾಂಬು ಉಪಯೋಗಿಸಿದರೆ ಇಡೀ ಮಾನವ ಕುಲ ನಾಶವಾಗುತ್ತದೆ" ಎಂದು ಪರಮಾಣು ವಿಜ್ಞಾನಿ ಐನ್‌ಸ್ಟೀನ್ ಮತ್ತು ಪ್ರಖ್ಯಾತ ದಾರ್ಶನಿಕ ಬರ್ಟ್ರೆಂಡ್ ರಸೆಲ್ ಅವರು ಊಹಿಸಿದ್ದು ಇಂಥ ಭವಿಷ್ಯವನ್ನೇ ಇರಬೇಕು.

ಪರ್ಶಿಂಗ್ ಮತ್ತು ಕ್ರೂಯಿಸ್ ಕ್ಷಿಪಣಿಗಳನ್ನು ಬ್ರಿಟನ್ನಿನ ಗ್ರೀನ್ ಹ್ಯಾಮ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ಇಳಿಸಿದುದು "ಪಶ್ಚಿಮ ಯೂರೋಪು ದೇಶಗಳ ರಕ್ಷಣೆಗಾಗಿ" ಎಂಬ ನೆಪವನ್ನು ಅಮೆರಿಕ ಒಡ್ಡಿದೆ. ಆ ದೇಶಗಳ ಮೇಲೆ ಯುದ್ಧ ಸಾರಿದವರಾದರೂ ಯಾರು ? ರಕ್ಷಣೆ ಹೋಗಲಿ, ಇಂಥ ಕ್ಷಿಪಣಿಗಳನ್ನಿರಿಸಿಕೊಳ್ಳುವುದು ತಮ್ಮ ದೇಶಕ್ಕೇ ಅಪಾಯ, ಎಂದು ಈ ರಾಷ್ಟ್ರಗಳಿಗೆ ಯಾಕೆ ಹೊಳೆಯುತ್ತಿಲ್ಲ ?

ಈ ದೇಶಗಳ ಸರ್ಕಾರಗಳು ತಮ್ಮ ದೇಶದ ಜನರ ಅಭಿಮತಕ್ಕೆ ವಿರುದ್ಧವಾಗಿ, ಯೂರೋಪಿನ ಇತರ ರಾಷ್ಟ್ರಗಳ ಜನರ ಅಭಿಪ್ರಾಯಗಳಿಗೆ ವಿರುದ್ಧವಾಗಿ, ಲೋಕ ಶಾಂತಿಗೆ ವಿರುದ್ಧವಾಗಿ ಈ ಅಣ್ವಸ್ತ್ರಗಳನ್ನು ಇಳಿಸಲು ಒಪ್ಪಿಗೆ ಇತ್ತಿರುವುದು ಎಲ್ಲರಿಗೂ ವಿಸ್ಮಯವನ್ನುಂಟುಮಾಡಿದೆ. ಹಾಗಾದರೆ ಇವು ಕೂಡ ಸಮರ ಪಿಪಾಸುಗಳೆ ? ಎಂಬ ಸಂಶಯಕ್ಕೆ ಪುಟ ಕೊಟ್ಟವೆ.

ಪ್ರಪಂಚದ ಮಿಲಿಟರಿ ವೆಚ್ಚಕ್ಕಾಗಿ ಬಳಸುವ ಹಣ, ಆರೋಗ್ಯ, ವಿದ್ಯಾಭ್ಯಾಸ ಮತ್ತು ಹಸಿವು ನಿವಾರಣೆಗಾಗಿ ಬಳಸುವುದಕ್ಕಿಂತ ಹೆಚ್ಚಿನದು - ಎಂದರೆ ಎಂಥ ವಿಪರ್ಯಾಸ ! ತನ್ನ ಬುದ್ಧಿವಂತಿಕೆಯಿಂದ ಮನುಷ್ಯ ನಗರಗಳನ್ನು ಕಟ್ಟಿದ. ಕಲಾ ಮಂದಿರಗಳನ್ನು ಸೃಷ್ಟಿ ಮಾಡಿದ. ಸಂಗೀತ, ಸಾಹಿತ್ಯ, ನೃತ್ಯಗಳನ್ನು ರೂಪಿಸಿದ. ವೈಜ್ಞಾನಿಕ ಮುನ್ನಡೆಗಳಿಂದ ಜಗತ್ತನ್ನು ಸುಂದರವಾಗಿಸಿದ ಇದೆಲ್ಲ ಇದ್ದೂ ಪ್ರಪಂಚದಿಂದ ಬಡತನ, ಹಸಿವು, ಕಾಯಿಲೆ, ಅಜ್ಞಾನ, ಇವುಗಳನ್ನು ನಿವಾರಿಸದಿದ್ದರೆ ಏನು ಸಾಧಿಸಿದ ಹಾಗಾಯಿತು ? ಮಿಲಿಟರಿ ವೆಚ್ಚಕ್ಕಾಗಿ ಬಳಸುವ ಹಣವನ್ನು ಜನ ಕಲ್ಯಾಣಕ್ಕೋಸ್ಕರ ಉಪಯೋಗಿಸುವುದು ಸಾಧ್ಯವಾಗಬಹುದಾದರೆ, ಎಲ್ಲೆಲ್ಲೂ ಶಾಂತಿ, ಸಮೃದ್ಧಿ ನೆಲೆಸುವುದಿಲ್ಲವೆ ?

ಹಿಂದಿನ ಮಹಾಯುದ್ಧಗಳಲ್ಲಿ ಅತೀವ ಸಾವು ನೋವು, ವಿನಾಶಗಳು ಸಂಭವಿಸಿದುದು ಯೂರೋಪು ಮತ್ತು ಸೋವಿಯತ್ ದೇಶಗಳಲ್ಲಿ. ಆದ್ದರಿಂದಲೇ ಅಲ್ಲಿನ ಸಾಮಾನ್ಯ ಜನರು ಯುದ್ಧದ ವಿರೋಧಿಗಳಾಗಿದ್ದಾರೆ. ಯೂರೋಪಿನಲ್ಲಿ ಅಮೆರಿಕದ ಅಣ್ವಸ್ತ್ರ ಕ್ಷಿಪಣಿಗಳು ಬಂದಿಳಿದ ಬಳಿಕ ವಿಶ್ವದ ಎಲ್ಲೆಡೆಯಲ್ಲೂ ಶಾಂತಿ ಹೋರಾಟ ಪ್ರಬಲವಾಗುತ್ತಿದೆ.

ಮಾನವನ ವಿವೇಕವೊಂದೇ ಈಗ ಮನುಷ್ಯ ಕುಲವನ್ನು ಉಳಿಸುವ ಆಶಾದೀಪವಾಗಿದೆ. ಶಾಂತಿಯನ್ನು ಗಟ್ಟಿಗೊಳಿಸುವುದು ಮತ್ತು ಜನರ ರಕ್ಷಣೆ ಮಾಡುವುದು ಹೊಸ ಬಗೆಯ ಮಾರಕ ಅಣ್ವಸ್ತ್ರಗಳನ್ನು ತಯಾರಿಸುವುದರಿಂದಲ್ಲ, ಅವುಗಳನ್ನು ತೀರ ಕಡಿಮೆ ಮಟ್ಟಕ್ಕೆ ಇಳಿಸುವುದರಿಂದ, ಎಂಬ ಸತ್ಯವನ್ನು ಎಲ್ಲ ರಾಷ್ಟ್ರಗಳೂ ಮನಗಾಣಬೇಕಾಗಿದೆ.

ಸೋವಿಯತ್ ಒಕ್ಕೂಟ ಈ ದಿಸೆಯಲ್ಲಿ ಪ್ರಮುಖ ಹೆಜ್ಜೆಗಳನ್ನಿಟ್ಟಿದೆ.

ಶಾಂತಿ ರಕ್ಷಣೆ ಮತ್ತು ಶಾಂತಿಯುತ ಸಹಬಾಳ್ವೆ ಯಾವಾಗಲೂ ತನ್ನ ಪ್ರಮುಖ ವಿದೇಶೀ ನೀತಿ ಎಂದು ಪದೇ ಪದೇ ಅದು ಒತ್ತಿ ಹೇಳಿದೆ.

ತನ್ನ ರಾಷ್ಟ್ರದ ಪಶ್ಚಿಮ ಭಾಗದಲ್ಲಿ ನೆಲೆಗೊಳಿಸಲಾಗಿದ್ದ ಅಣ್ವಸ್ತ್ರ ಕ್ಷಿಪಣಿಗಳ ಸಂಖ್ಯೆಯನ್ನು ತಾನು ಇಳಿಸುವುದಾಗಿ ಏಕ ಪಕ್ಷೀಯವಾಗಿ ಆ ದೇಶ ಸಾರಿತು. (ಆದರೆ ಅಮೆರಿಕ ತನ್ನ ಕ್ಷಿಪಣಿ ಸಂಖ್ಯೆಯನ್ನು ಇಳಿಸುವುದು ಹೋಗಲಿ, ಹೊಸ ಕ್ಷಿಪಣಿಗಳನ್ನು ತಂದು ಬ್ರಿಟನ್ ಮತ್ತು ಪಶ್ಚಿಮ ಜರ್ಮನಿಯಲ್ಲಿ ಇಳಿಸಿತು.) ತಾನೆಂದೂ ಮೊದಲು ಅಣ್ವಸ್ತ್ರ ಬಳಸುವುದಿಲ್ಲ ಎಂದು ಸೋವಿಯತ್ ಒಕ್ಕೂಟ ಹೇಳಿತು. ಕ್ರಮೇಣ ಅಣ್ವಸ್ತ್ರಗಳನ್ನು ಕಡಿಮೆಮಾಡಿ ನಿಶ್ಶಸ್ತ್ರೀಕರಣಕ್ಕೆ ಸಂಬಂಧಿಸಿದ ಯಾವ ಮಾತುಕತೆಗಳಿಗೂ ತಾನೂ ಸಿದ್ಧ ಎಂದು ಆ ದೇಶ ಘೋಷಿಸಿದೆ. ಯುದ್ಧವನ್ನು ತಪ್ಪಿಸಿ ಶಾಂತಿಯನ್ನು ಉಳಿಸುವುದರ ಮೂಲಕ, ಇವತ್ತಿನ ಹಾಗೂ ನಾಳೆಯ ಪೀಳಿಗೆಗಳಿಗೆ ನೆರವಾಗಬೇಕು ಎನ್ನುವುದು ಅದರ ಆಸೆ.

ಶಾಂತಿ ಚಳವಳಿ

ಶಾಂತಿಗಾಗಿ ಬೃಹತ್ ಪ್ರದರ್ಶನಗಳು ಮತ್ತು ಸಭೆಗಳಲ್ಲದೆ, 'ಅಂಚೆ ಮೂಲಕ ಶಾಂತಿಗಾಗಿ ಮೊರೆ' ಎಂಬ ಹೊಸ ಹೋರಾಟ ಸೋವಿಯತ್ ಒಕ್ಕೂಟದಲ್ಲಿ ಆರಂಭವಾಗಿದೆ. ಇದು ಸೋವಿಯತ್ ಯುವಜನತೆ ಯುದ್ಧ ವಿರೋಧಕ್ಕಾಗಿ ಬಳಸಿಕೊಂಡ ಚಳವಳಿ. ಯುವಜನ ಪತ್ರಿಕೆಯಲ್ಲಿ ವಿಫಲವಾಗಿ ಶಾಂತಿ ಅಂಚೆ ಕಾರ್ಡುಗಳು ಪ್ರಕಟವಾಗಿವೆ. ಯಾರು ಬೇಕಾದರೂ ಅವನ್ನು ಕತ್ತರಿಸಿಕೊಂಡು ಸಂದೇಶ ಬರೆದು ರಾಷ್ಟ್ರಗಳ ಮುಖ್ಯಸ್ಥರಿಗೆ ಕಳಿಸಬಹುದು. ಕಳೆದ ವರ್ಷ ಈ ಆಂದೋಲನದಲ್ಲಿ ತೊಂಭತ್ತು ಮಿಲಿಯಕ್ಕೂ ಹೆಚ್ಚು ಸೋವಿಯತ್ ಯುವ ಜನರು ಭಾಗವಹಿಸಿದುದೊಂದು ವಿಶೇಷ.

ಇಂದು ಜಗತ್ತಿನ ಎಲ್ಲ ವಿಚಾರವಂತ ಜನರ ಮೇಲೆ ವಿಶೇಷ ಜವಾಬ್ದಾರಿ ಬಿದ್ದಿದೆ. ಅದು "ಶಾಂತಿ ಮತ್ತು ಬದುಕಿನ ರಕ್ಷಣೆ; ಯುದ್ಧ ನಿಷೇಧ ಹಾಗೂ ಮಾನವ ನಾಗರೀಕತೆಯನ್ನು ಕಾಪಾಡುವಿಕೆ". ಜಾತಿ, ಮತ, ಧರ್ಮ, ರಾಜಕೀಯ ಭಿನ್ನಾಭಿಪ್ರಾಯಗಳು, ಕರಿಯ-ಬಿಳಿಯ ವ್ಯತ್ಯಾಸಗಳು, ಬಡವ ಬಲ್ಲಿದ ಭೇದಗಳು, ಇವನ್ನೆಲ್ಲ ಮರೆತು ಶಾಂತಿಗಾಗಿ ಜನರು ಬೃಹತ್ ಪ್ರಮಾಣದಲ್ಲಿ ಒಗ್ಗೂಡಬೇಕಾಗಿದೆ. ಈ ಶಾಂತಿ ಚಳವಳಿ ಈಗಾಗಲೇ ಜಗತ್ತಿನ ಅನೇಕ ಕಡೆಗಳಲ್ಲಿ ಶಕ್ತಿ ಸಂಚಯಿಸಿಕೊಳ್ಳುತ್ತಿರುವುದು ಶುಭ ಸೂಚನೆ.

1983 ರಲ್ಲಿ ಮಾರ್ಚ್‌ನಲ್ಲಿ ದೆಹಲಿಯಲ್ಲಿ ನಡೆದ ಆಲಿಪ್ತರ ಸಮ್ಮೇಳನ ಶಾಂತಿಯನ್ನು ಪ್ರತಿಪಾದಿಸಿದ್ದು ಬಹು ದೊಡ್ಡ ಹೆಜ್ಜೆ. ಅನಂತರ ಅಮೆರಿಕದಲ್ಲೇ ಯುದ್ಧ ವಿರೋಧೀ ಕೂಗು ಭಾರೀ ಪ್ರಮಾಣದಲ್ಲಿ ಎದ್ದಿತು. ಲಾಸ್ ಏಂಜಲಿಸ್‌ನಲ್ಲಿ ಹಾಲಿವುಡ್ ಚಿತ್ರ ತಾರೆಯರು "ಶಾಂತಿಗಾಗಿ ಮತ್ತು ನಿಶ್ಶಸ್ತ್ರೀಕರಣಕ್ಕಾಗಿ" ಪ್ರಚಂಡ ಪ್ರದರ್ಶನ ನಡೆಸಿದರು. 83ರ ಅಕ್ಟೋಬರಿನಲ್ಲಿ ವಾಷಿಂಗ್‌ಟನ್‌ನ ಲಾಫಯೆಟ್ ವೃತ್ತದಲ್ಲಿ ದಶಲಕ್ಷ ಗಟ್ಟಲೆ ಕಾರ್ಮಿಕರು, ಗಂಡಸರು ಮತ್ತು ಮಹಿಳೆಯರು ಭಾರೀ ಪ್ರದರ್ಶನ ನಡೆಸಿದರು, ಶ್ವೇತ ಭವನದ ಸುತ್ತ ಮಾನವ ಸರಪಳಿ ನಿರ್ಮಿಸಿ ಕ್ಷಿಪಣಿಗಳ ವಿರುದ್ಧ ಪ್ರತಿಭಟಿಸಿ ಶಾಂತಿ ಘೋಷ ಕೂಗಿದ್ದೊಂದು ವಿಶೇಷ.

1983 ರ ಜೂನ್‌ನಲ್ಲಿ ಜೆಕೊಸ್ಲೊವಾಕಿಯಾದ ರಾಜಧಾನಿ ಪ್ರಾಗ್‌ನಲ್ಲಿ "ಅಣು ಯುದ್ಧದ ವಿರುದ್ಧ ಶಾಂತಿ ಮತ್ತು ಬದುಕಿಗಾಗಿ" ಎಂಬ ಜಾಗತಿಕ ಸಮಾವೇಶ ನಡೆಯಿತು. ಇದರಲ್ಲಿ ಪ್ರಪಂಚದೆಲ್ಲೆಡೆಗಳಿಂದ ಬಂದ ಸುಮಾರು 3000 ಜನರು ಪಾಲ್ಗೊಂಡಿದ್ದರು. ಆಗ ವಿಶ್ವ ಶಾಂತಿ ಸಮಿತಿ ಹೇಳಿತು:

"ಪ್ರಪಂಚದ ಯಾವ ಭಾಗದಲ್ಲೂ ಅಣ್ವಸ್ತ್ರ ಕ್ಷಿಪಣಿಗಳಿರಕೂಡದು, ಎಲ್ಲ ಯುದ್ಧಗಳನ್ನು ಕೊನೆಗಾಣಿಸಲು ನಾವು ಬದ್ಧರಾಗಿದ್ದೇವೆ. ಯುದ್ಧವಾದರೆ ಪ್ರಪಂಚದಲ್ಲಿ ಏನೂ ಉಳಿಯುವುದಿಲ್ಲ. ಆದ್ದರಿಂದ ಬದುಕು ವಿಜಯಿಯಾಗಬೇಕು. ಆ ಬದುಕನ್ನು ಉಳಿಸಲು ನಾವು ಸಂಘಟಿತ ಹೋರಾಟ ಮಾಡುತ್ತೇವೆ" ನಮಗೆ ಬೇಕಾಗಿರುವುದು ಶಾಂತಿ, ಸ್ವಾತಂತ್ರ್ಯ ಮತ್ತು ಸಮೃದ್ಧತೆ.

1980 ರಿಂದಲೇ ಐರೋಪ್ಯರು ಶಾಂತಿಗಾಗಿ ಚಳವಳಿ ನಡೆಸುತ್ತಿದ್ದಾರೆ. ಲಂಡನ್, ಪ್ಯಾರಿಸ್, ರೋಮ್, ಬ್ರಸೆಲ್ಸ್, ಬಾನ್, ಹೆಲ್ಸಿಂಕಿಗಳಂತಹ ಮಹಾನಗರಗಳಲ್ಲಿ ಜನಸ್ತೋಮ ಬೃಹತ್ ಪ್ರದರ್ಶನಗಳನ್ನು ನಡೆಸಿದೆ.

ಶಾಂತಿ ಮಹಿಳೆಯರು

ಬ್ರಿಟನ್ನಿನ ಗ್ರೀನ್‌ಹ್ಯಾಮ್ ಮಹಿಳೆಯರು ಸುಮಾರು ಎರಡು ವರ್ಷಗಳಿಂದ ಸತತವಾಗಿ ಶಾಂತಿಗಾಗಿ ಹೋರಾಡುತ್ತಿದ್ದಾರೆ. ಇವರನ್ನು 'ಶಾಂತಿ ಮಹಿಳೆಯರು' ಎಂದೇ ಕರೆಯಲಾಗುತ್ತಿದೆ. ಅಮೆರಿಕದ ಕ್ಷಿಪಣಿಗಳನ್ನು ಇಳಿಸಿರುವ ಗ್ರೀನ್ ಹ್ಯಾಮ್ ಕಾಮನ್ ಎಂಬ ಜಾಗದ ಬೇಲಿಯ ಸುತ್ತ ಈ ಮಹಿಳೆಯರು ಠಿಕಾಣಿ ಹೂಡಿದ್ದಾರೆ, ಅನೇಕರು ತಮ್ಮ ಮಕ್ಕಳು ಮರಿಗಳೊಂದಿಗೆ ಅಲ್ಲಿಯೇ ವಾಸಿಸುತ್ತಿದ್ದಾರೆ. ಹಲವರು ಕತ್ತರಿಗಳನ್ನು ತಂದು ಬೇಲಿಯನ್ನು ಕತ್ತರಿಸಲು ಪ್ರಯತ್ನಿಸಿ ಬಂಧನಕ್ಕೊಳಗಾಗಿದ್ದಾರೆ. ಇವರೆಲ್ಲರ ಅಡುಗೆ, ಊಟ, ನಿದ್ದೆ ಎಲ್ಲವೂ ಈ ಬೇಲಿಯ ಸುತ್ತಲಿರುವ ಬಯಲಿನಲ್ಲಿ ಎಂದರೆ ಅವರ ಹಟಮಾರಿತನ ಹಾಗೂ ಧೈರ್ಯಗಳ ಕಲ್ಪನೆ ನಮಗಾಗುತ್ತದೆ. ಬ್ರಿಟನ್ನಿನಲ್ಲೋ ಹೊರಗೆ ಕೊರೆಯುವ ಚಳಿ ಮತ್ತು ಹಿಮಪಾತ. ಇಂಥ ಹವಾಮಾನವೂ ಮಹಿಳೆಯರ ಹೋರಾಟವನ್ನು ಕಳೆಗುಂದಿಸಿಲ್ಲ. ಬ್ರಿಟನ್ನಿನ ಸರಕಾರದವರು ಇವರಿಗೆ ವಿವಿಧ ಬಗೆಯ ಹಿಂಸೆ ಕೊಟ್ಟರು. ಅವರು ವಾಸಿಸುತ್ತಿದ್ದ ಟೆಂಟ್‌ಗಳನ್ನು ಕಿತ್ತುಕೊಂಡು ಹೋದರು. 'ಅತಿಕ್ರಮ ಪ್ರವೇಶ' ಎಂದು ಅವರನ್ನು ಜೈಲಿಗೆ ಹಾಕಿದರು. ಆದರೆ ಹೀಗೆ ಖಾಲಿ ಯಾದ ಜಾಗಕ್ಕೆ ಯೂರೋಪಿನ ಎಲ್ಲೆಡೆಗಳಿಂದ ಮಹಿಳಾ ಸತ್ಯಾಗ್ರಹಿಗಳು ಬಂದು ಸೇರಿಕೊಳ್ಳುತ್ತಲೇ ಇದ್ದಾರೆ. ವೇಲ್ಸಿನ ಒಬ್ಬ ಮಹಿಳಾ ಸತ್ಯಾಗ್ರಹಿ ಹೀಗೆಂದಳು:

"ಏನು ಮಾಡಿದರೂ ನಾವು ಹೋಗೋದಿಲ್ಲ. ನಮ್ಮ ಟೆಂಟ್‌ಗಳನ್ನ ಬೇಕಾದ್ರೆ ಅವರು ತಕೊಂಡು ಹೋಗಲಿ, ನಾವು ಈ ಬಯಲಿನಲ್ಲೇ ಮಲಗ್ತೇವೆ. ಮಳೆ ಬಂದಾಗ, ಹಿಮ ಬಿದ್ದಾಗ ಕಷ್ಟವಾಗ್ತದೆ ನಿಜ, ಆದರೆ ನಮಗೆ ಸಾಧಿಸಬೇಕಾದ ಮಹತ್ತಾದ ಕೆಲಸವಿದೆ ಎಂದಿನವರೆಗೆ ಕ್ಷಿಪಣಿಗಳು ಅಲ್ಲಿರುತ್ತವೋ ಎಲ್ಲಿನವರೆಗೆ ಪ್ರಜಾಪ್ರಭುತ್ವ ಇರುತ್ತದೋ ಅಲ್ಲಿಯವರೆಗೆ ನಾವು ಈ ಜಾಗದಲ್ಲೇ ಇರುತ್ತೇವೆ."

ಪಶ್ಚಿಮ ಜರ್ಮನಿಯಲ್ಲಿ ಇನ್ನೊಂದು ದಾಖಲೆಯಾಯಿತು. ಸ್ಟುಟ್ ಗರ್ಟ್‌ನಲ್ಲಿ ಎರಡೂವರೆ ಲಕ್ಷ ಜನರು ಒಬ್ಬರ ಕೈ ಒಬ್ಬರು ಹಿಡಿದು ಕೊಂಡು ಕ್ಷಿಪಣಿ ನೆಲೆ ಸ್ಥಾಪಿಸುತ್ತಿರುವ ನೆವ್ ಉಲ್ಮ್ ಎಂಬಲ್ಲಿಗೆ ಇರುವ 108 ಕಿಲೋ ಮೀಟರ್ ದೂರ ಉದ್ದದ ಸರಪಳಿಯಾಗಿ ನಿಂತರು.

ಹಾಗೆಯೇ ಭಾರತದಲ್ಲೂ 'ಶಾಂತಿ ದಿನಾಚರಣೆ'ಗಳು ಏರ್ಪಟ್ಟವೆ. ದೆಹಲಿ, ಕಲ್ಕತ್ತ, ತಿರುವನಂತಪುರಗಳಲ್ಲಿ ಬೃಹತ್ ರ್‍ಯಾಲಿಗಳು ನಡೆದುವು. ಆದರೆ ಬೇರೆ ಪ್ರದೇಶಗಳಲ್ಲಿ ಈ ಚಳವಳಿ ಅಷ್ಟು ತೀವ್ರವಾಗಿಲ್ಲ. ಯುದ್ಧದ ಭೀತಿಯನ್ನು ಅಷ್ಟಾಗಿ ಅರಿಯದ ಭಾರತದಲ್ಲಿ ಈ ಚಳವಳಿ ಅಷ್ಟು ಪ್ರಖರವಾಗಿಲ್ಲದಿರುವುದು ಸಹಜವೇ ಆಗಿದೆ.

ಆದರೆ ಜಾಗತಿಕ ಶಾಂತಿಯ ಬಗ್ಗೆ ಕಳಕಳಿಯಿರುವ ಎಲ್ಲ ಜನರೂ ಈಗ ಒಟ್ಟಾಗಿ ಸೇರಿ, ಯುದ್ಧವನ್ನು ಈ ಪ್ರಪಂಚದಿಂದಲೇ ಹೊಡೆದೋಡಿಸಬೇಕಾದ ಪಣ ತೊಡಬೇಕಾಗಿದೆ. ನಾವು ಮತ್ತು ನಮ್ಮ ಮಕ್ಕಳು ಸಂತೋಷ ಮತ್ತು ತೃಪ್ತಿಯಿಂದ ಬದುಕಬೇಕಾದರೆ ಸಮರ ದುಸ್ಸಾಧ್ಯವಾಗಬೇಕು. ಲೋಕದ ಜನರೆಲ್ಲರ ಒಕ್ಕೊರಲಿನ ಈ ಬಯಕೆಗೆ ಬಲಿಷ್ಠ ರಾಷ್ಟ್ರಗಳು ಮಣಿಯಲೇ ಬೇಕು. ಅಲ್ಲಿಯವರೆಗೆ ಈ ಶಾಂತಿ ಚಳವಳಿಯನ್ನು ಜೀವಂತವಾಗಿ, ಬೆಚ್ಚಗಿರಿಸುವ ಹೊಣೆ ನಮ್ಮೆಲ್ಲರದು.

★

ಎಡರಂಗ ಸರಕಾರ ಕಾರ್ಮಿಕ ವರ್ಗದ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಸದಾ ಜಾಗರೂಕವಾಗಿದೆ.

ಚಾಂತ್ರಿಕ ಮೇ ದಿನದಂದು, ಎಡರಂಗ ಸರಕಾರ ಕಾರ್ಮಿಕ ವರ್ಗಕ್ಕೆ ಬೆಂಬಲವಾಗಿ ನಿಲ್ಲುತ್ತೇನೆಂಬ ತನ್ನ ಪ್ರತಿಜ್ಞೆಯನ್ನು ಪುನರುಚ್ಚರಿಸುತ್ತದೆ.

1977 ರಲ್ಲಿ ಎಡರಂಗ ಸರಕಾರ ಆರಂಭಗೊಂಡಂದಿನಿಂದ ಅದು ಶ್ರಮ ಜೀವಿ ಜನತೆಯ ಹಿತಾಸಕ್ತಿಗಳನ್ನು ಎತ್ತಿಹಿಡಿದಿದೆ. ಸರಕಾರ ಕಾರ್ಮಿಕ ಸಂಘಟನೆಯ ಹಕ್ಕುಗಳನ್ನು ಹಾಗೂ ಅಡೆತಡೆಯಿಲ್ಲದ ಕಾರ್ಮಿಕ ಸಂಘಟನೆಯ ಆಂದೋಲನದ ಕಾನೂನು ಬದ್ಧ ಸ್ವರೂಪಗಳನ್ನು ಪ್ರೋತ್ಸಾಹಿಸಲು ಮತ್ತು ಧೃಢಪಡಿಸಲು ಪ್ರಯತ್ನಿಸಿದೆ. ಈ ವಿಷಯಗಳಲ್ಲಿ ಪೋಲೀಸ್ ಮಧ್ಯ ಪ್ರವೇಶಗಳನ್ನೂ ನಿಲ್ಲಿಸಲಾಯಿತು. ಇದರಿಂದಾಗಿ ಕಾರ್ಮಿಕರು ಆತ್ಮಭರವಸೆ ಮತ್ತು ಆತ್ಮಗೌರವ ಗಳಿಸಿಕೊಂಡರು. 1972 ರಿಂದ 1977 ನಡುವೆ ಕಾರ್ಮಿಕ ವಿರೋಧಿ ನೀತಿಯಿಂದಾಗಿ ಕೆಲಸ ಕಳಕೊಂಡವರಲ್ಲಿ ಸುಮಾರಾಗಿ ಎಲ್ಲರಿಗೂ ಎಡರಂಗ ಸರಕಾರ ಮತ್ತೆ ಕೆಲಸ ಕೊಟ್ಟಿತು ರಾಜ್ಯದಲ್ಲಿ ಬೇರೆ ಸರಿಸಾಟಿಯಿಲ್ಲದಂತಹ ಮಟ್ಟದ ವರೆಗೆ ತಮ್ಮ ಸುಯೋಗ್ಯ ಬೇಡಿಕೆಗಳನ್ನು ಚಹಾ, ಸೆಣಬು ಮತ್ತು ಇಂಜಿನಿಯರಿಂಗ್ ಕೈಗಾರಿಕೆಗಳ ಕಾರ್ಮಿಕರು ಮತ್ತು ಕೂಲಿಗಾರರು ಪಡೆದರು ಸಮರಸ ಪೂರ್ಣ ಕೈಗಾರಿಕಾ ಬಾಂಧವ್ಯ ಕಾಪಾಡಲು ವ್ಯಾಪಕ ತಳಹದಿಯ ತ್ರಿಪಕ್ಷೀಯ ಮತ್ತು ದ್ವಿಪಕ್ಷೀಯ ಸಂಸ್ಥೆಗಳನ್ನು ಪುನರುಜ್ಜೀವನಗೊಳಿಸಲಾಯಿತು. ಮತ್ತು ಸಾಮೂಹಿಕ ಚೌಕಾಶಿಗೆ ಪ್ರೋತ್ಸಾಹ ದೊರೆಯಿತು ಕೈಗಾರಿಕಾ ವಿವಾದಗಳ ಸಂಖ್ಯೆ ತೀವ್ರಗತಿಯಲ್ಲಿ ಇಳಿಯಿತು. ಮಹತ್ವ ಪೂರ್ಣ ಕಾರ್ಮಿಕ ಕಾನೂನುಗಳನ್ನು ತಿದ್ದುಪಡಿಗೊಳಿಸಿ ಕಾರ್ಮಿಕರಿಗೆ ಉತ್ತಮ ರೀತಿಯ ಪರಿಹಾರ, ರಕ್ಷಣೆ ಮತ್ತು ಇತರ ಸಾಮಾಜಿಕ ಭದ್ರತಾ ಕ್ರಮಗಳು ದೊರಕುವಂತಾಯಿತು. ಕನಿಷ್ಟ ಕೂಲಿಯನ್ನು, ವಿಶೇಷವಾಗಿ ಗ್ರಾಮಾಂತರ ಕೂಲಿಗಾರರ ಕನಿಷ್ಟ ಕೂಲಿಯನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಯಿತು.

ಹಲವು ಮಿತಿಗಳಿದ್ದರೂ ಎಡರಂಗ ಸರಕಾರ ಕಾರ್ಮಿಕ ವರ್ಗದ ಹಕ್ಕುಗಳನ್ನು ರಕ್ಷಿಸಲು ನಿರಂತರ ಹೋರಾಟ ನಡೆಸುತ್ತಿದೆ ಹೀಗೆ ಹೋರಾಟ ನಡೆಸಿ ರಾಜ್ಯದಲ್ಲಿ ಅದು ಒಂದು ಹೊಸದಾದ ಹಾಗೂ ಸುಧಾರಿತ ಕೈಗಾರಿಕಾ ವಾತಾವರಣವನ್ನು ನಿರ್ಮಿಸಿದೆ. ನಮ್ಮ ದುಡಿಯುವ ಜನತೆಗೆ ಒಂದು ಉತ್ತಮವಾದ, ಹೆಚ್ಚು ಸಮೃದ್ಧವಾದ ಭವಿಷ್ಯತ್ತಿನ ಸ್ಫೂರ್ತಿ ನೀಡುವ ವಾತಾವರಣ ಇದು.



TYPICA 866/84

ಎಡ್ದೇಳಿ, ಗುರಿಸಾಧನೆಗೆ ಒಂದಾಗಿ ಮುಂದೆ ಸಾಗೋಣ

(1 ನೇ ಪುಟದಿಂದ)
ಕೊರೆಡಿಸಬೇಕೆಂದು ಒತ್ತಾಯಿಸಲು ರಾಜ್ಯದ್ಯಂತ ಸೌಹಾರ್ದತಾ ದಿನಾಚರಣೆ ಆಚರಿಸಲಾಯಿತು. ಯುದ್ಧವನ್ನು ವಿರೋಧಿಸಲು-ಶಾಂತಿ ನೆಲೆಸಲು ಸೆಪ್ಟೆಂಬರ್ 1 ರಿಂದೂ, ಡಿಸೆಂಬರ್ 21 ರಿಂದ 18 ರವರೆಗೂ (1983) ಯುದ್ಧ ವಿರೋಧಿ ದಿನಾಚರಣೆ ಆಚರಿಸಲಾಯಿತು.

ಹೋದ ವರ್ಷ ಆಗಸ್ಟ್ ತಿಂಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಸಿ.ಐ.ಟಿ.ಯು ಆದೇಶದಮೇರೆಗೆ ಬೆಲೆಯೇರಿಕೆ ವಿರುದ್ಧ, ಆಹಾರ ಧಾನ್ಯಗಳ ಯೋಗ್ಯ ವಿತರಣೆಯ ಸಲುವಾಗಿಯೇ ಹತ್ತು ಸಾವಿರಕ್ಕೆ ಮೇಲ್ಪಟ್ಟ ಕಾರ್ಮಿಕರು ಅವರಲ್ಲಿ ಬಹು ಸಂಖ್ಯೆ ಮಹಿಳೆಯರು-ಮಳೆಯಲ್ಲಿ ತೋಯಿಸಿ ಕೊಂಡೇ ಸತ್ಯಾಗ್ರಹ ಮಾಡಿ ಬಂಧನಕ್ಕೊಳಗಾದರು.

ರಾಜ್ಯ ಮಟ್ಟದ ಹತ್ತಿ ಬೆಳೆಗಾರರ ಸಮ್ಮೇಳನ, ಜಿಲ್ಲಾ ಮಟ್ಟದಲ್ಲಿ ರೈತರ ಬೇಡಿಕೆಗಳ ಸಲುವಾಗಿ ಹಲವಾರು ಚಳುವಳಿ-ಮುತ ಪ್ರದರ್ಶನಗಳು ನಡೆದಿವೆ ಕೃಷಿ ಕಾರ್ಮಿಕರೂ ಬಡ ರೈತರೂ ಸರಕಾರಿ, ಹೆಚ್ಚುವರಿ ಭೂಮಿ ಪಡೆಯಲು ಚಳುವಳಿ ನಡೆಸಿ ಯಶಸ್ವಿಯಾಗಿದ್ದಾರೆ. ಮನೆಯಿಲ್ಲದವರು ನಿವೇಶನಕ್ಕಾಗಿ ಹುಬ್ಬಳ್ಳಿ-ಧಾರವಾಡ, ದಕ್ಷಿಣ ಕನ್ನಡ ಜಿಲ್ಲೆ, ಬೆಂಗಳೂರು ಬಿಜಾಪುರಗಳಲ್ಲಿ ಸಮಾವೇಶ ನಡೆಸಿ ಹೋರಾಟಕ್ಕಿಳಿದಿದ್ದಾರೆ. ರಾಜ್ಯದ್ಯಂತ ಸಂಘಟನೆ ಬೆಳೆದು ಬಾರದಿರುವುದರಿಂದ ಇಂಥ ಹೋರಾಟಗಳನ್ನು ಇನ್ನೂ ಹೆಚ್ಚು ಪ್ರಭಾವಿತವಾಗಿ ನಡೆಸಲು ಸಾಧ್ಯವಾಗುತ್ತಿಲ್ಲ.

ರಾಜ್ಯದಲ್ಲಿ ಜನತಾ ಸರಕಾರ ಅಧಿಕಾರದಲ್ಲಿದ್ದರೂ ಕೂಡ ಕಾರ್ಮಿಕರ ಸಮಸ್ಯೆಗಳನ್ನು ಜನವಿಭಾಗದ ಇತರ ಸಮಸ್ಯೆಗಳನ್ನೂ ಬಗೆಹರಿಸುವಲ್ಲಿ ವಿಫಲವಾಗಿದೆ. ಕಾಂಗ್ರೆಸ್ಸಿನ ಬಂಡವಳ ಶಾಹಿ ಪರ ನೀತಿಯನ್ನೇ ಅದು ಅನುಸರಿಸುತ್ತಿದೆ.

ರಾಜ್ಯದಲ್ಲಿ ಸಿ. ಪಿ. ಐ. (ಎಂ), ಸಿ. ಪಿ. ಐ. ಬಿಟ್ಟರೆ ಬೇರೆ ಎಡ ಶಕ್ತಿಗಳಿಲ್ಲ. ಕಾಂಗ್ರೆಸ್ ವಿರೋಧಿ ಚಳುವಳಿಗಳಲ್ಲಿ ಜನತಾ ಪಕ್ಷ ಪರಿಣಾಮಕಾರಿಯಾಗಿ ಭಾಗವಹಿಸುತ್ತಿಲ್ಲ. ಆದ್ದರಿಂದ ಸಿ. ಪಿ. ಐ. (ಎಂ), ಸಿ. ಐ. ಟಿ. ಯು, ಪ್ರಾಂತ ರೈತ ಸಂಘ, ವಿದ್ಯಾರ್ಥಿ ಫೆಡರೇಶನ ಯುವ ಜನ ಫೆಡರೇಶನಗಳ ಮೇಲೆ ಹೆಚ್ಚಿನ ಜವಾಬ್ದಾರಿಬಿದ್ದಿದೆ. ಸಂಘಟಿತ ಕಾರ್ಮಿಕರಿಗೆ ಸರಿಯಾದ ಮಾರ್ಗದರ್ಶನ ನೀಡಿ ಹೋರಾಡುವುದು, ಅಸಂಘಟಿತ ಕಾರ್ಮಿಕರನ್ನು ಕೃಷಿ ಕಾರ್ಮಿಕರನ್ನೂ ಬಡ ರೈತರನ್ನೂ ಸಂಘಟಿಸುವುದು, ಬಲಿಷ್ಠವಾದ ವಿದ್ಯಾರ್ಥಿ ಯುವಜನ ಫೆಡರೇಶನ್ ಕಟ್ಟಿ ಹೋರಾಡುವುದು ಸರ್ವೇ ಸಾಮಾನ್ಯ ಜನರ ಸಮಸ್ಯೆಗಳನ್ನರಿತು ಅವುಗಳಿಗಾಗಿ ಚಳುವಳಿ ಮಾಡುವುದು, ಅವರೆಲ್ಲರಲ್ಲಿ ರಾಜಕೀಯ ಪ್ರಜ್ಞೆಯನ್ನುಂಟು ಮಾಡಿ, ಬಂಡವಳ ಶಾಹಿ ಸಮಾಜವನ್ನು ನಿರ್ನಾಮ ಮಾಡಿ ಸಮಾಜವಾದಿ, ಸಮಾಜ ಕಟ್ಟಲಿಕ್ಕೆ, ಅದಕ್ಕೆ ಸಹಾಯವಾಗುವಂತೆ ಎಡ ಮತ್ತು ಪ್ರಜಾಪ್ರಭುತ್ವ ರಂಗ ರಚಿಸಿ, ಇಂದಿರಾ ಕಾಂಗ್ರೆಸ್ಸನ್ನು ಸೋಲಿಸಲಿಕ್ಕೆ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿಯನ್ನು ಬಲಗೊಳಿಸಲಿಕ್ಕೆ, ಶಕ್ತಿಯುತ ಮಾಡಲಿಕ್ಕೆ ಕ್ರಮಕೈಗೊಳ್ಳುವುದು ತುರ್ತಿನ ಕ್ರಮವಾಗಿ ಬರುವುದು ಅತ್ಯಗತ್ಯ.

ಕಳೆದ ಒಂದು ವರ್ಷದಲ್ಲಿ ಸಿಐಟಿಯು ಪ್ರಾಂತ ರೈತ ಸಂಘ, ವಿದ್ಯಾರ್ಥಿ ಯುವಜನ ಫೇಡರೇಶನಿನ ಚಟುವಟಿಕೆಗಳೂ ಹೋರಾಟಗಳೂ, ಪ್ರಶಂಸನೀಯವಾಗಿ ಬೆಳೆದು ಬಂದಿವೆ. ಇದರಿಂದ ನಾವು ಸ್ಫೂರ್ತಿ ಪಡೆದು ಮುಂದೆ ಸಾಗೋಣ. ಜನರ ಮಧ್ಯೆ ನಾವೆಲ್ಲ ಒಂದಾಗಿ ಹೊಕ್ಕು ಅವರ ಎಲ್ಲ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಹೋರಾಟ ನಡೆಸಿ ನಮ್ಮ ಸಂಘಟನೆಗಳನ್ನು ಇಮ್ಮೊ ಬಲ ಪಡಿಸೋಣ. ಅದರ ಮೂಲಕ ಮಾರ್ಕ್ಸವಾದಿ ಕಮ್ಯುನಿಸ್ಟ್ ಪಾರ್ಟಿ ಬೆಳೆಯುವಂತೆ ಮಾಡೋಣ.

ಎದ್ದೇಳಿ, ಎಡ ಮತ್ತು ಪ್ರಜಾಪ್ರಭುತ್ವ ರಂಗವನ್ನು ಬಲಪಡಿಸಿ ಸಮಾಜವಾದ ದತ್ತ ಮುಂದೆ ಸಾಗಲು ಮುಂದಾಗೋಣ. ●

ಕರ್ನಾಟಕದಲ್ಲಿ ಮಾರ್ಕ್ಸವಾದಿ ಕಮ್ಯೂನಿಸ್ಟ್ ಪಾರ್ಟಿಯ ಪಾತ್ರ

(3 ನೇ ಪುಟದಿಂದ)
ಪಡಬೇಕಾಗಿದೆ. ಇದಕ್ಕಿಂತ ಹೆಚ್ಚಾಗಿ ದುಡಿಯುವ ಜನ ವಿಭಾಗದಲ್ಲಿ ನಮ್ಮ ಪ್ರಭಾವ ಬೆಳೆದಿದೆ. ಈಗ ಎಲ್ಲ ಕ್ಷೇತ್ರಗಳಲ್ಲೂ ಪಾರ್ಟಿಯ ಪ್ರಭಾವ ಬೆಳೆದಿದೆ ಅವರ ಗಮನ ನಮ್ಮ ಕಡೆ ಹರಿದಿದೆ.

ಇತ್ತೀಚಿಗೆ ನಾವು ನಡೆಸಿದ ಕಾರ್ಮಿಕ ಹೋರಾಟಗಳು ಚಾರಿತ್ರಿಕವಾಗಿವೆ. ಬೆಂಗಳೂರಿನ ವ್ಯಕೊ ಕಾರ್ಮಿಕರ ಹೋರಾಟ ಅದಕ್ಕೆ ಬೆಂಬಲಾರ್ಥವಾಗಿ ನಡೆದ ಸಾರ್ವತ್ರಿಕ ಮುಷ್ಕರ ಮತ್ತು ಬಂದ್, ಇತರ ಹೋರಾಟಗಳು, ಚಿನ್ನದ ಗಣಿ ಕಾರ್ಮಿಕರ ಹೋರಾಟ, ಮಂಗಳೂರಿನ ಹಂಚಿನ ಕಾರ್ಮಿಕರ ಮುಷ್ಕರ, ಬೀಡಿ ಮತ್ತಿತರ ಹೋರಾಟಗಳು, ಹಂಹರ ಹುಬ್ಬಳ್ಳಿ, ದಾಂಡೇಲಿ ಕಾರ್ಮಿಕರ ಅದ್ಭುತ ಹೋರಾಟಗಳು ಇವುಗಳೆಲ್ಲ ಹೊಸ ಶಕ್ತಿಯನ್ನು ಕೊಟ್ಟಿವೆ. ಕೋಲಾರ ಚಿನ್ನದ ಗಣಿಯಿಂದ ದಾಂಡೇಲಿವರೆಗ, ಬೆಂಗಳೂರಿನಿಂದ ಮಂಗಳೂರು ವರೆಗೂ, ಮಲೆನಾಡಿನ ಕಾಫಿ ತೋಟಗಳಲ್ಲೂ ಸಿ. ಐ. ಟಿ.ಯು ಬೆಳೆದು ಬಂದಿದೆ.

1942 ರಲ್ಲಿ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಾರ್ಟಿಗಳಿದ್ದುವು. ಆ ಮೇಲೆ ಸೋಷಲಿಸ್ಟ್ ಪಾರ್ಟಿ, ಪಿ. ಎಸ್ ಪಿ, ಕಿಸಾನ್ ಮಜ್ದೂರು ಪ್ರಜಾ ಪಾರ್ಟಿ, ಸ್ವತಂತ್ರ ಪಾರ್ಟಿ ಮುಂತಾದ ಹಲವು ಪಾರ್ಟಿಗಳು ಹುಟ್ಟಿದುವು. ಇವುಗಳ ಪೈಕಿ ಕಾಂಗ್ರೆಸ್ (ಈಗ ಕಾಂಗ್ರೆಸ್) ಮತ್ತು ಕಮ್ಯೂನಿಸ್ಟ್ (ಎಡ ಮತ್ತು ಬಲ) ಪಾರ್ಟಿಗಳಷ್ಟೇ ಉಳಿದಿವೆ. ಹೆಚ್ಚಿನ ಇತರ ಪಕ್ಷಗಳು ಜನತಾದಲ್ಲಿ ಸೇರಿವೆ. ರಾಜ್ಯದಲ್ಲಿಯೂ ಇತರ ಎಡ ಪಕ್ಷಗಳೂ ಇಲ್ಲವೆನ್ನಬಹುದು.


ಈಗ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ಸೇತರ ಸರಕಾರ ರಚನೆಯಾಗಿದ್ದು ಜನತೆಯ ಹೋರಾಟಕ್ಕೆ ಹೊಸ ಅವಕಾಶಗಳು ಒದಗಿವೆ. ಇದರ ಸದುಪಯೋಗ ಪಡೆಯುವ ಕಾರ್ಯಕ್ರಮ ಇರಬೇಕು.

ಈಗಿನ ಹೊಸ ಸನ್ನಿವೇಶದಲ್ಲಿ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್ ಸರ್ವಾಧಿಕಾರವನ್ನೆದುರಿಸಿ ಹೋರಾಟ ಮಾಡುವಾಗ ಜನತಾದೊಂದಿಗೆ ಸಹಕರಿಸುವುದರ ಜೊತೆಗೆ ಕಮ್ಯೂನಿಸ್ಟ್ ಪಾರ್ಟಿ ದುಡಿಯುವ ಜನ ವಿಭಾಗಗಳನ್ನು ಸಂಘಟಿಸುವುದಲ್ಲದೆ ಇತರ ಪ್ರಜಾಸತ್ತಾತ್ಮಕ ಶಕ್ತಿಗಳನ್ನು ಬೆಳೆಸುವುದು ಅಗತ್ಯವಾಗಿದೆ. ನಮ್ಮಲ್ಲಿನ್ನೂ ಜಾತೀಯತೆ, ಕೋಮು ಭಾವನೆ, ಮೂಢನಂಬಿಕೆಗಳು ತುಂಬಿ ತುಳುಕಾಡುತ್ತಿವೆ. ನಿರುದ್ಯೋಗ ತಾಂಡವವಾಡುತ್ತಿದೆ. ಬಡತನ, ದಾರಿದ್ರ್ಯದಿಂದ ಜನ ನರಳುತ್ತಿದೆ ಈ ಭೀಕರ ಪರಿಸ್ಥಿತಿಯನ್ನೆದುರಿಸುವುದು ಯಾವದೇ ಬಂಡವಾಳಶಾಹಿ ಪಕ್ಷದಿಂದ ಸಾಧ್ಯವಿಲ್ಲ ಮುಂದಿನ ಹೋರಾಟವನ್ನು ಯಶಸ್ವಿಗೊಳಿಸಲು ಕಮ್ಯೂನಿಸ್ಟ್ ಪಾರ್ಟಿ ಬೆಳೆಯಬೇಕು. ಬಲಿಷ್ಠ ಪಾರ್ಟಿಯಿದ್ದು ಮಾರ್ಕ್ಸವಾದಿ ಸಿದ್ಧಾಂತದ ಆಧಾರದಲ್ಲಿ ಕಟ್ಟಿದ ಚಳುವಳಿಯೊಂದೇ ಈ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿದೆ. ವರ್ಗ ಜಾಗ್ರತ ಕಾರ್ಮಿಕರೇ ಮತ್ತು ರೈತರೇ ಇದಕ್ಕೆ ಮುಂದೆ ನಿಂತು ಹೋರಾಡಬೇಕು. ಇದು ಕನ್ನಡ ಜನತೆಯ ಮುಂದಿರುವ ಪ್ರಶ್ನೆ. ●

WITH BEST COMPLIMENTS FROM:

TELE | Grams : SADHOO
Phone : 23512

H. O. | Dept. : 3177
Store : 3178
Resi. : 3188
" : 3839
" : 3878



S DHOO BUILDINGS
KODIALABAIL
MANGALORE-575 003

H. O. : CANNANOR

Printed & Publishedby P. Ramachandra Raoby him on behalf of the Communist Pary of India (Marxist) Karnataka State Committee, K. V. Temple Street, Sultanpet, Bangalore-560053. Editorial and managerial office, L-56, K. V. Temple Street, Sultanpet. B-53. Phone : 24154

Editor : P. Ramachandra Rao

Managing Editor : N. K. Upadhyaya